# ಜನಶಕ್ತಿ



blog janashakthi.wordpress.com e-mail js_weekly@yahoo.com

ಸಂಪುಟ 7 ಸಂಚಿಕೆ 33–34
ಆಗಸ್ಟ್ 25, 2013




## ಕರ್ನಾಟಕದ 'ಜಲಿಯನ್ ವಾಲಾಭಾಗ್' ಗೆ 75 ವರ್ಷ



## ತೃಣಮೂಲ ಕಾಂಗ್ರೆಸಿಗರಿಂದ ಪ್ರಜಾಸತ್ತೆಯ ಕಗ್ಗೊಲೆ – ದೇಶಾದ್ಯಂತ ಪ್ರತಿಭಟನೆ


## ಲೋಕಸಭೆ ಉಪಚುನಾವಣೆ : ತಟಸ್ಥವಾಗಿರಲು ಸಿಪಿಐ(ಎಂ) ನಿರ್ಧಾರ



## ಜಾಗತಿಕ ಆರ್ಥಿಕ ಬಿಕ್ಕಟ್ಟಿಗೆ ಮಾರ್ಕ್ಸ್‌ವಾದದಲ್ಲಿದೆ ಉತ್ತರ




## ಕೊರಗ ಕುಟುಂಬಗಳಿಗೆ ದ.ಕ. ಜಿಲ್ಲಾಡಳಿತದಿಂದ ಅನ್ಯಾಯ



## ಪಂಕ್ತಿಬೇಧ ಮತ್ತು ಮಡೆಸ್ನಾನ ನಿಷೇಧಿಸಲು ವಿಳಂಬ ಯಾಕೆ?


# ಯುರೋಪಿಯನ್ ಆರ್ಥಿಕತೆಯಲ್ಲಿ ಗಂಭೀರ ಬಿಕ್ಕಟ್ಟು




ಎಂ. ರತ್ನಾಕರ ಶೆಣೈ.

'ಯುರೋಪ್' ಎಂಬುದು ಕೇವಲ ಒಂದು ಖಂಡವಲ್ಲ. ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ, ಇಟಲಿ, ಸ್ಪೈನ್‌ನಂತಹ 'ಪ್ರಬಲ' ಆರ್ಥಿಕತೆಗಳನ್ನು ಹೊಂದಿದ – 47 ದೇಶಗಳ ಕೂಟವಾದ ಯುರೋಪ್ ಖಂಡದಲ್ಲಿನ ಬೆಳವಣಿಗೆಗಳು ಭಾರತವೂ ಸೇರಿದಂತೆ ಇಡೀ ಜಗತ್ತಿನ ಮೇಲೆ ವ್ಯಾಪಕ ಪರಿಣಾಮ ಬೀರುವವಂತಹ ಪ್ರಭಾವವನ್ನು ಹೊಂದಿವೆ. ಒಂದು ಕಾಲದಲ್ಲಿ ಇಡೀ ವಿಶ್ವವನ್ನು ಯುರೋಪಿನ 'ಕಣ್ಣಿನಿಂದ' ನೋಡುವ ದೃಷ್ಟಿಕೋನವೇ ಪ್ರಬಲವಾಗಿ ಜಗತ್ತಿನೆಲ್ಲೆಡೆ ಬೇರೂರಿತ್ತು. ಇಂದು ಈ ಪ್ರವೃತ್ತಿ ಸಾಕಷ್ಟು ಬದಲಾಗಿದ್ದರೂ ಯುರೋಪ್ ಜಾಗತಿಕ ನಕ್ಷೆಯಲ್ಲಿ ಇಂದಿಗೂ ಮಹತ್ವ ಉಳಿಸಿಕೊಂಡಿದೆ.

ಬಂಡವಾಳಶಾಹಿ ಅಭಿವೃದ್ಧಿಯ 'ಸ್ವರ್ಗ'ವೆಂದು ಬಿಂಬಿಸಲಾಗುತ್ತಿದ್ದ, ಭಾವಿಸಲಾಗುತ್ತಿದ್ದ ಯುರೋಪ್ ದೇಶಗಳು ಇಂದು ಒಂದೊಂದಾಗಿ ಆಳವಾದ ಬಿಕ್ಕಟ್ಟಿನತ್ತ ಜಾರುತ್ತಿವೆ. ಇಡೀ ಯರೋಪ್ ತೀವ್ರ ಬಿಕ್ಕಟ್ಟಿನ ಹಿಡಿತಕ್ಕೆ ಸಿಕ್ಕಿಬಿದ್ದಿದೆ. ಈ ಗಂಭೀರ ಬಿಕ್ಕಟ್ಟಿನ ಮೂಲವೇನು ? ಈ ಬಿಕ್ಕಟ್ಟಿನ ತೀವ್ರತೆ ಎಷ್ಟು ? ಅದು ಜಗತ್ತಿನ ಮೇಲೆ ಮತ್ತು ಭಾರತದ ಮೇಲೆ ಬೀರಬಹುದಾದ ಪರಿಣಾಮಗಳೇನು ? ಈ ಬಿಕ್ಕಟ್ಟನ್ನು ಪರಿಹರಿಸಬಹುದಾದ ದಾರಿಯಾವುದು ? ಈ ಕುರಿತ ಒಂದು ಲೇಖನ ಮಾಲೆಯ ಮೊದಲ ಕಂತು ನಿಮಗಾಗಿ.



ಸ್ಪೈನ್ ದೇಶದ 'ಬೆನಿಡಾರ್ಮ್' ಪಟ್ಟಣದಲ್ಲಿ 47 ಅಂತಸ್ತುಗಳ ಭವ್ಯ ಗಗನಚುಂಬಿ ಐಶಾರಾಮಿ ಕಟ್ಟಡ 'ಇನ್ ಟೆಂಪೋ'

## ಪಾಳು ಬಿದ್ದ ಸ್ಪೈನ್‌ನ 'ಇಂದ್ರ ನಗರಿ' – ಹಾಳುಬಿದ್ದ 'ಪುಷ್ಪಕ ವಿಮಾನ' ನಿಲ್ದಾಣ

ಸ್ಪೈನ್ ದೇಶದ 'ಬೆನಿಡಾರ್ಮ್' ಮೀನುಗಾರಿಕೆಯೇ ಪ್ರಧಾನ ಜನಕಸುಬಾಗಿದ್ದ ಒಂದು ಪುಟ್ಟ ಪಟ್ಟಣವಾಗಿತ್ತು. ಒಂದು ಅರ್ಥದಲ್ಲಿ 'ನೆಮ್ಮದಿ'ಯ ಬದುಕು ನಡೆಸುತ್ತಿದ್ದ ಜನವಿಭಾಗಗಳ ನೆಲೆಯಾಗಿತ್ತು. ನವ ಉದಾರೀಕರಣದ ನೀತಿಗಳ ಬದಲಾವಣೆಯ ಗಾಳಿ ಬೀಸಿದ್ದೇ ತಡ ಪಟ್ಟಣದ ಚಹರೆಯೇ ಬದಲಾಗಲಾರಂಭಿಸಿತು. ಚಿಕ್ಕ, ಚೊಕ್ಕ ವಾಸದ ಮನೆಗಳ ಬದಲಾಗಿ ಗಗನಚುಂಬಿ ಕಟ್ಟಡಗಳು ಎದ್ದು ನಿಂತವು. ಕೃಷಿಭೂಮಿಯನ್ನೆಲ್ಲಾ ಈ ನಿರ್ಮಾಣದ ಪ್ರಕ್ರಿಯೆ ಆವರಿಸಿಕೊಂಡಿತು. ನೋಡ ನೋಡುತ್ತಿದ್ದಂತೆ ಈ ಪಟ್ಟಣ ಎಷ್ಟು ಬೆಳೆಯಿತೆಂದರೆ, ವಿಮಾನದಿಂದ ನೋಡುವಾಗ ಏಷಿಯಾದ ಹಾಂಗ್‌ಕಾಂಗ್ ನಗರದ ತರಹ ಕಾಣಲಾರಂಭಿಸಿತು. 2005 ರಲ್ಲಿ ಇಡೀ ಯೂರೋಪಿನಲ್ಲೇ ಅತ್ಯಂತ ಎತ್ತರದ ಗೃಹ ಸಮುಚ್ಚಯ ಎಂಬ ಹೆಗ್ಗಳಿಕೆಯೊಂದಿಗೆ 47 ಅಂತಸ್ತುಗಳ ಭವ್ಯ ಕಟ್ಟಡವೊಂದರ ನಿರ್ಮಾಣ ಪ್ರಾರಂಭವಾಯಿತು. ಅದರ ಹೆಸರು 'ಇನ್ ಟೆಂಪೋ' ಅಂತ. 'ಓಲ್ಗಾ ಅರ್ಬನಾ' ಎಂಬ ನಿರ್ಮಾಣ ಸಂಸ್ಥೆ ಅದರ ಒಡೆಯ. ಆ ಸಂಸ್ಥೆಯ ಮೂಲ ಬಂಡವಾಳ ಕೇವಲ 3100 ಯೂರೋಗಳು (ಅಂ–ದರೆ ಸುಮಾರು 2 ಲಕ್ಷದ 80 ಸಾವಿರ ರೂಪಾಯಿಗಳು). ಆದರೂ ಸಹಾ ಕಟ್ಟಡದ ನಿರ್ಮಾಣಕ್ಕೆ ಕೈಕ್ಸಾ ಗಲೇಷಿಯಾ ಎಂಬ ಬ್ಯಾಂಕು 390 ಲಕ್ಷ ಯೂರೋಗಳ (ಸು. 350 ಕೋಟಿ ರೂ.ಗಳು) ಸಾಲ ನೀಡಿತು. ಇನ್ನೂರು ಮೀಟರು (ಸು. 650 ಅಡಿ) ಗಳಷ್ಟು ಎತ್ತರದ ಎರಡು ಗೋಪುರಗಳ ಈ ಭವ್ಯ ಕಟ್ಟಡದಲ್ಲಿ ಅತ್ಯಂತ ವೈಭೋಗದ 269 ನಿವಾಸಗಳನ್ನು ಕಟ್ಟಲಾಗಿತ್ತು. 2009 ರಲ್ಲಿ ಇದರ ನಿರ್ಮಾಣ ಪೂರ್ಣಗೊಳ್ಳಬೇಕಾಗಿತ್ತು. ಅದಾಗಲೇ ಸುಮಾರು 80 ನಿವಾಸಗಳನ್ನು ಶ್ರೀಮಂತ ಕುಳಗಳು ಖರೀದಿಸಿಯಾಗಿತ್ತು.

ಇನ್ನೇನು, ಸ್ವಲ್ಪ ಸಮಯದಲ್ಲೇ ಭವ್ಯತೆಯ ಪ್ರತೀಕವಾಗಿ, ಅಭಿವೃದ್ಧಿಯ ಸಂಕೇತವಾಗಿ ಇನ್‌ಟೆಂಪೋ ರಾರಾಜಿಸುವುದರಲ್ಲಿತ್ತು! ಆದರೆ 2008 ರ ಆರ್ಥಿಕ ಬಿಕ್ಕಟ್ಟು ಈ ಎಲ್ಲದಕ್ಕೂ ಇತಿಶ್ರೀ ಹಾಡಿತು. ಜಾಗತೀಕರಣದ ಉನ್ಮಾದದ ಭರಾಟೆಯ ಭಗ್ನಾವಶೇಷವಾಗಿ ಇಂದು ಇನ್‌ಟೆಂಪೊ ನಿಂತಿದೆ. ಅದರ ನಿರ್ಮಾಣದ ಹೊಣೆ ಹೊತ್ತಿದ್ದ ಸಂಸ್ಥೆ ದಿವಾಳಿಯಾಗಿದೆ. ಸಾಲ ಕೊಟ್ಟ ಬ್ಯಾಂಕು ಸಹ ದಿವಾಳಿಯಾಗಿದೆ. ಹಣತೆತ್ತ ಕೆಲ ಗ್ರಾಹಕರು ನ್ಯಾಯಾಲಯದ ಮೊರೆ ಹೋಗಿದ್ದಾರೆ. ಈ ನಿವಾಸಗಳನ್ನು ಕೊಳ್ಳಲು ವಿದೇಶಗಳಿಂದಲಾದರೂ ಗ್ರಾಹಕರನ್ನು ಆಕರ್ಷಿಸಲು ನಡೆಸಿದ ಪ್ರಯತ್ನ ಫಲ ನೀಡಿಲ್ಲ. ಇದೊಂದೇ ಅಲ್ಲ. ಇಂತಹ ಹಲವಾರು "ಅಭಿವೃದ್ಧಿಯ" ಪ್ರತೀಕಗಳು ಸ್ಪೇನಿನಲ್ಲಿ ಕಾಣಸಿಗುತ್ತವೆ. ಅವುಗಳಲ್ಲಿ ಪ್ರಮುಖವಾದದ್ದೆಂದರೆ ಸಿಯುಡಾಡ್ ರಿಯಲ್ ಎಂಬ ನಗರದಲ್ಲಿ ನಿರ್ಮಿತವಾಗಿರುವ ಏರ್‌ಬಸ್ A380 ನಂತಹ ದೈತ್ಯ ಗಾತ್ರದ ವಿಮಾನಗಳು ಸಹ ಬಳಸಬಹುದಾದ ಬೃಹತ್ ವಿಮಾನ ನಿಲ್ದಾಣ



ಸಿಯುಡಾಡ್ ರಿಯಲ್ ನಗರದಲ್ಲಿ ಖಾಲಿ ಬಿದ್ದಿರುವ ದೈತ್ಯ ಗಾತ್ರದ ವಿಮಾನ ನಿಲ್ದಾಣ

ಹಾಗೂ ಅದರಂತೆಯೇ ಕಾಸ್ಟಲಿಯನ್ ಎಂಬ ಪ್ರದೇಶದಲ್ಲಿ ನಿರ್ಮಿತವಾಗಿರುವ ಇನ್ನೊಂದು ವಿಮಾನ ನಿಲ್ದಾಣ. ಇವೆರಡೂ ಇಂದು ಉಪಯೋಗಕ್ಕೆ ಬಾರದೆ ಪಾಳು ಬಿದ್ದಿವೆ. ಟಾಲೆಡೋನಿಂದ ಕ್ಯೂಯೆಂಕಾವರೆಗಿನ ಅತೀ ವೇಗದ ರೈಲು ಮಾರ್ಗ ಸಾಕಷ್ಟು ಪ್ರಯಾಣಿಕರ ಕೊರತೆಯಿಂದಾಗಿ ಮುಚ್ಚಿಹೋಗಿದೆ. ಸ್ಯಾಂಟಿಯಾಗೊ ಡಿ ಕಾಂಪೆಸ್ಟೆಲಾದಲ್ಲಿ ನಿರ್ಮಿತವಾಗುತ್ತಿದ್ದ ಸಂಸ್ಕೃತಿ ನಗರ (City of Culture) ದ ನಿರ್ಮಾಣ ಅರ್ಧ-ಕ್ಕೇ ನಿಂತಿದೆ. ಜಗತ್ತಿನ ಸುಪ್ರಸಿದ್ಧ ವಾಸ್ತುಶಿಲ್ಪಿ ಆಸ್ಕರ್ ನೈಮೆಯೇವ್ ವಿನ್ಯಾಸಗೊಳಿಸಿದ ಲಿವಿಲೆಸ್ ನಗರದ ಮಹತ್ವಾಕಾಂಕ್ಷೆಯ ಅಂತಾರಾಷ್ಟ್ರೀಯ ಸಾಂಸ್ಕೃತಿಕ ಕೇಂದ್ರ (International Cultural Center) ತನ್ನನ್ನು ಉಳಿಸಿಕೊಳ್ಳಲು ಹೆಣಗಾಡುತ್ತಿದೆ. ಅರಬರೆ ನಿರ್ಮಾಣವಾಗಿರುವ ಇಂತಹ ಸಹಸ್ರಾರು ವಸತಿ ಸಮುಚ್ಚಯಗಳು, ವಾಣಿಜ್ಯ ಕಟ್ಟಡಗಳು ಮತ್ತು ಮಾರಾಟವಾಗದೇ ಉಳಿದಿರುವ ಭವ್ಯ ಮಳಿಗೆಗಳು ಬ್ಯಾಂಕುಗಳಿಂದ ಅಪಾರ ಮೊತ್ತದ ಸಾಲಗಳನ್ನು ಪಡೆದಿದ್ದವು. ಸಾಲಗಳನ್ನು ತೀರಿಸಲಾಗದೆ ಕಟ್ಟಡ ನಿರ್ಮಾಣ ಸಂಸ್ಥೆಗಳು ಮುಳುಗಿ ಹೋಗಿದ್ದರೆ. ಸಾಲಕೊಟ್ಟ ಬ್ಯಾಂಕುಗಳು ದಿವಾಳಿಯಾಗಿವೆ

ದೇಶವೊಂದರ ಆರ್ಥಿಕ ಪರಿಸ್ಥಿತಿ ಎಷ್ಟೊಂದು ಅಧೋಗತಿಗೆ ಇಳಿದಿದೆ ಎಂಬುದರ ಕುರುಹಾಗಿ ಸ್ಪೇನಿನ ಈ ಭಗ್ನ ಅವಶೇಷಗಳು ನಿಂತಿರುವುದು ಚರಿತ್ರೆ ಕಲಿಸಿರುವ ಅತ್ಯಂತ ನಿರ್ದಯ ಪಾಠಗಳಲ್ಲಿ ಒಂದು ಎಂದು ಹೇಳಬಹುದೇನೋ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಶಿರಸ್ಪಾದಕೀಯ

# ಸರ್ಕಾರ ಬರ ಪೀಡಿತ ಜನರತ್ತ ಧಾವಿಸಲಿ

ರಾಜ್ಯದಲ್ಲಿ ಈ ಸಲ ಮುಂಗಾರು ಮಳೆ ಸರಾಸರಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಸುರಿದಿದೆ. ಬಹಳಷ್ಟು ಅನಾಹುತಗಳೂ ಸಂಭವಿಸಿವೆ. ಪ್ರವಾಹ ಪೀಡಿತ ಜನರತ್ತ ಸರ್ಕಾರ ತನ್ನ ನೆರವು ಹಸ್ತವನ್ನು ಹೆಚ್ಚೆಚ್ಚು ಚಾಚಬೇಕಾಗಿದೆ. ಆದರೆ ಲೋಕಸಭಾ ಉಪ ಚುನಾವಣೆಯ ಜಿದ್ದಾಜಿದ್ದಿ ಹಣಾಹಣಿಯಲ್ಲಿ ಮುಳುಗಿರುವ ರಾಜ್ಯ ಕಾಂಗ್ರೆಸ್ ಸರ್ಕಾರ ನೆರೆ ಹಾಗೂ ಬರ ಪೀಡಿತ ಜನರತ್ತ ಗಮನ ಹರಿಸುವ ಸಾಧ್ಯತೆ ಸಧ್ಯಕ್ಕೆ ಕಾಣುತ್ತಿಲ್ಲ.

ನಮ್ಮ ರಾಜ್ಯದಲ್ಲಿ ಒಂದು ಕಡೆ ಅತೀವೃಷ್ಟಿ ಮತ್ತು ಇನ್ನೊಂದು ಕಡೆ ಅನಾವೃಷ್ಟಿ ಕಾಡುತ್ತಿರುವುದು ಇದೇ ಮೊದಲಲ್ಲ. ಆದರೆ ಈ ಸಲ ಕೆಲವು ಕಡೆ ಸತತ 3 ವರ್ಷಗಳಿಂದ ವಾಡಿಕೆಯ ಮಳೆಯಾಗದ ಹಿನ್ನೆಲೆಯಲ್ಲಿ ಬರ 4ನೇ ವರ್ಷಕ್ಕೆ ಕಾಲಿಟ್ಟಿದೆ.

ರಾಜ್ಯದ 21 ಜಿಲ್ಲೆಗಳ 65 ತಾಲ್ಲೂಕುಗಳಲ್ಲಿ ಬರದ ಛಾಯೆ ಆವರಿಸಿಕೊಂಡಿದೆ. ಅದರಲ್ಲೂ ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಗದಗ, ಧಾರವಾಡ, ವಿಜಾಪುರ, ಬಾಗಲಕೋಟೆ, ಗುಲ್ಬರ್ಗಾ, ಯಾದಗಿರಿ, ರಾಯಚೂರು, ಬಳ್ಳಾರಿ, ಮಂಡ್ಯ, ಹಾಸನ, ರಾಮನಗರ ಮೊದಲಾದ ಜಿಲ್ಲೆಗಳ 30 ಕ್ಕೂ ಹೆಚ್ಚು ತಾಲೂಕುಗಳು ಬರಪೀಡಿತವಾಗಿವೆ.

ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ವಿವಿಧ ಬೆಳೆಗಳ ಬಿತ್ತನೆಯ ಗುರಿ 74.20 ಲಕ್ಷ ಹೆಕ್ಟೇರ್ ಆಗಿತ್ತು. ಆದರೆ ಈಗಾಗಲೇ ಅರ್ಧ ಮಳೆಗಾಲ ಕಳೆದಿದ್ದರೂ ಕೇವಲ 55.53 ಲಕ್ಷ ಹೆಕ್ಟೇರ್‌ನಲ್ಲಿ ಮಾತ್ರ ಬಿತ್ತನೆಯಾಗಿದೆ. ಹಲವಾರು ಕಡೆಗಳಲ್ಲಿ ಮಳೆಯ ಅಭಾವದಿಂದ ಬೆಳೆದ ಪೈರೂ ನಾಶವಾಗಿದೆ. ಇದರಿಂದಾಗಿ ಈ ವರ್ಷ ಆಹಾರ ಉತ್ಪಾದನೆಯ ಮೇಲೆ ಗಂಭೀರ ಪರಿಣಾಮ ಬೀರುವ ಸಾಧ್ಯತೆ ಇದೆ ಎನ್ನಲಾಗುತ್ತದೆ.

ಸಹಜವಾಗಿಯೇ, ಈ ಬರ ಪೀಡಿತ ತಾಲೂಕುಗಳಲ್ಲಿ ಕುಡಿಯುವ ನೀರು ಹಾಗೂ ಜಾನುವಾರುಗಳಿಗೆ ಮೇವಿನ ಅಭಾವ ತಲೆದೋರಿದೆ. ರೈತರು ಜಾನುವಾರುಗಳನ್ನು ಮಾರಾಟಮಾಡಿ ನಗರ ಪ್ರದೇಶಗಳಿಗೆ ವಲಸೆ ಹೋಗಲು ಆರಂಭಿಸಿದ್ದಾರೆ. ಆದ್ದ-ರಿಂದ ಸರ್ಕಾರ ಕೂಡಲೇ ಬರ ಪೀಡಿತ ಜನರತ್ತ ಧಾವಿಸಬೇಕು. ಬರ ಪರಿಹಾರ ಕಾಮಗಾರಿಗಳು ಅಷ್ಟೇ ಭರದಿಂದ ನಡೆಯುವಂತೆ ನೋಡಿಕೊಳ್ಳಬೇಕು. ಉಸ್ತುವಾರಿ ಸಚಿವರುಗಳು, ಕ್ಷೇತ್ರದ ಶಾಸಕರುಗಳು ಅಲ್ಲೇ ವಾಸ್ತವ್ಯ ಹೂಡಿ ಬರ ಪರಿಹಾರ ಕಾಮಗಾರಿಯಲ್ಲಿ ಯಾವುದೇ ಲೋಪ ಆಗದಂತೆ ಎಚ್ಚರವಹಿಸಬೇಕು.

ಕುಡಿಯುವ ನೀರಿನ ಪೂರೈಕೆಗೆ ಮೊದಲ ಆದ್ಯತೆ ನೀಡಬೇಕು. ಉತ್ತಮ ಮಳೆಯಾಗಿರುವ ಪ್ರದೇಶಗಳಲ್ಲಿ ಲಭ್ಯವಿರುವ ಹಸಿರು ಮೇವನ್ನು ಖರೀದಿಸಿ ಬರ ಪೀಡಿತ ಪ್ರದೇಶಗಳಿಗೆ ಕಳುಹಿಸಿಕೊಡಬೇಕು. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಸರಿಯಾಗಿ ಬಳಸಿಕೊಂಡು ಜನರು ಬಯಸುವಷ್ಟು ದಿನ, ಕೆಲಸ ಒದಗಿಸಿ ಸಕಾಲದಲ್ಲಿ ಸರಿಯಾಗಿ ಕೂಲಿ ಹಣ ಸಂದಾಯ ಮಾಡಬೇಕು. ಮರುಬಿತ್ತನೆ ಮಾಡಿಕೊಳ್ಳಲು ರೈತರಿಗೆ ಬೀಜ, ಗೊಬ್ಬರವನ್ನು ಒದಗಿಸಬೇಕು.

ಬರ ಪೀಡಿತ ಪ್ರದೇಶಗಳಲ್ಲಿ ಬಡತನವೂ ಅಧಿಕವಾಗಿದೆ. ಮಕ್ಕಳಲ್ಲಿ ಅಪೌಷ್ಟಿಕತೆ ಇದೆ. ಇಲ್ಲಿ ಮಕ್ಕಳ ಸಾವಿನ ಸಂಖ್ಯೆಯೂ ಹೆಚ್ಚು. ಬರ ಪೀಡಿತ ಪ್ರದೇಶದ ಮಕ್ಕಳಿಗೆ ಹಾಲು ಒದಗಿಸುವ ಯೋಜನೆಯನ್ನು ಸರ್ಕಾರ ಆರಂಭಿಸಬೇಕು. ಇಲ್ಲಿನ ಬಡ ಮಕ್ಕಳು ಹಾಲನ್ನೇ ಕಂಡಿರುವುದಿಲ್ಲ. ತಾಯಿಯ ಹಾಲಿನಲ್ಲೂ ಸಾಕಷ್ಟು ಪೋಷಕಾಂಶಗಳು ಇರುವುದಿಲ್ಲ. ತಾಯಿಯೂ ರಕ್ತಹೀನತೆಯಿಂದ ಬಳಲುತ್ತಿರುತ್ತಾಳೆ. ಐಸಿಡಿಎಸ್ ಯೋಜನೆಯನ್ನು ಖಾಸಗೀಕರಣ ಮಾಡುವ ವಿಚಾರವನ್ನು ಕೈಬಿಟ್ಟು ಗರ್ಭಿಣಿಯರಿಗೆ ಮತ್ತು ಬಾಣಂತಿಯರಿಗೆ ಅಗತ್ಯ ಶುಶ್ರೂಷೆ ದೊರೆಯುವಂತೆ ಮಾಡಬೇಕು. ಬರ ಪೀಡಿತ ಪ್ರದೇಶಗಳಿಗೆ ಅನಗತ್ಯ ನಿರ್ಬಂಧಗಳನ್ನು ಹೇರದೆ ಪಡಿತರ ವ್ಯವಸ್ಥೆಯನ್ನು ವಿಸ್ತರಿಸಬೇಕು. ಅಧಿಕೃತ ರೇಷನ್ ಕಾರ್ಡ್ ಇಲ್ಲದ ಬಡ ಕುಟುಂಬಗಳಿಗೂ ರೇಷನ್ ವಿತರಿಸಲು ಕ್ರಮಕೈಗೊಳ್ಳಬೇಕು. ರೇಷನ್ ಕಾರ್ಡ್ ವಿತರಣೆಯ ಗೊಂದಲ ಹಾಗೂ ವಿಳಂಬವನ್ನು ಕೂಡಲೇ ನಿವಾರಿಸಬೇಕು.

ಎಲ್ಲಕ್ಕೂ ಮುಖ್ಯವಾಗಿ ಆಡಳಿತ ಯಂತ್ರ ಚುರುಕಾಗಿ ಕೆಲಸಮಾಡಬೇಕು. ವಿವಿಧ ಇಲಾಖೆಗಳ ಕಾರ್ಯದರ್ಶಿಗಳು ಬರಪೀಡಿತ ಪ್ರದೇಶಗಳಲ್ಲಿ ವಾಸ್ತವ್ಯ ಹೂಡುವಂತಾಗಬೇಕು. ಆಗ ಆಡಳಿತ ಯಂತ್ರ ಸಂಪೂರ್ಣವಾಗಿ ಚುರುಕಾಗುತ್ತದೆ. ಬರ ಪರಿಹಾರ ಕಾಮಗಾರಿಗಳಾಗಲಿ, ಅಥವ ಇನ್ನು ಯಾವುದೇ ಜನೋಪಯೋಗಿ ಯೋಜನೆಯನ್ನು ಜಾರಿಮಾಡುವಲ್ಲಿ ಜನಸಂಘಟನೆಗಳು ಮಹತ್ವದ ಪಾತ್ರವನ್ನು ನಿರ್ವಹಿಸಬೇಕು. ನೆರೆ, ಹಾಗೂ ಬರ ಪೀಡಿತ ಜನರನ್ನು ಬೀದಿಗಳಿಸಲು, ಹೋರಾಟಗಳ ಮೂಲಕ ಸರ್ಕಾರದ ಮೇಲೆ ಅಗತ್ಯ ಒತ್ತಡ ಹೇರಲು ರೈತ, ಕೃಷಿಕೂಲಿಕಾರ, ಯುವಜನ ಸಂಘಟನೆಗಳು ಮುಂದಾಗಬೇಕು. ನೆರೆ, ಬರದಂತಹ ಪ್ರಕೃತಿ ವಿಕೋಪಗಳ ಸಂದರ್ಭದಲ್ಲಿ ಮಧ್ಯಪ್ರವೇಶಮಾಡಲು ಯಾವುದೇ ನಿರ್ದೇಶನಕ್ಕೆ ಕಾಯುವ ಅಗತ್ಯವಿಲ್ಲ.

# ಪಂಕ್ತಿಬೇಧ ಮತ್ತು ಮಡೆಸ್ನಾನ ಆಚರಣೆಗಳನ್ನು ನಿಷೇಧಿಸಲು ವಿಳಂಬ ಯಾಕೆ?


'ಇದು ಅನಿಷ್ಠ! ಅಮಾನವೀಯ, ಸಂವಿಧಾನ ವಿರೋಧಿ' ಎಂದ ಮೇಲೆ ಅದನ್ನು ನಿಷೇಧಿಸಲು ಇನ್ನೂ ಮೀನ, ಮೇಷ ಯಾತಕೆ? ಒಂದೆಡೆ ಭಾರತದ ಸಂವಿಧಾನದ ಕುರಿತು, ಮತ್ತೊಂದೆಡೆ ಮನುಸ್ಮೃತಿಯ ಮೇಲೆ ಕೈಯಿಟ್ಟು ಮಾತನಾಡುವ, ಕೊನೆಗೆ ಯಥಾ ಸ್ಥಿತಿಯನ್ನು ಕಾಪಾಡುವುದೇ ಒಂದು ಮುತ್ಸದ್ದಿ ಸಲಹೆ ಎಂದು ವಾದಿಸುವ ವ್ಯವಸ್ಥೆಯ ಪರಿಗೆ ಏನೆನ್ನ ಬೇಕು?

'ಇದು ಶತಮಾನಗಳ ಧಾರ್ಮಿಕ ನಂಬಿಕೆ, ಭಕ್ತರದ್ದೇ ಆಯ್ಕೆ. ಹಾಗಾಗಿ ವಿರೋಧವಾಗಿ ಹೋಗಲು ಆಗುವುದಿಲ್ಲ.' ಎಂಬ ವಾದ ಒಪ್ಪಲಾದರೂ ಸಾಧ್ಯವೇ? ನಂಬಿಕೆಗಳೇ ಬೇರೆ, ಮೂಢ ನಂಬಿಕೆಗಳು ಬೇರೆ. ಶ್ರೀಕೃಷ್ಣ ದೇವರ ಮೇಲಿನ ನಂಬಿಕೆಯನ್ನಾಗಲಿ, ಶ್ರೀ ಕುಕ್ಕೆ ಸುಬ್ರಮಣ್ಯ ದೇವರ ಮೇಲಿನ ನಂಬಿಕೆಯನ್ನಾಗಲಿ ಯಾರೂ ಪ್ರಶ್ನಿಸುವುದಿಲ್ಲ. ಆದರೆ ಮನುಷ್ಯರೊಳಗೆ ಕೆಲವರನ್ನು ಅಸ್ಪೃಶ್ಯರು, ಕೀಳು, ಎಂದು ಭಾವಿಸಿ ಅಸ್ಪೃಶ್ಯತೆಯನ್ನು ಆಚರಿಸುವುದು ಮೂಢನಂಬಿಕೆ. ಇಂತಹ ಅಮಾನವೀಯವಾದ ಮೂಢನಂಬಿಕೆಗಳನ್ನು ನಮ್ಮ ದೇಶದ ಸರ್ವೋನ್ನತ ಕಾನೂನು ಆಗಿರುವ 'ಸಂವಿಧಾನ'ವೇ ನಿಷೇದಿಸಿದೆ. ಅದರನ್ವಯ ಮಡೆಸ್ನಾನ ಮತ್ತು ಪಂಕ್ತಿಬೇಧಗಳಂತಹ ನೀಚ ಆಚರಣೆಗಳನ್ನು ಇನ್ನಾದರೂ ಯಾಕೆ ನಿಷೇಧಿಸಿ ಸರಕಾರ ಆಜ್ಞೆ ಹೊರಡಿಸಬಾರದು?

ರಾಜ್ಯದಲ್ಲಿ ಕೋಮುವಾದೀ, ಭ್ರಷ್ಟ ಬಿಜೆಪಿ ದುರಾಡಳಿತಕ್ಕೆ ಜನ ಬೇಸತ್ತು ಕಾಂಗ್ರೆಸ್ಸನ್ನು ಅಧಿಕಾರಕ್ಕೆ ತಂದಾಗ ಸಾಮಾನ್ಯವಾಗಿ ಜನತೆಯಲ್ಲಿ ಹೆಚ್ಚಿನ ನೀರೀಕ್ಷೆಗಳಿದ್ದವು, ಇವೆ ಕೂಡ. ಅದರಲ್ಲೂ ಅವರೇ ಹೇಳಿಕೊಂಡಂತೆ ಸಮಾಜವಾದಿ 'ಹಿನ್ನೆಲೆ'ಯ ಒಬ್ಬ ಮುಖ್ಯಮಂತ್ರಿ ಇರುವಾಗ ಈ ಸರಕಾರ ಹಿಂದಿನವರಂತೆ ಇರುವುದಿಲ್ಲ, ಮೌಢ್ಯತೆಯನ್ನು, ಮನುಷ್ಯನ ಘನತೆಗೆ ಘಾತ ತರುವ ವರ್ತನೆಗಳನ್ನು ತೋರುವುದಿಲ್ಲ ಎಂಬ ನಿರೀಕ್ಷೆಗಳನ್ನು ಹಲವರು ಇರಿಸಿಕೊಂಡಿದ್ದುದು ಸಹಜವೇ. ನೂರು ದಿನಗಳತ್ತ ಸಾಗುತ್ತಿರುವ ಈ ಸರಕಾರ ಆ ದೆಸೆಯಲ್ಲಿ ಏನಾದರೂ ಯೋಚಿಸಿದೆಯೇ? ನೀಡಿದ ಸೂಚನೆಯಾದರೂ ಏನು?

ಸಿದ್ಧರಾಮಯ್ಯನವರು ಅಧಿಕಾರಕ್ಕೇರಿದ ಹೊಸದರಲ್ಲಿ ಉಡುಪಿ ಕೃಷ್ಣ ದೇವಾಲಯವನ್ನು ಮತ್ತೇ ಮುಜರಾಯಿ ಇಲಾಖೆ ವ್ಯಾಪ್ತಿಗೆ ತರುವ ಇಂಗಿತವನ್ನು ಹೊರ ಹಾಕಿದ ಕೂಡಲೇ 'ಧಾರ್ಮಿಕ-ರಾಜಕೀಯ' ಪಟ್ಟಭದ್ರ ಹಿತಾಸಕ್ತಿಗಳು ಘರ್ಜಿಸಿದವು! ಆ ಮೇಲೆ ಆ ಚಿಂತನೆಯ ಪಸೆಯೇ ಬತ್ತಿ ಹೋಯಿತು. ಸ್ವತಃ ಸ್ವಪಕ್ಷೀಯರಿಂದಲೇ ಸಿದ್ಧರಾಮಯ್ಯನವರು ತೀವ್ರ ವಿರೋಧವನ್ನು, ಮುಜುಗರವನ್ನು ಅನುಭವಿಸಬೇಕಾಯಿತು.

ಹಿಂದಿನ ಬಿಜೆಪಿ ಸರಕಾರವಂತೂ ಈ ಅನಿಷ್ಠ ಪದ್ಧತಿಗಳನ್ನು ವಿಧವಿಧವಾಗಿ ಸಮರ್ಥಿಸಿಕೊಂಡಿತ್ತು. ಮುಜರಾಯಿ ಇಲಾಖೆ ಸಚಿವರಾಗಿದ್ದ ದಿವಂಗತ. ಡಾ.ವಿ.ಎಸ್.ಆಚಾರ್ಯರವರು ತಮ್ಮ ವೈದ್ಯಕೀಯ ಅನುಭವವನ್ನೂ ಮೂಲೆಗೆ ತಳ್ಳಿ ಮೌಢ್ಯತೆ ಹಾಗೂ ಜಾತಿ ಬೇಧವನ್ನು ಅಸಹ್ಯವೆನಿಸುವಷ್ಟು ಸಮರ್ಥಿಸಿಕೊಂಡರು. ಆ ಬಳಿಕವೂ ಈ ಆಚರಣೆಗಳನ್ನು ನಿಷೇಧಿಸುವಂತೆ ಸಿಪಿಐ(ಎಂ) ಪಕ್ಷ, ವಿವಿಧ ಪ್ರಗತಿಪರರರು, ನಿಡುಮಾಮಿಡಿ ಸ್ವಾಮೀಜಿಗಳ ನೇತೃತ್ವದಲ್ಲಿ ಧಾರ್ಮಿಕ ಕ್ಷೇತ್ರದ ಪ್ರಮುಖರು, ವಿವಿಧ ವಿಭಾಗಗಳ ಪ್ರತಿಭಟನೆ ತೀವ್ರಗೊಂಡಾಗ ಮಡೆಸ್ನಾನವನ್ನು ನಿರ್ಭಂಧಿಸುವ ಒತ್ತಡ ಸೃಷ್ಟಿಯಾಯಿತು. ಪರಿಣಾಮವಾಗಿ, ಸರಕಾರಕ್ಕೂ ಸಹ ನೇರವಾಗಿ ಸಮರ್ಥಿಸಿಕೊಳ್ಳುವುದು ಸಾಧ್ಯವಾಗಲಿಲ್ಲ ಎನ್ನಬಹುದು. ಇದರಿಂದಾಗಿ 2011ರಲ್ಲಿ ಕುಕ್ಕೆ ಸುಭ್ರಹ್ಮಣ್ಯ ದೇವಸ್ಥಾನದ ಆಡಳಿತಾಧಿಕಾರಿಯಾಗಿದ್ದ ಪುತ್ತೂರು ಎ.ಸಿ.ಸುಂದರ್ ಭಟ್‌ರವರು ಮಡೆಸ್ನಾನದ ಆಚರಣೆಯನ್ನು ನಿಷೇಧಿಸಿ ನವೆಂಬರ್ 27ರಂದು ಆದೇಶ ಹೊರಡಿಸಿದರು. ಆದರೆ ಮರುದಿನವೇ 28ರಂದು ದಕ್ಷಿಣ ಕನ್ನಡ ಜಿಲ್ಲಾಧಿಕಾರಿಯು ಎ.ಸಿ.ರವರ ಆದೇಶವನ್ನು ಹಿಂತೆ-ಗೆದುಕೊಂಡು ಆ ಆಚರಣೆಗೆ ಅನುವು ಮಾಡಿಕೊಟ್ಟರು. ಇದರ ಹಿಂದೆ ಪ್ರಮುಖವಾಗಿ ಪುರೋಹಿತಶಾಹಿ, ಆರೆಸ್ಸೆಸ್-ಬಿಜೆಪಿ ನಾಯಕರ ಪಾತ್ರ ಅದೃಶ್ಯವೇನಾಗಿರಲಿಲ್ಲ.




ಸರಕಾರದ ಈ ಆದೇಶದ (ಡಿ.ಸಿ.) ವಿರುದ್ಧ ಪ್ರತಿಭಟನೆಗಳು ಮುಂದುವರಿಯುತ್ತಿದ್ದಂತೆ ಮಧ್ಯಪ್ರವೇಶಿಸಿ ಸಂವಿಧಾನ ವಿರೋಧಿ, ಅಮಾನವೀಯ ಪದ್ಧತಿಯನ್ನು ನಿಷೇಧಿಸುವಂತೆ ಕೋರಿ ನ್ಯಾಯಾಲಯಕ್ಕೆ ಹಾಗೂ ಮಾನವ ಹಕ್ಕುಗಳ ಆಯೋಗಕ್ಕೂ ಮನವಿ ಸಲ್ಲಿಸಲಾಯಿತು. (ನಿಡುಮಾಮಿಡಿ ಶ್ರೀಗಳು ಮತ್ತು ಪ್ರಗತಿಪರರು). ಸರಕಾರವು ಹೈಕೋರ್ಟ್‌ನ ಮುಂದೆ ಬ್ರಾಹ್ಮಣರು ಉಂಡು ಬಿಟ್ಟ ಎಂಜಲೆಲೆಯ ಮೇಲೆ ಉರುಳಾಡುವುದು ಅದೊಂದು ಭಕ್ತರ ನಂಬಿಕೆ, ಭಕ್ತಿಯ ಆಚಾರ-ವಿಚಾರವೆಂದು ಸಮರ್ಥಿಸಿಕೊಂಡು 'ಮಡೆಸ್ನಾನದ ಬದಲು ಎಡೆಸ್ನಾನ'ಕ್ಕೆ ಅವಕಾಶ ಕೊಡುವ ನಿಲುವು ತಿಳಿಸಿತು. ಮಡೆಸ್ನಾನವನ್ನು 'ರೂಪಾಂತರಿಸುವ' ಸರಕಾರದ ನಿಲುವಿಗೆ ಹೈಕೋರ್ಟ್ ಸಮ್ಮತಿಸಿತು.

ಎಡೆಸ್ನಾನವೂ ಇನ್ನೊಂದು ಬಗೆಯ ಅಂಧಶ್ರದ್ಧೆಯೇ ಆಗಿದೆ. ಆದರೂ ಹಿಂದಿನ ಕ್ರಮಕ್ಕೆ ಒಂದು ರೀತಿಯಲ್ಲಿ ಇದು ತಡೆದಂತೆಯೂ ಆಗಿದೆ. ಇಂತಹ ಅಪ್ರಸ್ತುತ ಆಚರಣೆಗಳನ್ನು ಬದಲಾಯಿಸಲು ಸಾಧ್ಯವಿದೆ ಎಂಬುದನ್ನು ಹೈಕೋರ್ಟ್

ಪುಟ 10 ಕ್ಕೆ



# ಅಖಿಲ ಭಾರತ ಕಿಸಾನ ಸಭಾದ ಯಶಸ್ವಿ 33ನೇ ಮಹಾಸಮ್ಮೇಳನ

ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದ ಮಹಾಪರಂಪರೆ ಹೊಂದಿರುವ, ಹಲವು ಐತಿಹಾಸಿಕ ವೀರ ಸಮರಶೀಲ ಹೋರಾಟದ ಮಹಾನ್ ಚರಿತ್ರೆಯ ಎ.ಐ.ಕೆ.ಎಸ್. ನ 33ನೇ ಮಹಾ ಸಮ್ಮೇಳನವು ಜುಲೈ 24–27 ರವರೆಗೆ ಯಶಸ್ವಿಯಾಗಿ ನಡೆದಿದೆ.

ತಮಿಳುನಾಡು ರಾಜ್ಯದ ಕಡಲೂರು ನಗರದ ಸುಂದರ ಕಡಲತೀರದ ದಂಡೆಯಲ್ಲಿ ನಡೆದ ಈ ಮಹಾಸಮ್ಮೇಳನವು ಜುಲೈ 24 ರಂದು ಎಐಕೆಎಸ್ ಧ್ವಜ ಆರೋಹಣದ ಮೂಲಕ ಉದ್ಘಾಟನೆಯಾಗಿ ಜುಲೈ 27 ರಂದು ನಡೆದ ಲಕ್ಷಾಂತರ ರೈತರ ಬಹಿರಂಗ ಸಭೆಯೊಂದಿಗೆ ಕೊನೆಗೊಂಡಿತು.

ಎಐಕೆಎಸ್‌ಗೆ ಸಂಯೋಜನೆಗೊಂಡಿರುವ ರೈತ ಸಂಘಗಳ ರಾಜ್ಯ ಸಮ್ಮೇಳನಗಳ ಮೂಲಕ ಸದಸ್ಯತ್ವದ ಅನುಪಾತದ ಆಧಾರದಲ್ಲಿ ಚುನಾಯಿತರಾಗಿದ್ದ ಪ್ರತಿನಿಧಿಗಳು ಸಕ್ರಿಯವಾಗಿ ಭಾಗವಹಿಸಿ ಮುಂದಿನ ಹೋರಾಟದ ರೂಪುರೇಷೆ, ರೈತಾಪಿ ಇನ್ನಿತರ ದುಡಿಯುವ ವರ್ಗದ ಹಿತಕಾಪಾಡುವ ಹಲವು ನಿರ್ಣಯಗಳನ್ನು ಕೈಗೊಂಡು ಮುಂದಿನ ದಿನಗಳಲ್ಲಿ ದೇಶದಾದ್ಯಂತ ಎಐಕೆಎಸ್‌ನ್ನು ವಿಸ್ತರಿಸುವ, ಆ ಮೂಲಕ ನವಉದಾರೀಕೃತ ಕೃಷಿನೀತಿಗೆ ಪ್ರಬಲ ಪ್ರತಿರೋಧ ಒಡ್ಡಿ ಪರ್ಯಾಯ ಕೃಷಿನೀತಿಗೆ ಒತ್ತಡ ಹೇರಲು ತೀರ್ಮಾನಿಸಿತು.

ಈ ಸಮ್ಮೇಳನವು ಪ್ರಮುಖವಾಗಿ ದೇಶದ ಕಾರ್ಷಿಕಪರಿಸ್ಥಿತಿಯನ್ನುಅವಲೋಕನಮಾಡಿ, ಕೃಷಿ ಮತ್ತು ಅದರ ಸಂಬಂಧಿತ ವಲಯದ ಬೆಳವಣಿಗೆ ದರ 11ನೇ ಯೋಜನೆಯಲ್ಲಿ ನಿಗದಿ ಮಾಡಿದ್ದಕ್ಕಿಂತ ಕಡಿಮೆ ದಾಖಲಾಗಿದೆ. 2011–12 ಕ್ಕೆ ಹೋಲಿಸಿದರೆ ಕೃಷಿ ಉತ್ಪಾದನೆ ದರ ಅರ್ಧಕ್ಕೆ ಕುಸಿದಿದೆ. ನಿರಂತರವಾಗಿ ಜಿಡಿಪಿ (ಒಟ್ಟು ಅಂತರಿಕ ಉತ್ಪನ್ನ)ಯಲ್ಲಿ ಕೃಷಿ ಪಾಲು ಇಳಿಯುತ್ತಿದೆ. ಜಗತ್ತಿನ ಕೃಷಿಯೋಗ್ಯ ಭೂಮಿಯಲ್ಲಿ ಶೇ.11 ರಷ್ಟನ್ನು ಹೊಂದಿರುವ ಭಾರತವು ಜಗತ್ತಿನ ಶೇ. 18ರಷ್ಟು ಜನರ ಆಹಾರದ ಅಗತ್ಯಗಳನ್ನು ಪೂರೈಸಬೇಕಿದೆ. ರೈತರ ಆದಾಯ ಸತತವಾಗಿ ಇಳಿಯುತ್ತಿದೆ. ಕಡಿಮೆ ಇಳುವರಿ, ಕಡಿಮೆ ಉತ್ಪಾದನೆ. ಮಣ್ಣಿನ ಫಲವತ್ತತೆಗೆ ಹಾನಿ, ನೀರಾವರಿ ಸೌಕರ್ಯದ ಕೊರತೆ, ದುಬಾರಿ ಲಾಗುವಾಡುಗಳು, ಲಾಭದಾಯಕವಲ್ಲದ, ಖಾತರಿ ಇಲ್ಲದ ಬೆಲೆ, ರೈತರ ಆದಾಯ ಕುಸಿಯಲು ಕಾರಣವಾದ ಅಂಶಗಳಾಗಿವೆ. ಇದರಿಂದಾಗಿ ನಗರವಾಸಿಗಳ ತಲಾ ಆದಾಯದ ಶೇ. 30 ಮಾತ್ರವೇ ಗ್ರಾಮೀಣವಾಸಿಗಳ ತಲಾ ಆದಾಯ ಇದ್ದು, ಅಂತರ ಮತ್ತಷ್ಟು ಹೆಚ್ಚುತ್ತಿರುವುದು. ಶೇ. 50ಕ್ಕೆ ಹೆಚ್ಚು ಜನರ ಪ್ರಮುಖ ಜೀವನಾಧಾರವಾಗಿರುವ ಕೃಷಿಯಲ್ಲಿನ ಬೆಳವಣಿಗೆಗಳು ಆತಂಕಕಾರಿಯಾಗಿವೆ ಎಂದು ವಿಶ್ಲೇಷಿಸಿದೆ.

ಇತ್ತೀಚಿನ ಕೃಷಿ ಸಮೀಕ್ಷೆಗಳಲ್ಲಿ ಕಂಡುಬಂದಿರುವಂತೆ ಸರಾಸರಿ ಭೂ ಹಿಡುವಳಿ ಇಳಿಕೆಯಾಗುತ್ತಿದೆ. 2005–06ರಲ್ಲಿ 1.23 ಹೆಕ್ಟರ್ ಇದ್ದದ್ದು 2010–11 ರಲ್ಲಿ 1.16 ಹೆಕ್ಟರ್ ಇದೆ. ಇದನ್ನೆ ನಿರ್ಧಿಷ್ಟ ಗುಂಪುವಾರು ವಿಂಗಡಿಸಿ ಸರಾಸರಿ ನೋಡಿದರೆ ನಿಚ್ಚಳವಾಗಿ ಕಂಡುಬರುವ ಒಂದು ಅಂಶವೆಂದರೆ ಭೂ ಸಂಬಂಧಗಳು 50 ವರ್ಷದಿಂದಲೂ ಯಾವುದೇ ರೀತಿ ಬದಲಾಗದೆ, ಸಾಮಾಜಿಕ ತಾರತಮ್ಯಕ್ಕೆ ಒಳಗಾಗಿರುವ ಎಸ್.ಸಿ./ಎಸ್.ಟಿ.



ಜನರ ಭೂಹೀನತೆ ಕೂಡ ಉಳಿದುಕೊಂಡು ಬಂದಿದೆ ಎಂಬುದಾಗಿದೆ.

ಕಾರ್ಷಿಕ ಬಿಕ್ಕಟ್ಟು, ರೈತಾಪಿ ಜನತೆಯ ಮೇಲೆ ನಡೆಯುತ್ತಿರುವ ಹೊಸ ಹೊಸ ಧಾಳಿಗಳು, ಕಾರ್ಷಿಕ ಬಿಕ್ಕಟ್ಟಿನ ಪ್ರಸ್ತುತ ಸ್ವರೂಪದ ಬಗ್ಗೆ ವಿವರವಾಗಿ ಚರ್ಚೆಗೆ ಒಳಪಡಿಸಿದ ಸಮ್ಮೇಳನವು ಸಣ್ಣ ಮತ್ತು ಅತಿ ಸಣ್ಣ ರೈತರು, ಕೃಷಿಕೂಲಿಕಾರರಿಗೆ ಭಾರಿ ದೊಡ್ಡ ಹೊರಲಾಗದ ತೀವ್ರ ಪರಿಣಾಮದ ಸಂಕಷ್ಟವನ್ನು ತಂದೊಡ್ಡಿದೆ. ರೈತಾಪಿ ಜನ ದಿವಾಳಿಯಾಗುತ್ತಾ ಕೃಷಿ ಕೂಲಿಕಾರರಾಗಿ, ವಲಸೆ ಕಾರ್ಮಿಕರಾಗಿ ಬದಲಾಗುವ ಒತ್ತಡಕ್ಕೆ ಈಡಾಗಿದ್ದಾರೆ.

**ಟಿ. ಯಶವಂತ**

ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ ಪ್ರಕಾರವೇ ಗಂಟೆಗೆ 2 ರೈತರ ಆತ್ಮಹತ್ಯೆಗಳು ವರದಿಯಾಗುತ್ತಿವೆ.

1991 ರಿಂದ ಅನುಸರಿಸುತ್ತಿರುವ ನವಉದಾರಿಕೃತ ಆರ್ಥಿಕ ನೀತಿಯಿಂದಾಗಿ ರೈತಾಪಿ ಜನಜೀವನದ ಮೇಲೆ ಗಂಭೀರ ದುಷ್ಪರಿಣಾಮ ಉಂಟಾಗಿದೆ. ಕೃಷಿ ಸಂಶೋಧನೆ–ವಿಸ್ತರಣೆ, ಲಾಗುವಾಡುಗಳನ್ನು ಒದಗಿಸುವಿಕೆ, ಕಡಿಮೆ ಬಡ್ಡಿದರದ ಸಾಲ, ಬೆಂಬಲ ಬೆಲೆ, ಮಾರುಕಟ್ಟೆ ಒದಗಿಸುವಿಕೆ ಹೀಗೆ ಮೊದಲಾದ ವಿಷಯಗಳಲ್ಲಿ ಸರ್ಕಾರ ವ್ಯವಸ್ಥಿತವಾಗಿ ತನ್ನ ಹೊಣೆಗಾರಿಕೆಯಿಂದ ಜಾರಿಕೊಳ್ಳುತ್ತಿದ್ದು, ಕೃಷಿ ವ್ಯಾಪಾರ ಸಂಸ್ಥೆಗಳಿಗೆ ಕೃಷಿಗೆ ಸಂಬಂಧಿಸಿದ ಪ್ರತಿಯೊಂದು ವಲಯಗಳನ್ನು ವರ್ಗಾಯಿಸಿದೆ.

ಒಂದು ಕಡೆ ಅಮದು ಕೃಷಿ ಉತ್ಪನ್ನಗಳ ಮೇಲೆ ಪ್ರಮಾಣಾತ್ಮಕ ನಿರ್ಬಂಧಗಳನ್ನು, ಆಮದು ಸುಂಕಗಳನ್ನು ತೆಗೆಯುವ ಮೂಲಕ ದೇಶದ ಕೃಷಿ ಉತ್ಪನ್ನಗಳ ಬೆಲೆ ಕುಸಿಯುವಂತೆ ನೋಡಿಕೊಳ್ಳಲಾಗುತ್ತಿದೆ. ಅದೇ ಸಂದರ್ಭದಲ್ಲಿ ಕೃಷಿ ಹೂಡಿಕೆ ವೆಚ್ಚಗಳ ಮೇಲೆ ಸರ್ಕಾರ ಸಬ್ಸಿಡಿಗಳನ್ನು ರದ್ದು ಮಾಡುತ್ತಿದ್ದು, ಕೃಷಿ ಉತ್ಪಾದನೆ ವೆಚ್ಚಗಳು ದಾಖಲೆ ಮಟ್ಟದ ಏರಿಕೆಯನ್ನು ಕಾಣುತ್ತಿವೆ. ಇದು ರೈತಾಪಿ ಸಮುದಾಯವನ್ನು ಸಾಲದ ಕೂಪಕ್ಕೆ ಎಳೆದುಕೊಂಡು ಹೋಗುತ್ತಿರುವ ಮುಖ್ಯ ಸಾಧನವಾಗಿದೆ. ಈ ಪ್ರಕ್ರಿಯೆಯು ಭೂಮಿ ಕಳೆದುಕೊಳ್ಳುವುದು ಮತ್ತು ಆತ್ಮಹತ್ಯೆ ಮಾಡಿಕೊಳ್ಳುವುದರಲ್ಲಿ ತಾರ್ಕಿಕ ಅಂತ್ಯ ಕಾಣುತ್ತಿದೆ ಎಂದು ಸಮ್ಮೇಳನ ಬೊಟ್ಟು ಮಾಡಿ ತೋರಿದೆ.

1990 ರ ಆರಂಭದಲ್ಲಿ ಭೂಹೀನ ರೈತರ ಸಂಖ್ಯೆ ಶೇ.22 ಇದ್ದದ್ದು, ಈಗ ಇದರ ಪ್ರಮಾಣ ಶೇ. 41 ಕ್ಕೆ ಏರಿದೆ. 1 ಹೆಕ್ಟರ್ ಹಾಗೂ ಇದಕ್ಕಿಂತ ಕಡಿಮೆ ಹಿಡುವಳಿ ಹೊಂದಿರುವವರ ಸಂಖ್ಯೆ ಶೇ 63. ಶೇ 6ರಷ್ಟು ಜನ ಶೇ 46 ರಷ್ಟು ಭೂ ಹಿಡುವಳಿಯನ್ನು ಹೊಂದಿದ್ದಾರೆ. ಈ ರೀತಿಯ ರೈತಾಪಿ ದಿವಾಳಿಯು 2 ದಶಕಗಳ ನವಉದಾರೀಕರಣ ನೀತಿಗಳ ದುಷ್ಫಲ ಎಂಬುದು ಬಹಳ ಸ್ಪಷ್ಟ ಎಂದು ಸಮ್ಮೇಳನ ಒತ್ತಿ ಹೇಳಿದೆ.

ಭೂ ಸು ಧಾರಣಾ ನೀತಿಗಳನ್ನು ತಿರುವು–ಮುರುವು ಮಾಡುತ್ತಿರುವುದು, ಕಾರ್ಪೊರೇಟ್ ಕಂಪನಿಗಳು ಭೂ ಕಬಳಿಕೆ ಮಾಡುತ್ತಿರುವುದರ ಬಗ್ಗೆ ತೀವ್ರವಾದ ಆಕ್ರೋಶ ವ್ಯಕ್ತಪಡಿಸಿದ ಸಮ್ಮೇಳನ, ವಿಶೇಷ ಆರ್ಥಿಕ ವಲಯ, ಗಣಿಗಾರಿಕೆ, ನಗರೀಕರಣ ಮುಂತಾದ ಕಾರಣಗಳಿಗಾಗಿ ಕೃಷಿ, ಅರಣ್ಯ ಭೂಮಿಯನ್ನು ಬೇಕಾಬಿಟ್ಟಿಯಾಗಿ ಪರಿವರ್ತಿಸಲಾಗುತ್ತಿದೆ. ವಿಶೇಷ ಆರ್ಥಿಕ ವಲಯ, ಕೈಗಾರಿಕೆಗಾಗಿ ಎಂದು ನಮೂದಿಸಿ ರಿಯಲ್ ಎಸ್ಟೇಟ್ ವ್ಯವಹಾರ ನಡೆಸಲಾಗುತ್ತಿದೆ. ಈ ರೀತಿ ಭಾರಿ ಪ್ರಮಾಣದ ಭೂ ಸ್ವಾಧೀನಕ್ಕೆ ವಿರುದ್ಧವಾಗಿ ರೈತರ ವ್ಯಕ್ತಪಡಿಸಿದ್ದ ಅತೃಪ್ತಿಯು 17 ರಾಜ್ಯಗಳ 40 ಜಿಲ್ಲೆಗಳಲ್ಲಿ ಉದ್ವಿಗ್ನ ಸ್ಥಿತಿ ಉಂಟುಮಾಡಿತ್ತು. ಹಾಗೂ 10 ಕೋಟಿಗಿಂತ ಹೆಚ್ಚು ಜನರ ಬಾಧೆಗೆ ಒಳಗಾಗಿದ್ದರು ಎಂದು ಅಂದಾಜಿಸಲಾಗಿದೆ. ಗುಜರಾತ್, ಒರಿಸ್ಸಾ, ಮಧ್ಯಪ್ರದೇಶ, ಛತ್ರಿಸಗಢ್, ಜಾರ್ಖಂಡ್, ಹರಿಯಾಣ, ತಮಿಳುನಾಡು, ಕರ್ನಾಟಕ, ಆಂಧ್ರಪ್ರದೇಶ ಮುಂತಾದ ರಾಜ್ಯಗಳಲ್ಲಿ ಲಕ್ಷಾಂತರ ಎಕರೆ ಭೂಮಿಗಳನ್ನು ಕಿತ್ತುಕೊಳ್ಳಲಾಗಿದೆ. ದೇಶದಲ್ಲಿ ಅವಕಾಶ ನೀಡಿರುವ 580 ವಿಶೇಷ ಆರ್ಥಿಕ ವಲಯಗಳಲ್ಲಿ ಆಂಧ್ರಪ್ರದೇಶ ಒಂದರಲ್ಲೆ 110 ಇದೆ. ಈಗ ನಡೆಯುತ್ತಿರುವ ಭೂಸ್ವಾಧೀನ ಪ್ರಕ್ರಿಯೆಗಳು ಉತ್ತರಪ್ರದೇಶ ಒಂದರಲ್ಲೆ 2 ಸಾವಿರಕ್ಕೂ ಹೆಚ್ಚು ಹಳ್ಳಿಗಳನ್ನು ಬಾಧಿಸಲಿದೆ ಎಂದು ಸಮ್ಮೇಳನ ಆತಂಕ ವ್ಯಕ್ತಪಡಿಸಿತು.

ಸಾಲದ ಲಭ್ಯತೆ ಕುಗ್ಗುತ್ತಿರುವುದು, ಕೃಷಿ ಲಾಗುವಾಡುಗಳ ಭಾರಿ ಪ್ರಮಾಣದ ಏರಿಕೆ, ಕನಿಷ್ಠ ಬೆಂಬಲ ಬೆಲೆ ಘೋಷಣೆ ವಾಸ್ತವ ಉತ್ಪಾದನಾ ವೆಚ್ಚಕ್ಕಿಂತ ಕಡಿಮೆ ನಿಗಧಿಪಡಿಸುವುದು ಮುಂತಾದ ರೈತ ವಿರೋಧಿ ನೀತಿಗಳನ್ನು ವಿವರವಾಗಿ ಚರ್ಚಿಸಿದ ಸಮ್ಮೇಳನ, ಎಂ.ಎಸ್.ಸ್ವಾಮಿನಾಥನ್ ಆಯೋಗದ ಶಿಫಾರಸ್ಸುಗಳನ್ನು ಜಾರಿ ಮಾಡದೆ ಇರುವ ಯುಪಿಎ ಸರ್ಕಾರದ ನೀತಿಯನ್ನು ಕಟುವಾಗಿ ಖಂಡಿಸಿತು.

ಸಾಮ್ರಾಜ್ಯಶಾಹಿ ಶಕ್ತಿಗಳ, ಬಹುರಾಷ್ಟ್ರೀಯ ಕಂಪನಿಗಳ ಹಿತಕಾಯುವ ಮುಕ್ತ ವ್ಯಾಪಾರ ಒಪ್ಪಂದಗಳು, ಕೃಷಿಯಲ್ಲಿ ಮತ್ತು ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳಕ್ಕೆ ಅವಕಾಶ ಮಾಡಿಕೊಡುವ ಕ್ರಮಗಳು ಸರ್ಕಾರಿ–ಖಾಸಗಿ ಪಾಲುದಾರಿಕೆ ಹೆಸರಿನಲ್ಲಿ ಜಾರಿಗೊಳ್ಳುತ್ತಿದ್ದು, ಕೃಷಿ ವಿರೋಧಿ, ರೈತ ವಿರೋಧಿ ದುಷ್ಟ ಕ್ರಮಗಳು ಸಮಗ್ರ ಕೃಷಿ ಅಭಿವೃದ್ಧಿ, ಹೊಸ ಕೃಷಿ ಮುತುವರ್ಜಿ ಎಂಬ ರೂಪಗಳಲ್ಲಿ ಬರುತ್ತಿವೆ. ಈ ದಾಳಿಗಳನ್ನು ನಡೆಸಲು ಸುಮಾರು 26 ಜಾಗತಿಕ ದೈತ್ಯ ಕೃಷಿ ಕಂಪನಿಗಳಿಗೆ ನೆರವು ನೀಡಲು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ನಿಧಿಯನ್ನು ದುರುಪಯೋಗ ಮಾಡಿಕೊಳ್ಳಲಾಗುತ್ತಿದೆ ಎಂದು ಸಮ್ಮೇಳನ ಗಮನ ಸೆಳೆಯಿತು.

ರಸಗೊಬ್ಬರ ವಲಯದ ಮೇಲಿದ್ದ ನಿಯಂತ್ರಣವನ್ನು ತೆಗೆದುಹಾಕಿ ಪೋಷಕಾಂಶ ಆಧಾರಿತ ಸಬ್ಸಿಡಿ ನೀತಿಯನ್ನು 2010 ರಿಂದ ಜಾರಿಗೊಳಿಸಿರುವುದು ಬೃಹತ್ ಪ್ರಮಾಣದ ಬೆಲೆ ಏರಿಕೆಗೆ ಕಾರಣವಾಗಿದೆ. ನೇರ ನಗದು ವರ್ಗಾವಣೆ ನೀತಿಯು ಅತ್ಯಂತ ಜನವಿರೋಧಿಯಾಗಿದೆ. ಇದರಿಂದಾಗಿ ದೇಶದಲ್ಲಿ ಆಹಾರ ಉತ್ಪಾದನೆಗೆ ಗಂಭೀರ ಧಕ್ಕೆ ಬರಲಿದ್ದು, ಆಹಾರ ಅಭದ್ರತೆಯನ್ನು ಮತ್ತಷ್ಟು ಹೆಚ್ಚಿಸಲಿವೆ.

ಸಕ್ಕರೆ ಕಾರ್ಖಾನೆಗಳ ಮೇಲಿದ್ದ ನಿಯಂತ್ರಣವನ್ನು ಲಾಬಿಗೆ ಮಣಿದು ತೆಗೆದುಹಾಕಲಾಗಿದೆ. ಇದರಿಂದ ರಾಜ್ಯಗಳು ಒತ್ತಡ ಹಾಕಿ ನಿಗಧಿ ಮಾಡುತ್ತಿದ್ದ ರಾಜ್ಯ ಸಲಹಾ ಬೆಲೆ (ಎಸ್‌ಎಪಿ)ಗೆ ಧಕ್ಕೆ ಬಂದಿದೆ. ಲೆವಿ ಸಕ್ಕರೆ ಹಾಗೂ ಲೆವಿಯೇತರ ಸಕ್ಕರೆ ಮೇಲಿನ ಆಡಳಿತಾತ್ಮಕ ನಿಯಂತ್ರಣಗಳ ರದ್ಧತಿಗೆ ಶಿಫಾರಸ್ಸು ಮಾಡಿರುವ ರಂಗರಾಜನ್ ಸಮಿತಿ ವರದಿಗೆ ಒಪ್ಪಿಗೆ ಸೂಚಿಸುವ ಮೂಲಕ ಸಾರ್ವಜನಿಕ ಪಡಿತರ ವ್ಯವಸ್ಥೆಯಲ್ಲಿ ಸಕ್ಕರೆ ವಿತರಣೆಗೆ ಎಳ್ಳು–ನೀರು ಬಿಟ್ಟಿದೆ. ಕಬ್ಬು ಬೆಳೆಗಾರರಿಗೆ ಕಾರ್ಖಾನೆಗಳು ನೀಡಬೇಕಾದ ಬಾಕಿ ಮೊತ್ತವೆ ಸುಮಾರು 10,500 ಕೋಟಿಯಷ್ಟಿದೆ ಎಂದು ಸಮ್ಮೇಳನ ಗಮನ ಸೆಳೆದಿದೆ.

ಕೇಂದ್ರ ಸರ್ಕಾರದ ರಾಷ್ಟ್ರೀಯ ಜಲನೀತಿಯ ಪ್ರಸ್ತಾಪವು ನೀರಿನ ಸಂಪತ್ತನ್ನು

ಪುಟ 12 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

# ಲೋಕಸಭೆ ಉಪ ಚುನಾವಣೆ : ತಟಸ್ಥವಾಗಿರಲು ಸಿಪಿಐ(ಎಂ) ನಿರ್ಧಾರ

ಮಂಡ್ಯ ಹಾಗೂ ಬೆಂಗಳೂರು ಗ್ರಾಮಾಂತರ ಕ್ಷೇತ್ರದಿಂದ ನಡೆಯುತ್ತಿರುವ ಲೋಕಸಭಾ ಉಪಚುನಾವಣೆಯಲ್ಲಿ ಬಿಜೆಪಿ ಬೆಂಬಲಿತ ಜೆಡಿಎಸ್‌ಗೆ ಬೆಂಬಲ ನೀಡದಿರಲು ತೀರ್ಮಾನಿಸುವ ಮೂಲಕ ಸಿಪಿಐ(ಎಂ) ಈ ಉಪ ಚುನಾವಣೆಯಲ್ಲಿ ಯಾವ ಪಕ್ಷವನ್ನೂ ಬೆಂಬಲಿಸದೆ ತಟಸ್ಥ ಧೋರಣೆಯನ್ನು ಅನುಸರಿಸಲು ನಿರ್ಧರಿಸಿದೆ. ಇದೊಂದು ಖೇದದ, ಅನಿವಾರ್ಯ ಪರಿಸ್ಥಿತಿ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಅಭಿಪ್ರಾಯಪಟ್ಟಿದೆ.

ಮಂಡ್ಯ ಹಾಗೂ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರಗಳಲ್ಲಿ ಸಿಪಿಐ(ಎಂ) ಸಂಘಟನೆ ಮತ್ತು ಚಟುವಟಿಕೆಗಳನ್ನು ನಡೆಸುತ್ತಾ ಬಂದಿದ್ದರೂ ಚುನಾವಣೆಯನ್ನು ಎದುರಿಸಲು ಬೇಕಾಗುವಷ್ಟು ಬಲ ಇಲ್ಲದಿರುವುದರಿಂದ ಈ ಉಪ ಚುನಾವಣೆಯಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸದಿರಲು ತೀರ್ಮಾನಿಸಿತ್ತು. ದೇಶದ ಕೃಷಿ, ಕೈಗಾರಿಕೆ, ಮತ್ತು ಸೇವಾ ವಲಯಗಳ ಹಿತವನ್ನು ಕಡೆಗಣಿಸಿ ಅಮೇರಿಕ ಸಾಮ್ರಾಜ್ಯಶಾಹಿ ಪ್ರೇರಿತ ನವ ಉದಾರೀಕರಣದ ನೀತಿಗಳಿಗೆ ಜೋತುಬಿದ್ದಿರುವ ಮಹಾ ಭ್ರಷ್ಟ ಕಾಂಗ್ರೆಸ್ ಪಾರ್ಟಿಯನ್ನು ಮತ್ತು ಅಷ್ಟೇ ಭ್ರಷ್ಟ, ಜನತೆಯ ನೆಮ್ಮದಿಗೆ ಕಂಟಕಪ್ರಾಯವಾಗಿರುವ ಕೋಮುವಾದಿ ಬಿಜೆಪಿಯನ್ನು ಧೋರಣಾತ್ಮಕವಾಗಿ, ದೃಢವಾಗಿ ವಿರೋಧಿಸುವ ಪಕ್ಷಕ್ಕೆ / ವ್ಯಕ್ತಿಗೆ ಬೆಂಬಲ ನೀಡಲು ಸಿಪಿಐ(ಎಂ) ಈ ಮೊದಲು ನಿರ್ಧರಿಸಿತ್ತು. ಜೆಡಿಎಸ್ ನ ನಿಲುವು ಒಲವುಗಳ ಬಗ್ಗೆ ಸಿಪಿಐ(ಎಂ)ಗೆ ಆತಂಕ, ಆಕ್ಷೇಪಗಳು ಇದ್ದಾಗ್ಯೂ ಈ ಉಪ ಚುನಾವಣೆಯಲ್ಲಿ ಕಾಂಗ್ರೆಸನ್ನೂ ಮತ್ತು ಬಿಜೆಪಿಯನ್ನು ಸೋಲಿಸಬೇಕೆಂಬ ಉದ್ದೇಶಕ್ಕಾಗಿ ಜೆಡಿಎಸ್ ಗೆ ಬೆಂಬಲ ನೀಡುವ ಬಗ್ಗೆ ಸಿಪಿಐ(ಎಂ) ಚಿಂತನೆ ನಡೆಸಿತ್ತು. ಬೆಂಬಲಕೋರಿ ಜೆಡಿಎಸ್ ಅಖಿಲ ಭಾರತ ಅಧ್ಯಕ್ಷರಾದ ಶ್ರೀ ಎಚ್.ಡಿ. ದೇವೇಗೌಡರಿಂದ ಸಿಪಿಐ(ಎಂ) ರಾಜ್ಯ ಸಮಿತಿಗೆ ಮನವಿ ಪತ್ರವೂ ಬಂದಿತ್ತು. ಆದರೆ ಕಾಂಗ್ರೆಸ್‌ನ್ನು ಸೋಲಿಸುವ ಹೆಸರಿನಲ್ಲಿ ಜೆಡಿಎಸ್ ಬಿಜೆಪಿಯೊಂದಿಗೆ ಒಳ ಒಪ್ಪಂದ ಮಾಡಿಕೊಂಡು, ಎರಡೂ ಕ್ಷೇತ್ರಗಳಲ್ಲಿ ಬಿಜೆಪಿ ತನ್ನ ಅಭ್ಯರ್ಥಿಗಳನ್ನು ಹಿಂದ- ಕ್ಕೆ ಪಡೆದಿರುವುದರಿಂದ ಈಗ ಜೆಡಿಎಸ್‌ಗೆ ಬೆಂಬಲ ನೀಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದು ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸ್ಪಷ್ಟಪಡಿಸಿದೆ.

ಜೆಡಿಎಸ್ ನ ಈ ಅವಕಾಶವಾದಿತನಕ್ಕೆ ಅದು ಮುಂದೆ ದೊಡ್ಡ ಬೆಲೆ ತೆರಬೇಕಾಗುವುದರಲ್ಲಿ ಸಂಶಯವಿಲ್ಲ. ಈಗಾಗಲೇ ಅದರ ಲಕ್ಷಣಗಳು ಕಾಣುತ್ತಿವೆ. ಜೆಡಿಎಸ್‌ನ ಹಿರಿಯ ಮುಖಂಡ, ಮಾಜಿ ಸಂಸದ ಸಿ. ನಾರಾಯಣಸ್ವಾಮಿ, ಬಿಜೆಪಿಯೊಂದಿಗೆ ಜೆಡಿಎಸ್ ಮೈತ್ರಿ ಮಾಡಿಕೊಂಡಿರುವುದನ್ನು ವಿರೋಧಿಸಿ ಪಕ್ಷ- ಕ್ಕೆ ರಾಜಿನಾಮೆ ನೀಡಿದ್ದಾರೆ. ಮಾಜಿ ಸ್ಪೀಕರ್ ಕೃಷ್ಣ, ಜೆಡಿಎಸ್ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಅಬ್ದುಲ್ ಹಫೀಜ್ ಖಾನ್ ಅವರೂ ರಾಜಿನಾಮೆ ನೀಡಿ ಕಾಂಗ್ರೆಸ್ ಸೇರಲಿದ್ದಾರೆ ಎಂದು ಹೇಳಲಾಗುತ್ತಿದೆ.

ಬಿಜೆಪಿಯೊಂದಿಗೆ ಒಪ್ಪಂದ ಮಾಡಿಕೊಂಡಿರುವ ಜೆಡಿಎಸ್ ಮುಂದೆ ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್ತಿನ ಮೂರು ಸ್ಥಾನಗಳಿಗೆ ನಡೆಯುವ ಚುನಾವಣೆಯಲ್ಲಿ, ಅಭ್ಯರ್ಥಿಗಳನ್ನು ನಿಲ್ಲಿಸದೇ ಬಿಜೆಪಿಯನ್ನು ಬೆಂಬಲಿಸಲು ನಿರ್ಧರಿಸಿದೆ. ಮುಂದೆ ಜೆಡಿಎಸ್ ಈ ಒಪ್ಪಂದಕ್ಕೆ ತಕ್ಕಂತೆ ನಡೆದುಕೊಳ್ಳದೆಯೂ ಇರಬಹುದು! ಆದರೆ ಈ ಲೋಕಸಭಾ ಉಪ ಚುನಾವಣೆಯಲ್ಲಂತೂ ಅದು ಬಿಜೆಪಿ ಬೆಂಬಲಕ್ಕೆ ಕೈಚಾಚುವ ಮೂಲಕ ಎರಡೂ ಕ್ಷೇತ್ರದ ಪ್ರಗತಿಪರ, ಜಾತ್ಯಾತೀತ ಮನೋಭಾವದ ಮತದಾರರಿಗೆ ಬಾರೀ ದೊಡ್ಡ ಆಘಾತವನ್ನು ಉಂಟುಮಾಡಿದೆ.

ಎಡ ಪಕ್ಷಗಳೊಂದಿಗೆ ಒಂ್ ಂಾ ವಾ ಗ್ ಲೂ ಗುರುತಿಸಿಕೊಳ್ಳಲು ಬಯಸುವ ಶ್ರೀ ಎಚ್.ಡಿ. ದೇವೇಗೌಡರಿಗೆ ತನ್ನ ಪಕ್ಷದ ಈ ನಿಲುಮೆಯನ್ನು ಸಮರ್ಥಿಸಲು ಸಾಧ್ಯವಾಗುತ್ತಿಲ್ಲ. ರಾಜ್ಯದ ಅಲ್ಪಸಂಖ್ಯಾತರಲ್ಲಿ ಬೆಳೆದು ಬರುತ್ತಿದ್ದ ವಿಶ್ವಾಸಕ್ಕೆ ಇದರಿಂದ ಧ- ಕ್ಕೆಯಾಗದೆ ಇರಲಾರದು. ಜೆಡಿಎಸ್‌ನಲ್ಲಿ ಸಿ.ಎಂ. ಇಬ್ರಾಹಿಂ ನಿರ್ಗಮನದ ನಂತರ, ಪ್ರತಿ ಚುನಾವಣೆಯಲ್ಲಿಯೂ ಪ್ರಚಾರದ ಮಂಚೂಣಿಯಲ್ಲಿರುತ್ತಿದ್ದ ಶಾಸಕ ಜಮೀರ್ ಅಹಮ್ಮದ್ ಈ ಉಪ ಚುನಾವಣೆಯ ಪ್ರಚಾರದಲ್ಲಿ ಇದುವರೆಗೂ ಕಾಣಿಸಿಕೊಳ್ಳದಿರುವುದು ಜೆಡಿಎಸ್ ಕಾರ್ಯಕರ್ತರಲ್ಲಿ ಚರ್ಚಾವಿಷಯವಾಗಿದೆ.

ವಿಧಾನಸಭಾ ಚುನಾವಣೆಯಲ್ಲಿ ಸೋತು ಸುಣ್ಣವಾಗಿದ್ದ ಬಿಜೆಪಿಗೆ ಮರುಜೀವ ತುಂಬಲು ಹೊರಡುವ ಮೂಲಕ ಜೆಡಿಎಸ್ ಪಕ್ಷ ಆತ್ಮಹತ್ಯೆಗೆ ಮುಂದಾಗಿರುವುದು ದುರದೃಷ್ಟಕರ.

ಮೇ ತಿಂಗಳಲ್ಲಿ ನಡೆದ ವಿಧಾನ ಸಭೆ ಚುನಾವಣೆಯಲ್ಲಿ ಸಿಪಿಐ(ಎಂ) ಸರ್ವೋದಯ ಕರ್ನಾಟಕ ಪಕ್ಷವನ್ನು ಬೆಂಬಲಿಸಿತ್ತು. ಪಾಂಡವಪುರ ಕ್ಷೇತ್ರದಿಂದ ಸ್ಪರ್ಧಿಸಿದ್ದ ರೈತ ಹೋರಾಟಗಾರ ಕೆ.ಎಸ್.ಪುಟ್ಟಣ್ಣಯ್ಯ ಜಯಗಳಿಸಿದ್ದರು. ಆದರೆ ಈ ಉಪ ಚುನಾವಣೆಯಲ್ಲಿ ಸರ್ವೋದಯ ಕರ್ನಾಟಕ ಕಾಂಗ್ರೆಸನ್ನು ಬೆಂಬಲಿಸಿ ತನ್ನ ಅಭ್ಯರ್ಥಿ ಕೆ.ಎಸ್. ನಂದಿನಿ ಜಯರಾಂ ಅವರನ್ನು ಕಣದಿಂದ ಹಿಂದಕ್ಕೆ ಸರಿಸಿದೆ. ಹೀಗಾಗಿ ಸರ್ವೋದಯ ಕರ್ನಾಟಕ ಪಕ್ಷಕ್ಕೆ ಮತ ಹಾಕುವಂತೆ ಮತದಾರರನ್ನು ಕೋರಲು ಅವಕಾಶ ಇಲ್ಲದಂತಾಗಿದೆ. ಸರ್ವೋದಯ ಕರ್ನಾಟಕ ಪಕ್ಷದ ಕಾಂಗ್ರೆಸ್‌ನ್ನು ಬೆಂಬಲಿಸುವ ತೀರ್ಮಾನವನ್ನು ಒಪ್ಪಿಕೊಳ್ಳುವುದೂ ಸಾಧ್ಯವಿಲ್ಲ. ವಿಧಾನಸಭಾ ಚುನಾವಣೆಯಲ್ಲಿ, ಕಾಂಗ್ರೆಸಿಗೆ ಅನಾಯಾಸ ಲಾಭವಾಗಿತ್ತು. ಕಾಂಗ್ರೆಸಿಗೆ ಮತ್ತು ಬಿಜೆಪಿಗೆ ಧೋರಣೆಗಳ ಆಧಾರದಲ್ಲಿ ಪರ್ಯಾಯವನ್ನು ಒದಗಿಸುವ ರಾಜಕೀಯ ಶಕ್ತಿ ರಾಜ್ಯದಲ್ಲಿ ಬೆಳೆದು ಬಾರದೇ ಇರುವುದರಿಂದ ಮತದಾರರು ಇಂತಹ ಅನಿವಾರ್ಯ ಆಯ್ಕೆಗಳಿಗೆ ಮೊರೆಹೋಗುತ್ತಾರೆ. ಜನಪರ ಧೋರಣೆಗಳ ಆಧಾರದಲ್ಲಿ ಕಾಂಗ್ರೆಸ್‌ಗೆ ಮತ್ತು ಬಿಜೆಪಿಗೆ ಎಡಪಕ್ಷಗಳು ಮಾತ್ರ ಪರ್ಯಾಯವನ್ನು ಒದಗಿಸಬಲ್ಲವು. ಧೋರಣೆಗಳ ಸಹಮತದೊಂದಿಗೆ ಜೆಡಿಎಸ್ ಸಿಪಿಐ(ಎಂ) ಮತ್ತು ಇತರ ಎಡಪಕ್ಷಗಳೊಂದಿಗೆ ಧೃಢವಾಗಿ ನಿಲ್ಲುವಂತಾಗಿದ್ದರೆ ರಾಜ್ಯದ ಜನತೆ ನೈಜ ಪರ್ಯಾಯವನ್ನು ಕಂಡುಕೊಳ್ಳಲು ಸಾಧ್ಯವಿತ್ತು. ಆದರೆ ಅಂತಹ ಅವಕಾಶವನ್ನು ಜೆಡಿಎಸ್ ಮತ್ತೆ ಮತ್ತೆ ಕಳೆದುಕೊಳ್ಳುತ್ತಿರುವುದು ವಿಷಾದದ ಸಂಗತಿ.

– ನಿತ್ಯಾನಂದ ಸ್ವಾಮಿ.

# "ನಿಡ್ಡೋಡಿ ಉಷ್ಣ ವಿದ್ಯುತ್ ಸ್ಥಾವರಕ್ಕಾಗಿ ಬಲವಂತದ ಭೂಸ್ವಾಧೀನ ನಿಲ್ಲಿಸಿ" – ಸಿಪಿಐ(ಎಂ)

ಮಂಗಳೂರು ತಾಲೂಕಿನ ಮೂಡಬಿದ್ರಿ ಸಮೀಪ ನಿಡ್ಡೋಡಿ ಎಂಬಲ್ಲಿ ಕೇಂದ್ರ ಸರ್ಕಾರದ ಇಂಧನ ಇಲಾಖೆಗೆ ಸೇರಿದ ಸುಮಾರು 4 ಸಾವಿರ ಮೇಘವಾಟ್ ಸಾಮರ್ಥ್ಯದ ಕಲ್ಲಿದ್ದಲು ಆಧಾರಿತ ವಿದ್ಯುತ್ ಸ್ಥಾವರಕ್ಕಾಗಿ ರೈತರ ಕೃಷಿ ಭೂಮಿಯನ್ನು ರೈತರ ಒಪ್ಪಿಗೆ ಇಲ್ಲದೆ ಬಲವಂತವಾಗಿ ಸ್ವಾಧೀನ ಪಡಿಸಿಕೊಳ್ಳಬಾರದೆಂದು ಸಿಪಿಐ(ಎಂ) ಸರ್ಕಾರವನ್ನು ಒತ್ತಾಯಿಸಿದೆ. ಈ ಯೋಜನೆಯ ವಿರುದ್ಧವಾಗಿ ದ.ಕನ್ನಡ ಜಿಲ್ಲೆಯಲ್ಲಿ ಎಲ್ಲಾ ವಿಭಾಗಳ ಜನರಿಂದ ವ್ಯಾಪಕ ಪ್ರತಿಭಟನೆಗಳು ವ್ಯಕ್ತವಾಗುತ್ತಿದ್ದು ರಾಜ್ಯ ಸರ್ಕಾರ ಅವುಗಳನ್ನು ಕಡೆಗಣಿಸಬಾರದೆಂದು ಸರಕಾರಕ್ಕೆ ಎಚ್ಚರಿಕೆ ನೀಡಿದೆ.

ಪ್ರಸ್ತಾವಿತ ವಿದ್ಯುತ್ ಸ್ಥಾವರಕ್ಕೆ ನಿಡ್ಡೋಡಿ ಪ್ರದೇಶದ ಭತ್ತ, ತೆಂಗು, ಅಡಿಕೆ, ಬಾಳೆ, ಇತ್ಯಾದಿ ಬೆಳೆಗಳನ್ನು ಬೆಳೆಯುವ ಫಲವತ್ತಾದ



ಕೃಷಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಲಾಗಿದೆ. ಕರಾವಳಿ ಜಿಲ್ಲೆಗಳಲ್ಲಿ ಲಭ್ಯವಿರುವ ಕೃಷಿ ಭೂಮಿ ತೀರಾ ಕಡಿಮೆ. ಅಂತಹ ಒಂದು ಪ್ರದೇಶದಲ್ಲಿ ನಾಲ್ಕು ಸಾವಿರ ಎಕರೆ ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕಾಗಿ ಬಳಸುವುದು ಸೂಕ್ತವಲ್ಲ. ವಿದ್ಯುತ್ ಸ್ಥಾವರ ಯೋಜನೆಗಾಗಿ ಪರ್ಯಾಯ ಭೂಮಿಯನ್ನು ಕಂಡುಕೊಳ್ಳುವುದೇ ಪ್ರಸಕ್ತ ಸಮಸ್ಯೆಗೆ ಪರಿಹಾರವಾಗಿದೆ ಎಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಕಾರ್ಯದರ್ಶಿ ಮಂಡಳಿ ಅಭಿಪ್ರಾಯಪಟ್ಟಿದೆ.

ಉಷ್ಣ ವಿದ್ಯುತ್ ಸ್ಥಾವರ ಸ್ಥಾಪನೆಯನ್ನು ಸಿಪಿಐ(ಎಂ) ಸಾರಾಸಗಟಾಗಿ ವಿರೋಧಿಸುವುದಿಲ್ಲ. ವಿದ್ಯುತ್ ಸ್ಥಾವರದಂತಹ ಅಭಿವೃದ್ಧಿಪರ ಯೋಜನೆಗಳ ವಿರುದ್ಧವಾಗಿ ಕೆಲವು ಪಟ್ಟಭದ್ರ ಪರಿಸರವಾದಿಗಳು ಅವೈಜ್ಞಾನಿಕವಾದ ವಿಚಾರಗಳನ್ನು ಪ್ರಚಾರ ಮಾಡಿ ಜನರಲ್ಲಿ ಗೊಂದಲ ಉಂಟುಮಾಡುವುದನ್ನು ಸಿಪಿಐ(ಎಂ) ವಿರೋಧಿಸುತ್ತದೆ. ಆದರೆ ಇಂತಹ ಯೋಜನೆಗಳ ಕುರಿತಾಗಿ ಜನರಲ್ಲಿ ಉಂಟಾಗಿರಬಹುದಾದ ಅನುಮಾನಗಳನ್ನು ನಿವಾರಿಸಲು ಸರ್ಕಾರ ಅಗತ್ಯವಾದ ಮತ್ತು ತಕ್ಷಣದ ಕ್ರಮಗಳನ್ನು ಕೈಗೊಳ್ಳಬೇಕು.

ನಿಡ್ಡೋಡಿಯ ಸ್ಥಾವರಕ್ಕಾಗಿ ಸಮುದ್ರದ ಉಪ್ಪು ನೀರನ್ನು ಶುದ್ಧೀಕರಿಸಿ ಬಳಸಲಾಗುತ್ತದೆಯೆಂದು ಹೇಳಲಾಗುತ್ತದೆ. ಇದು ನಿಜವಾದಲ್ಲಿ ದೊಡ್ಡ ಪ್ರಮಾಣದ ಉಪ್ಪು ನೀರು ಭೂಮಿಗೆ ಇಳಿದು ಅದರಿಂದ ಭೂಮಿ ಬರಡಾಗುವ ಅಪಾಯವಿದೆ ಎನ್ನಲಾಗುತ್ತದೆ. ಈ ಕುರಿತು ತಜ್ಞರಿಂದ ಅಭಿಪ್ರಾಯ ಪಡೆಯಲು ಅವಕಾಶ ಕಲ್ಪಿಸಬೇಕು. ಹಾರು ಬೂದಿಯಿಂದ ಉಂಟಾಗುವ ಮಾಲಿನ್ಯದ ಬಗ್ಗೆ ಜನತೆಗೆ ಇರುವ ಆತಂಕವನ್ನು ನಿವಾರಿಸಬೇಕು. ಆದ್ದ- ರಿಂದ ನಿಡ್ಡೋಡಿ ಪ್ರದೇಶದಲ್ಲಿ ಉಷ್ಣ ವಿದ್ಯುತ್ ಸ್ಥಾವರಕ್ಕಾಗಿ ಭೂ ಸ್ವಾಧೀನ ಪ್ರಕ್ರಿಯೆಯನ್ನು ತಕ್ಷಣ ನಿಲ್ಲಿಸಿ ಬಾಧಿತ ಜನರೊಂದಿಗೆ ಮುಕ್ತ ಚರ್ಚೆಯನ್ನು ಏರ್ಪಡಿಸಲು ಅಗತ್ಯವಾದ ಕ್ರಮಗಳನ್ನು ಕೈಗೊಳ್ಳಬೇಕೆಂದು ಸಿಪಿಐ(ಎಂ) ಸರ್ಕಾರವನ್ನು ಒತ್ತಾಯಿಸಿದೆ.

– ಜನಶಕ್ತಿ

# ಕೊರಗ ಕುಟುಂಬಗಳಿಗೆ ಜಿಲ್ಲಾಡಳಿತದಿಂದ ಅನ್ಯಾಯ
# ಆದಿವಾಸಿ ಹಕ್ಕುಗಳ ಸಮಿತಿಯಿಂದ ಅನಿರ್ದಿಷ್ಟ ಧರಣಿ

ಅವಿಭಜಿತ ದ.ಕ. ಜಿಲ್ಲೆಯ ಮೂಲ ನಿವಾಸಿಗಳಾದ ಕೊರಗ ಸಮುದಾಯಕ್ಕೆ ದೊರೆಯುವ ಸರ್ಕಾರದ ಹಲವಾರು ಯೋಜನೆಗಳ ಬಗ್ಗೆ ಪ್ರತೀವಾರ ಒಂದಲ್ಲ ಒಂದು ಪತ್ರಿಕಾ ಹೇಳಿಕೆಗಳನ್ನು ಜಿಲ್ಲಾಧಿಕಾರಿ, ಶಾಸಕರು, ಮಂತ್ರಿಗಳು ನೀಡುತ್ತಲೇ ಇದ್ದಾರೆ. ಈಗ ಸ್ಮಾರ್ಟ್ ಕಾರ್ಡು ಬಗ್ಗೆ ಹೇಳುತ್ತಿದ್ದಾರೆ. ಮಾಧ್ಯಮದ ಹೇಳಿಕೆಯನ್ನು ನಂಬುವುದಾದರೆ ಈ ಸಮುದಾಯದ ಸಮಗ್ರ ಅಭಿವೃದ್ಧಿ ಎಂದೋ ಆಗಬೇಕಿತ್ತು. ಆದರೆ ಆಗಿರುವುದು ಶೂನ್ಯ. ನಂತೂರಿನಲ್ಲಿ ಹೆದ್ದಾರಿ ನಿರ್ಮಾಣಕ್ಕಾಗಿ ತಮ್ಮ ಮನೆಯನ್ನು ಕಳಕೊಂಡಿರುವ ಆರು ಕೊರಗ ಕುಟುಂಬಗಳ ಅತ್ಯಂತ ಯಾತನಾಮಯ ಬದುಕೇ ಇದಕ್ಕೆ ಉಜ್ವಲ ಉದಾಹರಣೆಯಾಗಿದೆ.



ಮಂಗಳೂರು-ಬಿಸಿರೋಡು ಮಧ್ಯೆ ಚತುಷ್ಪಥ ರಸ್ತೆ ನಿರ್ಮಾಣಕ್ಕಾಗಿ ನಂತೂರಿನಲ್ಲಿ ಕಳೆದ ಎಂಭತ್ತು ವರ್ಷಗಳಿಂದ ವಾಸಿಸುತ್ತಿದ್ದ ಬಡ ಆದಿವಾಸಿ ಕೊರಗ ಕುಟುಂಬಗಳಿಗೆ ಯಾವುದೇ ರೀತಿಯ ಪರ್ಯಾಯ ವ್ಯವಸ್ಥೆಯಾಗಲೀ, ಪರಿಹಾರ ಧನವಾಗಲೀ ನೀಡದೆ ಒಕ್ಕಲೆಬ್ಬಿಸಿ ಬೀದಿ ಪಾಲು ಮಾಡಲು ಜಿಲ್ಲಾಡಳಿತ ಮತ್ತು ಹೆದ್ದಾರಿ ಇಲಾಖಾ ಪ್ರಾಧಿಕಾರ ಪ್ರಯತ್ನಿಸಿತು. ಆಗ ಇದನ್ನು ವಿರೋಧಿಸಿ ಪರ್ಯಾಯ ಭೂಮಿ, ಯೋಗ್ಯ ಪರಿಹಾರ ಧನ ಮತ್ತು ಮನೆ ನಿವೇಶನ ನೀಡಲು ಸರಕಾರ ಮುಂದಾಗಬೇಕೆಂದು ಒತ್ತಾಯಿಸಿ 2010 ರಲ್ಲಿ ಎರಡೆರಡು ಬಾರಿ ಪಾದಯಾತ್ರೆ ಮತ್ತು ಜಿಲ್ಲಾಡಳಿತದ ಎದುರು ಧರಣಿ ಕಾರ್ಯಕ್ರಮ ನಡೆಸಲಾಯಿತು. ಯಶಸ್ವಿ ಚಳುವಳಿಯ ನಂತರ ಜಿಲ್ಲಾಡಳಿತದೊಂದಿಗೆ ನಡೆದ ತ್ರಿಪಕ್ಷೀಯ ಮಾತುಕತೆಯಲ್ಲಿ ಪರಿಹಾರ ಧನವಲ್ಲದೆ ಆರು ತಿಂಗಳ ಒಳಗೆ ಪದವು ಗ್ರಾಮದ ಸರಿಪಳ್ಳದಲ್ಲಿ ಪ್ರತೀ ಕುಟುಂಬಕ್ಕೆ 5 ಸೆಂಟ್ಸ್ ಜಾಗವನ್ನು ಮಂಜೂರಾತಿ ಮಾಡುವುದು ಹಾಗೂ ಮನೆ ನಿರ್ಮಾಣಕ್ಕೆ ಸಹಾಯಧನವನ್ನು ಒದಗಿಸುವ ಭರವಸೆ ನೀಡಿತು. ಪ್ರಾರಂಭದ ಮೂರು ತಿಂಗಳಲ್ಲಿ ನಿರ್ವಸಿತ ಕುಟುಂಬಗಳು ಬಾಡಿಗೆ ಮನೆಯಲ್ಲಿ ವಾಸಿಸುವರೇ ಬಾಡಿಗೆ ಹಣವನ್ನು 2000/- ರಂತೆ ಮೂರು ತಿಂಗಳ ಹಣವನ್ನು ಮುಂಗಡವಾಗಿ ನೀಡಿತು.



ಕೃಷ್ಣಪ್ಪ ಕೊಂಚಾಡಿ

ಕಳೆದ ಫೆಬ್ರವರಿ 2011 ರಲ್ಲಿ ಭೂಮಂಜೂರಾತಿಗೆ ಸಂಬಂಧಿಸಿದ ಕಡತವನ್ನು ರಾಜ್ಯ ಸರಕಾರ ಜಿಲ್ಲಾಡಳಿತ ಸಲ್ಲಿಸಿರುವುದನ್ನು ಹೊರತುಪಡಿಸಿ ಆ ಭೂಮಂಜೂರಾತಿ 6 ತಿಂಗಳ ಒಳಗೆ ಆಗುವಂತೆ ಯಾವುದೇ ಪ್ರಯತ್ನ ಮಾಡಲಿಲ್ಲ. ಈ ತನಕ ಕನಿಷ್ಟ ಒಂದು ಪತ್ರವನ್ನೂ ಬರೆದು ತ್ವರಿತ ಮಂಜೂರಾತಿಗೆ ಪ್ರಯತ್ನಿಸಿಲ್ಲ. ಈ ತನ್ಮಧ್ಯೆ ಪದವು ಗ್ರಾಮದ ಸರಿಪಳ್ಳದಲ್ಲಿ ಭೂನಿವೇಶನದ ಬದಲು ಕಣ್ಣೂರು ಗ್ರಾಮದ ಸರ್ವೆ ನಂಬ್ರ 17/1 ರಲ್ಲಿ ಗಡಿ ಗುರುತು ಮಾಡಿ ನಕ್ಷೆ ರೂಪಿಸಿ ಹಕ್ಕು ಪತ್ರ ನೀಡುವ ಹಂತಕ್ಕೆ ಬಂದು ತಲುಪಿತು. ಆ ಬಳಿಕ ಏಕಾಏಕಿ ಕಾನೂನು ತೊಡಕಿನ ನೆಪಹೇಳಿ ಪಚ್ಚನಾಡಿ ಅಥವಾ ಶಕ್ತಿ ನಗರದಲ್ಲಿರುವ ಆಶ್ರಯ ಮನೆಯನ್ನು ನೀಡುವುದಾಗಿ ಹೇಳಿಕೊಂಡು ಜಿಲ್ಲಾಡಳಿತ ತಿಪ್ಪರಲಾಗ ಹಾಕಿದೆ. ವಿಚಿತ್ರವೆಂದರೆ ದಿನಾಂಕ 6.6.2013 ರಂದು ಜರಗಿದ ಜಿಲ್ಲಾಧಿಕಾರಿಯವರ ವಿಶೇಷ ಸಭೆಯಲ್ಲಿ ಸುರತ್ಕಲ್ ಗ್ರಾಮದ ಸರ್ವೆ ನಂಬ್ರ 211/4 ರಲ್ಲಿ ಮೀಸಲಾಗಿರುವ 1.95 ಎಕ್ರೆ ಜಮೀನಿನಲ್ಲಿ ಭೂರಹಿತ ಕೊರಗ ಕುಟುಂಬಗಳಿಗಾಗಿ ಭೂಮಿಯಲ್ಲಿ ನಿವೇಶನ ಒದಗಿಸುವ ಅಂಶ ಚರ್ಚಿತವಾಗಿದೆ. ಈ ರೀತಿ ಕಳೆದ 4 ವರುಷಗಳಿಂದ ನಿರಂತರವಾಗಿ ಮೋಸ ಮಾಡಲಾಗಿದೆ. ವಾಸ್ತವಿಕವಾಗಿ ಮನೆ ನಿವೇಶನ ಮಂಜೂರಾತಿ ಮಾಡಲು ಜಿಲ್ಲಾಡಳಿತಕ್ಕೆ ಮತ್ತು ಸರಕಾರಕ್ಕೆ ಇಚ್ಛಾಶಕ್ತಿ ಇದ್ದಂತಿಲ್ಲ. ರಾಷ್ಟ್ರೀಯ ಉದ್ದೇಶಕ್ಕಾಗಿ ಅಭಿವೃದ್ಧಿಗಾಗಿ ಭೂಮಿ ಕಳೆದುಕೊಂಡ ಈ ಸಮಾಜದ ಕೆಳ ಕಡೆಯ ಜನಾಂಗವಾದ ಕೊರಗ ಜನಾಂಗದ 6 ಕುಟುಂಬಗಳು ಬೀದಿ ಪಾಲಾಗುತ್ತಿರುವ ಈ ಅಭಿವೃದ್ಧಿ ಎಷ್ಟೊಂದು ಅಮಾನವೀಯವಾಗಿದೆ ಮತ್ತು ಹಿಂಸಾತ್ಮಕವಾಗಿದೆ ಎಂಬುದು ಇದರಿಂದ ಸ್ಪಷ್ಟವಾಗಿ ಗೋಚರವಾಗುತ್ತಿದೆ.

ಮನೆ ನಿವೇಶನ ಹಸ್ತಾಂತರವಾಗುವ ತನಕ ಮನೆ ಬಾಡಿಗೆ ಪಾವತಿಸಬೇಕೆಂದು ಪರಿಶಿಷ್ಟ ಪಂಗಡ ರಾಷ್ಟ್ರೀಯ ಆಯೋಗದ ಆದೇಶವನ್ನೂ ಜಿಲ್ಲಾಡಳಿತ ಧಿಕ್ಕರಿಸಿದೆ. ಕಳೆದ ವರ್ಷ ದಿನಾಂಕ ಜೂನ್ ತಿಂಗಳಲ್ಲಿ ಪ್ರತಿಭಟನೆ ನಡೆಸಿದ ಮೇಲೆ ಬಾಕಿ ಇರಿಸಿದ ಒಂದೂವರೆ ವರ್ಷದ ಬಾಡಿಗೆಯನ್ನು ಪಾವತಿಸಿ ಈಗ ಮತ್ತೆ ಒಂದು ವರ್ಷ ಕಳೆದಿದೆ. ಹಲವಾರು ಬಾರಿ ವಿನಂತಿಸಿದರೂ ಪ್ರಯೋಜನವಾಗಿರುವುದಿಲ್ಲ. ಅತ್ತ ಭೂಮಂಜೂರಾತಿಯೂ ಇಲ್ಲ. ಇತ್ತ ಮನೆ ಬಾಡಿಗೆಯೂ ಪಾವತಿಸದ ಜಿಲ್ಲಾಡಳಿತದ ಧೋರಣೆ ತೀವ್ರ ಖಂಡನೀಯ.

ಆದುದರಿಂದ ಬಡ ನಿರ್ವಸಿತ ಆದಿವಾಸಿ ಕೊರಗ ಕುಟುಂಬಗಳ ಬಗ್ಗೆ ನಿರಂತರವಾಗಿ ಅನ್ಯಾಯದಿಂದ ವರ್ತಿಸುತ್ತಿರುವ ಜಿಲ್ಲಾಡಳಿತ, ಮಹಾನಗರ ಪಾಲಿಕೆ, ಐಟಿಡಿಪಿ, ಸಮಾಜ ಕಲ್ಯಾಣ ಇಲಾಖೆ, ಸರಕಾರ ಮತ್ತು ಜನಪ್ರತಿನಿಧಿಗಳ ನಿರ್ಲಕ್ಷ್ಯ ಧೋರಣೆಯನ್ನು ಖಂಡಿಸಬೇಕೆಂದು ನಾಗರೀಕ ಸಮಾಜವನ್ನು ಜಾಗೃತಗೊಳಿಸುವ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ಮಂಗಳೂರು, ಸಿಪಿಐ(ಎಂ) ಮಂಗಳೂರು ನಗರ ಸಮಿತಿ ಮತ್ತು ದಲಿತ ಹಕ್ಕುಗಳ ನಗರ ಸಮಿತಿ ಮಂಗಳೂರು – ಇವರ ಸಂಯುಕ್ತ ಆಶ್ರಯದಲ್ಲಿ ಮಂಗಳೂರಿನಲ್ಲಿರುವ ಜಿಲ್ಲಾ ಸಮಗ್ರ ಬುಡಕಟ್ಟು ಅಭಿವೃದ್ಧಿ ಯೋಜನೆ ಇವರ ಕಚೇರಿ ಎದುರು 2013 ಆಗಸ್ಟ್ 12 ರಿಂದ ಅನಿರ್ದಿಷ್ಟ ಧರಣಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.



**ಮೂರು ದಿನ ಧರಣಿ ಸತ್ಯಾಗ್ರಹ ನಡೆಸಿದರೂ ಸ್ಪಂದಿಸದ ಸರಕಾರ:**

ಮಂಗಳೂರು ನಗರದಲ್ಲಿರುವ ಪಿ.ಟಿ.ಡಿ.ಪಿ. ಜಿಲ್ಲಾ ಕಚೇರಿಯ ಮುಂದೆ ಆದಿವಾಸಿ ಹಕ್ಕುಗಳ ಸಮಿತಿ, ಸಿಪಿಐ(ಎಂ) ಮತ್ತು ದಲಿತ ಹಕ್ಕುಗಳ ನಗರ ಸಮಿತಿ ನೇತೃತ್ವದಿಂದ ಧರಣಿ ಸತ್ಯಾಗ್ರಹದ ಮೂಲಕ ಪ್ರತಿಭಟನೆಯನ್ನು ಪ್ರಾರಂಭಿಸಲಾಯಿತು. ಸಿಪಿಐ(ಎಂ) ದ.ಕ. ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ವಸಂತ ಆಚಾರಿ ಪ್ರತಿಭಟನಾ ಪ್ರದರ್ಶನವನ್ನು ಉದ್ಘಾಟಿಸಿ ಮಾತನಾಡಿದರು.


ರಾಷ್ಟ್ರೀಯ ಹೆದ್ದಾರಿಗಾಗಿ ನಿರ್ವಸಿತರಾಗಿರುವ 6 ಕೊರಗ ಕುಟುಂಬಗಳಿಗೆ ಬಾಕಿಯಾಗಿರುವ ಬಾಡಿಗೆ ಪಾವತಿಸಲು ಮತ್ತು ತ್ವರಿತ ಭೂ ಮಂಜೂರಾತಿಗಾಗಿ ಆಗ್ರಹಿಸುವ ಮನವಿಯನ್ನು ಪಿ.ಟಿ.ಡಿ.ಪಿ. ಜಿಲ್ಲಾ ಸಮನ್ವಯಾಧಿಕಾರಿಗಳಿಗೆ ಸಲ್ಲಿಸಲಾಯಿತು. ಸದ್ರಿ ಮನವಿಯ ಪ್ರತಿಯನ್ನು ಮಂಗಳೂರು ನಗರ ದಕ್ಷಿಣ ಶಾಸಕರಾದ ಜೆ.ಆರ್.ಲೋಬೋ ಅವರಿಗೂ ಸಲ್ಲಿಸಲಾಯಿತು.

ಧರಣಿಯ ಉದ್ಘಾಟನೆಯ ಸಂದರ್ಭದಲ್ಲಿ ಸಿಪಿಐ(ಎಂ) ನಗರ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್, ಆದಿವಾಸಿ ಸಮನ್ವಯ ಸಮಿತಿಯ ರಾಜ್ಯ ಸಮಿತಿ ಮುಖಂಡ ಕೃಷ್ಣಪ್ಪ ಕೊಂಚಾಡಿ, ನಗರ ಸಮಿತಿಯ ಕಾರ್ಯದರ್ಶಿ ಜಯ ಕುಮಾರ್ ಕೋಡಿಕಲ್, ದಲಿತ ಹಕ್ಕುಗಳ ಸಮಿತಿಯ ನಗರ ಕಾರ್ಯದರ್ಶಿ ಲಿಂಗಪ್ಪ ನಂತೂರು, ಸಿಪಿಐ(ಎಂ) ಜಿಲ್ಲಾ ಮುಖಂಡರಾದ ಜೆ.ಬಾಲಕೃಷ್ಣ ಶೆಟ್ಟಿ, ಜಯಂತಿ ಬಿ.ಶೆಟ್ಟಿ ಮತ್ತಿತರರು ಭಾಗವಹಿಸಿದ್ದರು.

ಮೂರು ದಿನಗಳ ಕಾಲ ಧರಣಿ ಸತ್ಯಾಗ್ರಹ ನಡೆಸಿದ್ದರೂ ಜಿಲ್ಲಾಡಳಿತದಿಂದ ಪರ್ಯಾಯ ವ್ಯವಸ್ಥೆಯ ಬಗ್ಗೆಯಾಗಲೀ ಬಾಡಿಗೆ ಬಾಕಿ ಪಾವತಿ ಬಗ್ಗೆಯಾಗಲೀ ಯಾವುದೇ ಸಂದೇಶ ಬಂದಿರುವುದಿಲ್ಲ. ಈ ನಿಟ್ಟಿನಲ್ಲಿ ಜಿಲ್ಲಾಡಳಿತ ಮತ್ತು ಸಾರ್ವಜನಿಕರ ಗಮನ ಸೆಳೆಯಲು ಧರಣಿಯನ್ನು ಮೂರನೇ ದಿನಕ್ಕೆ ನಿಲ್ಲಿಸಿ, ನಾಲ್ಕನೆಯ ದಿನ ಜಿಲ್ಲಾಡಳಿತದ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ಕಾರ್ಯಕ್ರಮವೊಂದನ್ನು ಆಯೋಜಿಸಲಾಯಿತು. (ಆಗಸ್ಟ್ 14 ರಂದು ಈ ಕುರಿತು ಜಿಲ್ಲಾಡಳಿತ ಪ್ರತಿಭಟನಾಕಾರರೊಂದಿಗೆ ಮಾತುಕತೆ ನಡೆಸಿದ್ದು ಆಗಸ್ಟ್ 25ರೊಳಗೆ ಕ್ರಮ ವಹಿಸುದಾಗಿ ಹೇಳಿ ಗಡುವು ಪಡೆದುಕೊಂಡಿದೆ.)

ವಿವಿಧ ಸಂಘಟನೆಗಳ ಮುಖಂಡರು ಧರಣಿ ಸ್ಥಳಕ್ಕೆ ಭೇಟಿ ಇತ್ತು ಪ್ರತಿಭಟನಾಕಾರರಿಗೆ ಬೆಂಬಲ ಸೂಚಿಸಿದರು. ಸಮುದಾಯದ ವಾಸುದೇವ ಉಚ್ಚಿಲ, ಕಾರ್ಪರೇಟರ್ ಹಾಗೂ ಡಿವೈಎಫ್ಐ ಜಿಲ್ಲಾ ಸಮಿತಿ ಕಾರ್ಯದರ್ಶಿ ದಯಾನಂದ ಶೆಟ್ಟಿ, ನಗರ ಸಮಿತಿ ಅಧ್ಯಕ್ಷ ಬಿ.ಕೆ.ಇಮ್ತಿಯಾಜ್ ಮತ್ತಿತರರು ಬೆಂಬಲಿಸಿ ಮಾತನಾಡಿದರು. ದಲಿತ ಹಾಗೂ ಆದಿವಾಸಿ ಸಮಿತಿಗಳ ಮುಖಂಡರಾದ ತಿಮ್ಮಯ್ಯ, ಕಿಶೋರ್ ಪೊರ್ಕೋಡಿ, ಸರೋಜ, ಯಮುನಾ ಪಚ್ಚನಾಡಿ, ಮೀನ ಕೈಕಂಬ ಮತ್ತಿತರರು ಧರಣಿಯಲ್ಲಿ ಭಾಗವಹಿಸಿದ್ದರು.

ಜನಶಕ್ತಿ
ಕನ್ನಡ ವಾರಪತ್ರಿಕೆ



# ಪರ್ಯಾಯ ಧೋರಣೆಗಳ ದಾರಿ-ದಿಕ್ಕು ಅನಿವಾರ್ಯ

## ಎಂದು ಮತ್ತೊಮ್ಮೆ ದೃಢಪಡಿಸಿದ ಪ್ರಧಾನ ಮಂತ್ರಿಗಳ ಸ್ವಾತಂತ್ರ್ಯದಿನದ ಭಾಷಣ

ಡಾ.ಮನಮೋಹನ್‌ಸಿಂಗ್ ಅವರ 10ನೇ ಮತ್ತು ಯುಪಿಎ-2 ಪ್ರಧಾನ ಮಂತ್ರಿಯಾಗಿ ಕೊನೆಯ ಸ್ವಾತಂತ್ರ್ಯ ದಿನದ ಭಾಷಣ 2014ರ ಚುನಾವಣಾ ಪ್ರಚಾರದ ಯೋಜನೆಗೆ ಅಸ್ತಿಭಾರ ಹಾಕಿದ, ಅವರ ಸರಕಾರದ 'ಸಾಧನೆ'ಗಳ ಪಟ್ಟಿಯೇ ಆಗಿದೆ. ಕಳೆದ 9 ವರ್ಷಗಳ ಉನ್ನತ ಆರ್ಥಿಕ ಬೆಳವಣಿಗೆ ದರದ ದಿಕ್ಕನ್ನು ಕಾಯ್ದುಕೊಳ್ಳಲು ಸಾಧ್ಯವಾದರೆ, ನಮ್ಮ ಜನತೆಯ ಸಮೃದ್ಧಿಯ ಮಟ್ಟಗಳನ್ನು ಬಹಳಷ್ಟು ಉತ್ತಮಪಡಿಸಬಹುದು ಎಂಬುದು ಸ್ವತಂತ್ರ ಭಾರತದ ದಶಕವಾರು ಬೆಳವಣಿಗೆ ಮತ್ತು ಅಭಿವೃದ್ಧಿಯ ಹೊಸದೊಂದು ಸಿದ್ಧಾಂತವನ್ನು ಮುಂದಿಟ್ಟಿರುವ ಪ್ರಧಾನ ಮಂತ್ರಿಗಳ ಈ ಭಾಷಣದ ಇಡೀ ಒತ್ತು.

ಸೀತಾರಾಂ ಯೆಚೂರಿ

ಸ್ವಾತಂತ್ರ್ಯ ದಿನದ ಸಂದರ್ಭದಲ್ಲಿ ಪ್ರಧಾನ ಮಂತ್ರಿಗಳು ಸಂಪ್ರದಾಯದಂತೆ ಕೆಂಪು ಕೋಟೆಯಿಂದ ದೇಶವನ್ನುದ್ದೇಶಿಸಿ ಮಾತನಾಡಿದ್ದಾರೆ. ಡಾ. ಮನಮೋಹನ್ ಸಿಂಗ್ ಸತತ ಹತ್ತನೇ ಬಾರಿಗೆ ತನ್ನ ಭಾಷಣ ಮಾಡಿದ್ದಾರೆ. ಯುಪಿಎ-2 ಸರಕಾರದ ಪ್ರಧಾನ ಮಂತ್ರಿಯಾಗಿ ಇದು ಅವರ ಕೊನೆಯ ಭಾಷಣ. ಏಕೆಂದರೆ 2014ರ ಸ್ವಾತಂತ್ರ್ಯ ದಿನದ ಮೊದಲೇ ಸಾರ್ವತ್ರಿಕ ಚುನಾವಣೆ ನಡೆಯಲಿದೆ.

ಇಂತಹ ಸನ್ನಿವೇಶದಲ್ಲಿ ದೇಶವನ್ನುದ್ದೇಶಿಸಿ ಮಾಡಿದ ಪ್ರಧಾನ ಮಂತ್ರಿಗಳ ಭಾಷಣ ಅವರ ಸರಕಾರದ 'ಸಾಧನೆ'ಗಳ ಪಟ್ಟಿಯೇ ಆಗಿತ್ತು. ಈ ಮೂಲಕ ಅವರು 2014ರ ಚುನಾವಣಾ ಪ್ರಚಾರದ ಯೋಜನೆಗೆ ಅಸ್ತಿಭಾರ ಹಾಕಿದ್ದಾರೆ. ಈ ಸರಕಾರದ ಪ್ರಮುಖ ಖ್ಯಾತಿ ಆಹಾರ ಭದ್ರತಾ ಮಸೂದೆ ಎಂಬುದು ಆ ಚುನಾವಣಾ ಪ್ರಚಾರದ ಪ್ರಧಾನ ಅಂಶವಾಗಿರುತ್ತದೆ ಎಂದು ಯಾರಾದರೂ ಊಹಿಸಿಕೊಳ್ಳಬಹುದು. ಇದು "ಇಡೀ ಜಗತ್ತಿನಲ್ಲಿಯೇ ಈ ಮಾದರಿಯ ಅತ್ಯಂತ ದೊಡ್ಡ ಪ್ರಯತ್ನ" ಎಂದು ಪ್ರಧಾನ ಮಂತ್ರಿಗಳು ತಮ್ಮ ಭಾಷಣದಲ್ಲಿ ಹೇಳಿಕೊಂಡಿದ್ದಾರೆ.

**'ನೂರು ದಿನಗಳು ಕಳೆದರೂ.....**

ಆದರೆ ಈ ಮಸೂದೆ ನಮ್ಮ ಜನತೆಗೆ ಒಂದು ಅರ್ಥಪೂರ್ಣ ಆಹಾರ ಭದ್ರತೆಯನ್ನಂತೂ ಒದಗಿಸುವ ರೀತಿಯಲ್ಲಿಲ್ಲ ಎಂದು ನಾವು ಈ ಅಂಕಣದಲ್ಲಿ ಹಲವು ಬಾರಿ ಹೇಳಿದ್ದೇವೆ. ಆದ್ದರಿಂದ ಸಂಸತ್ತಿನಲ್ಲಿ ಈ ಮಸೂದೆ ಚರ್ಚೆಗೆ ಬಂದಾಗ ನಮ್ಮೆಲ್ಲ ಜನತೆಗೆ ಅದನ್ನು ಅರ್ಥಪೂರ್ಣಗೊಳಿಸಲು ನಾವು ನಿರ್ದಿಷ್ಟ ತಿದ್ದುಪಡಿಗಳನ್ನು ಮಂಡಿಸಲಿದ್ದೇವೆ. ಈ ಯುಪಿಎ-2 ಸರಕಾರ ಅಧಿಕಾರ ವಹಿಸಿಕೊಂಡಾಗ ಮೊದಲ 100 ದಿನಗಳಲ್ಲಿ ಆಹಾರ ಭದ್ರತೆಯನ್ನು ಒದಗಿಸುವ ಕಾನೂನು ತರುವುದಾಗಿ ಆಶ್ವಾಸನೆ ನೀಡಿತ್ತು. ಅಂತಹ 15 'ನೂರು ದಿನಗಳು' ಕಳೆದು ಹೋದರೂ ಇನ್ನೂ ಅಂತಹ ಒಂದು ಕಾನೂನು ಬಂದಿಲ್ಲ.

ಈ ಧಾಟಿಯಲ್ಲಿ ಮಾತಾಡುತ್ತ ಪ್ರಧಾನಿಗಳು ಸ್ವತಂತ್ರ ಭಾರತದ ದಶಕವಾರು ಬೆಳವಣಿಗೆ ಮತ್ತು ಅಭಿವೃದ್ಧಿಯ ಹೊಸದೊಂದು ಸಿದ್ಧಾಂತವನ್ನು ಮುಂದಿಟ್ಟಿದ್ದಾರೆ. ಜವಹರಲಾಲ್ ನೆಹರೂರವರ ನೇತೃತ್ವದ ದಶಕಗಳಿಂದ ಆರಂಭಿಸಿ, ಇಂದಿರಾಗಾಂಧಿ ನೇತೃತ್ವದ, ನಂತರ ರಾಜೀವ ಗಾಂಧಿಯವರ ಮತ್ತು ನರಸಿಂಹರಾವ್ ನೇತೃತ್ವದ ದಶಕಗಳ ಮೂಲಕ ಆ ಎಳೆಯನ್ನು ಒಯ್ದು ತನ್ನದೇ ಉಸ್ತುವಾರಿಯ ಅಡಿಯಲ್ಲಿನ ದಶಕದ ವರೆಗೆ ತಂದು ನಿಲ್ಲಿಸುತ್ತಾರೆ. ನಿಜ, ಅವರ ಮಟ್ಟಿಗೆ ಈ ಎಳೆ ಕೇವಲ ಕಾಂಗ್ರೆಸ್ ಪಕ್ಷದ ಪ್ರಧಾನ ಮಂತ್ರಿಗಳ ಮೂಲಕ ಹಾದು ಹೋಗಿದೆ. "ಕಳೆದ ದಶಕ ಕೂಡ ನಮ್ಮ ದೇಶದ ಚರಿತ್ರೆಯಲ್ಲಿ ಪ್ರಮುಖ ಬದಲಾವಣೆಗಳ ಒಂದು ದಶಕ" ಎಂಬುದು ಅವರ ನಂಬಿಕೆಯಂತೆ. "ಬೇರೆ ಯಾವ ದಶಕದಲ್ಲೂ ನಮ್ಮ ಆರ್ಥಿಕ ಬೆಳವಣಿಗೆ ಈ ದಶಕದಷ್ಟು ಹೆಚ್ಚಿರಲಿಲ್ಲ. ಪ್ರಜಾಪ್ರಭುತ್ವ ಶಕ್ತಿಗಳು ಬಲಗೊಂಡಿವೆ, ನಮ್ಮ ಸಮಾಜದ ಹಲವು ವಿಭಾಗಗಳು ಮೊದಲ ಬಾರಿಗೆ ಅಭಿವೃದ್ಧಿಯ ಮುಖ್ಯಧಾರೆಗೆ ಬಂದಿವೆ" ಜನಸಾಮಾನ್ಯನಿಗೆ ಹೊಸ ಹಕ್ಕುಗಳನ್ನು ಕೊಡಲಾಗಿದೆ, ಅವು ಆತನ ಸಾಮಾಜಿಕ ಮತ್ತು ಆರ್ಥಿಕ ಸಬಲೀಕರಣಕ್ಕೆ ಹಾದಿ ಮಾಡಿಕೊಟ್ಟಿವೆ" ಎಂದು ಅವರು ಹೇಳಿದ್ದಾರೆ.

ಇಂತಹ ಆಡಂಬರದ ದಾವೆಗಳಿಗೆ ಆಧಾರ ಜಿಡಿಪಿ ಬೆಳವಣಿಗೆಯ ಉನ್ನತ ಮಟ್ಟಗಳು. "ಕಳೆದ ಒಂಭತ್ತು ವರ್ಷಗಳಲ್ಲಿ ನಮ್ಮ ಆರ್ಥಿಕ ಸರಾಸರಿ ವಾರ್ಷಿಕ 7.9ಶೇ. ದರದಲ್ಲಿ ಬೆಳೆದಿದೆ. ಅಭಿವೃದ್ಧಿಯ ಈ ವೇಗ ಇದುವರೆಗಿನ ಯಾವುದೇ ದಶಕದಲ್ಲೂ ಅತೀ ಹೆಚ್ಚು"

**ಬಡತನ ಇಳಿದಿದೆಯೆಂಬ ಆಡಂಬರಪೂರ್ಣ ದಾವೆ**

ನಿಜ, ಬೆಳವಣಿಗೆಯ ಈ ದಿಕ್ಪಥ ಕಳೆದ ದಶಕದಲ್ಲಿ ಎರಡು ಭಾರತಗಳನ್ನು ಸೃಷ್ಟಿಸಿದೆ, ಆ ಎರಡರ ನಡುವಿನ ಕಂದರ ಸತತವಾಗಿ ಬೆಳೆಯುತ್ತಲೇ ಇದೆ ಎಂಬ ಸಂಗತಿಯ ಪ್ರಸ್ತಾಪ ಇಲ್ಲಿ ಇಲ್ಲ. ಈ ವಾಸ್ತವತೆಗೆ ಎದುರಾಗಿಯೋ ಎಂಬಂತೆ ಪ್ರಧಾನ ಮಂತ್ರಿಗಳು ನಮ್ಮ ದೇಶದಲ್ಲಿ ಬಡತನದ ಮಟ್ಟ ಇಳಿಯುತ್ತಿದೆ ಎಂದಿದ್ದಾರೆ. "ಬಡತನವನ್ನು ಅಳೆಯುವುದು ಕಷ್ಟದ ಕೆಲಸ. ಬಡತನ ಎಂದರೆ ಏನು ಎಂಬ ಬಗ್ಗೆ ವಿಭಿನ್ನ ಅಭಿಪ್ರಾಯಗಳಿವೆ. ಆದರೆ ಯಾವುದೇ ನಿರೂಪಣೆಯನ್ನು ನಾವು ಅಂಗೀಕರಿಸಿದರೂ, 2004ರ ನಂತರ ಬಡತನದ ಇಳಿಕೆಯ ವೇಗ ಹೆಚ್ಚಿದೆ ಎಂದು ಯಾರೂ ನಿರಾಕರಿಸುವಂತಿಲ್ಲ" ಎಂಬುದು ಅವರ ಇನ್ನೊಂದು ಆಡಂಬರಪೂರ್ಣ ದಾವೆ.

ಇಂತಹ ದಾವೆಗಳು ಎಷ್ಟು ಅಸಂಬದ್ಧ ಎಂಬುದನ್ನು ಈ ಅಂಕಣಗಳಲ್ಲಿ ನಾವು ಹಲವು ಬಾರಿ ತೋರಿಸಿ ಕೊಟ್ಟಿದ್ದೇವೆ. 2009-10ರ ವೇಳೆಗೆ 75.5ಶೇ. ಗ್ರಾಮೀಣ ವ್ಯಕ್ತಿಗಳಿಗೆ ಆಹಾರೇತರ ಆವಶ್ಯಕತೆಗಳನ್ನು(ಉತ್ಪಾದಿತ ಸರಕುಗಳು, ಸೇವೆಗಳು, ಶಿಕ್ಷಣ, ಆರೋಗ್ಯ, ಸಾರಿಗೆ ಇತ್ಯಾದಿ) ಪೂರೈಸಿಕೊಂಡ ನಂತರ ದಿನಕ್ಕೆ 2200 ಕ್ಯಾಲರಿ ಶಕ್ತಿ ಲಭ್ಯವಾಗುವಷ್ಟು ಆಹಾರ ಪಡೆಯಲು ಸಾಧ್ಯವಾಗುತ್ತಿಲ್ಲ. ಅದೇ ರೀತಿ ನಗರ ಪ್ರದೇಶಗಳಲ್ಲೂ 2100 ಕ್ಯಾಲರಿ ಲಭ್ಯವಾಗುವಷ್ಟು ಆಹಾರ ಪಡೆಯಲು ಸಾಧ್ಯವಾಗುತ್ತಿಲ್ಲ ಎಂದು ಪ್ರಖ್ಯಾತ ಆರ್ಥಿಕ ತಜ್ಞೆ ಡಾ. ಉತ್ಸಾ ಪಟ್ನಾಯಕ್ ಅವರು ಬೊಟ್ಟು ಮಾಡಿ ತೋರಿಸಿರುವುದು ಬಹಳ ಔಚಿತ್ಯಪೂರ್ಣ. 2004ರಲ್ಲಿ ಈ ಪ್ರಮಾಣ ಗ್ರಾಮೀಣ ಪ್ರದೇಶಗಳಲ್ಲಿ 69.5ಶೇ. ಮತ್ತು ನಗರ ಪ್ರದೇಶಗಳಲ್ಲಿ 54.5ಶೇ. ಇತ್ತು. ಅಂದರೆ ಬಡತನದಲ್ಲಿ ಗಮನಾರ್ಹ ಹೆಚ್ಚಳವಾಗಿದೆ. ಎನ್‌ಎಸ್‌ಎಸ್(ರಾಷ್ಟ್ರೀಯ ಮಾದರಿ ಸರ್ವೆ) 2011-12ರ ಪೋಷಣಾಂಶ ಲಭ್ಯತೆಯ ಮಾಹಿತಿಯನ್ನು ಬಿಡುಗಡೆ ಮಾಡಿದ ನಂತರ ಆ ವರ್ಷದ ವರೆಗೆ ಏನು ಬದಲಾವಣೆಯಾಗಿದೆ ಎಂಬುದನ್ನು ನಾವು ಕಾಣಬಹುದು. ಆದರೆ ವಿಪರೀತ ಹಣದುಬ್ಬರ ಮತ್ತು ಉದ್ಯೋಗಾವಕಾಶ ನಿರ್ಮಾಣದಲ್ಲಿ ನಿಧಾನಗತಿಯನ್ನು ನೋಡಿದರೆ, ಪರಿಸ್ಥಿತಿ ಇನ್ನಷ್ಟು ಹದಗೆಟ್ಟಿರದಿದ್ದರೆ, ಇದಕ್ಕಿಂತ ಉತ್ತಮಗೊಂಡಿರುವ ಸಾಧ್ಯತೆಯಂತೂ ಇಲ್ಲ. ಬಡತನದ ರೇಖೆ ಕುರಿತ ಸ್ವತಃ ಯೋಜನಾ ಆಯೋಗದ ಮೂಲ ನಿರೂಪಣೆಯನ್ನು ಅನ್ವಯಿಸಿಯೇ ಉತ್ಸಾ ಪಟ್ನಾಯಕ್ ಅವರು ಈ ಲೆಕ್ಕಾಚಾರಕ್ಕೆ ಬಂದಿರುವುದು. ಖಾಸಗೀಕರಣಗೊಂಡ ಆರೋಗ್ಯ ಸೇವೆ, ಶಿಕ್ಷಣ ಮತ್ತು ವಿದ್ಯುತ್, ಪೆಟ್ರೋಲ್, ಗ್ಯಾಸ್ ಮುಂತಾದ ಸೇವೆಗಳ ಖರ್ಚುಗಳು ತ್ವರಿತವಾಗಿ ಏರುತ್ತಿರುವ, ಅದರ ಜೊತೆಗೆ ವಿಪರೀತ ಆಹಾರ ಹಣದುಬ್ಬರ ನಿಜವಾಗಿಯೂ ಬಡವರಾಗಿರುವ ಬಹುಪಾಲು ಮಂದಿಗೆ ಕೈಗೆಟಕುವ ಪಡಿತರ ವ್ಯವಸ್ಥೆಯಿಂದ ಹೊರಗಿಟ್ಟಿರುವ ಹಿನ್ನೆಲೆಯಲ್ಲಿ ಬಹುಪಾಲು ಜನಗಳ ಬಡತನ ಹೆಚ್ಚುತ್ತಿದ್ದರೆ, ಅವರ ಪೋಷಣಾಂಶ ಮಟ್ಟ ಹಿಂದಿಗಿಂತಲೂ ತ್ವರಿತವಾಗಿ ಇಳಿಯುತ್ತಿದ್ದರೆ, ಅದರಲ್ಲಿ ಆಶ್ಚರ್ಯವೇನೂ ಇರದು ಎಂದು ಅವರು ಹೇಳುತ್ತಾರೆ.

ಆಹಾರ ಮತ್ತು ಕೃಷಿ ಸಂಘಟನೆ(ಎಫ್‌ಎಒ) ಭಾರತದ ಜನಸಂಖ್ಯೆಯ 22ಶೇ. ಮಂದಿಗೆ ಪೋಷಕಾಂಶಗಳ ಕೊರತೆ ಇದೆ ಎಂದು ಅಂದಾಜು ಮಾಡಿದೆ. ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಪೋಷಕಾಂಶಗಳ ಕೊರತೆಯಿಂದಾಗಿ ಅಗತ್ಯಕ್ಕಿಂತ ಕಡಿಮೆ ತೂಕವಿರುವ ಮಕ್ಕಳಲ್ಲಿ 42 ಶೇ.ದಷ್ಟು ಭಾರತದಲ್ಲಿ ಇದ್ದಾರೆ ಎಂದು ಯುನಿಸೆಫ್ ಲೆಕ್ಕ ಹಾಕಿದೆ. ನಿಜಸಂಗತಿಯೆಂದರೆ ಸ್ವತಃ ಪ್ರಧಾನ ಮಂತ್ರಿಗಳೇ ವಿಪರೀತ ಪೋಷಕಾಂಶ ಕೊರತೆ, ಅದರಲ್ಲೂ ಮಕ್ಕಳ ನಡುವೆ ಇರುವ ಬಗ್ಗೆ ಹಲುಬುತ್ತ ಇದು 'ರಾಷ್ಟ್ರೀಯ ನಾಚಿಕೆ'ಯ ಸಂಗತಿ ಎಂದು ಹೇಳಿ ಬಹಳ ಕಾಲವೇನೂ ಆಗಿಲ್ಲ. ಆದರೂ ಇಂದು ಅವರು ಇಂತಹ ಆಡಂಬರದ ಹೇಳಿಕೆ ನೀಡಿದ್ದಾರೆ.

**ಕೃಷಿ ಬೆಳವಣಿಗೆಯ ಠಕ್ಕುತನದ ಮಾತು**

ಆಶ್ಚರ್ಯವೆಂದರೆ, ಕೃಷಿ ವಲಯದ ಬೆಳವಣಿಗೆ ಸಾಕಷ್ಟು ತೃಪ್ತಿಕರವಾಗಿದೆ ಎಂದಿದ್ದಾರೆ ಪ್ರಧಾನಿಗಳು. "ನಮ್ಮ ಆಹಾರಧಾನ್ಯ ಉತ್ಪಾದನೆ 2011-12ರಲ್ಲಿ 25.9ಕೋಟಿ ಟನ್ ಆಗಿದೆ" ಎಂದು ಅವರು ಹಿಗ್ಗಿನಿಂದ ಹೇಳುತ್ತಾರೆ. "ಕಳೆದ 9 ವರ್ಷಗಳಲ್ಲಿ ಹಿಂದೆಂದೂ ಕಂಡಿರದ ಪ್ರಮಾಣದಲ್ಲಿ ವಿವಿಧ ಬೆಳೆಗಳಿಗೆ ಬೆಂಬಲ ಬೆಲೆಗಳನ್ನು ಹೆಚ್ಚಿಸಲಾಗಿದೆ. ಗೋಧಿ ಮತ್ತು ಭತ್ತದ ಬೆಂಬಲ ಬೆಲೆಗಳು ದುಪ್ಪಟ್ಟಿಗಿಂತಲೂ ಹೆಚ್ಚಾಗಿವೆ" ಎಂದು ಅವರು ಹೇಳುತ್ತಾರೆ. ಇದೇ ವಿಷಯದಲ್ಲಿ ಕೇಂದ್ರ ಕೃಷಿ ಮಂತ್ರಿಗಳು ಏನು ಹೇಳಿದ್ದಾರೆ ಎಂಬುದನ್ನು ಗಮನಿಸಿ: ರಾಜ್ಯಸಭೆಯಲ್ಲಿ ನವಂಬರ್ 30, 2012ರಂದು ಕೃಷಿ ಉತ್ಪಾದನೆಯ ಖರ್ಚಿನ ಏರಿಕೆಯ ಬಗ್ಗೆ ಒಂದು ಪ್ರಶ್ನೆಗೆ ಉತ್ತರಿಸುತ್ತ, 'ಕೃಷಿ ಖರ್ಚುಗಳು ಮತ್ತು ಬೆಲೆಗಳ ಆಯೋಗ' ಒದಗಿಸಿದ ಮಾಹಿತಿಗಳ ಪ್ರಕಾರ, 2011-12 ಮತ್ತು 2012-13ರ ನಡುವೆ ಒಂದು ಕ್ವಿಂಟಾಲ್ ಭತ್ತದ ಉತ್ಪಾದನೆಯ ಖರ್ಚು 146 ರೂ.ನಷ್ಟು ಹೆಚ್ಚಿದರೆ, ಕನಿಷ್ಟ ಬೆಂಬಲ ಬೆಲೆಗಳಲ್ಲಿ ಏರಿಕೆಯಾದದ್ದು ಕೇವಲ 80ರೂ.ನಷ್ಟು. ಅದೇ ರೀತಿಯಲ್ಲಿ, ಈ ಅವಧಿಯಲ್ಲಿ ಗೋದಿಯ ಉತ್ಪಾದನಾ ಖರ್ಚು ಕ್ವಿಂಟಾಲಿಗೆ 171ರೂ.ಷ್ಟು ಹೆಚ್ಚಿದರೆ, ಕನಿಷ್ಟ ಬೆಂಬಲ ಬೆಲೆ ಕೇವಲ 65ರೂ.ಷ್ಟು ಹೆಚ್ಚಿತು ಎಂದು ಕೃಷಿಮಂತ್ರಿಗಳು ಹೇಳಿದ್ದಾರೆ. ಹೀಗೆ ಸರಕಾರ ರೈತರಿಗೆ ಒಂದು ಪುಷ್ಕಳವಾದ ಬೆಂಬಲ ಬೆಲೆ ಒದಗಿಸುತ್ತಿದೆ ಎಂಬುದು ಒಂದು ಠಕ್ಕುತನವಷ್ಟೇ.

ಒಟ್ಟಾರೆಯಾಗಿ, ನಮ್ಮ ದೇಶದ ಕೃಷಿ ವಲಯಕ್ಕೆ ಹತ್ತನೇ ಮತ್ತು ಹನ್ನೊಂದನೇ ಪಂಚವಾರ್ಷಿಕ ಯೋಜನೆಗಳ ಅವಧಿಯಲ್ಲಿ ಇಟ್ಟಿದ್ದ 4ಶೇ. ಬೆಳವಣಿಗೆಯ ಗುರಿಯನ್ನು ಸಾಧಿಸುವುದು ಸಾಧ್ಯವಾಗಲಿಲ್ಲ. ಕೃಷಿ ಸಂಕಟ ಯಾವ ರೀತಿಯದ್ದು ಎಂಬುದರ ವ್ಯಾಪಕ

( ಪುಟ 10 ಕ್ಕೆ )


ವಿಧುರಾಶ್ವತ್ಥ ಸತ್ಯಾಗ್ರಹದ ಹುತಾತ್ಮರ ನೆನಪಿನ ಸ್ಮಾರಕ

# ವಿಧುರಾಶ್ವತ್ಥ : ಕರ್ನಾಟಕದ 'ಜಲಿಯನ್ ವಾಲಾಭಾಗ್'ಗೆ 75 ವರ್ಷ

'1938' ಭಾರತದ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆಯಲರ್ಹವಾದ ವರ್ಷ. ಅದು ಮೈಸೂರು ಸಂಸ್ಥಾನವು ಬ್ರಿಟಿಷ್ ಆಡಳಿತದ ಅಧೀನದಲ್ಲಿದ್ದ ಕಾಲ. ಮೈಸೂರು ಸಂಸ್ಥಾನ ಬ್ರಿಟಿಷ್ ಅಧೀನರಾಗಿದ್ದುದರಿಂದ ಸಂಸ್ಥಾನದ ಪ್ರಜೆಗಳು ಬ್ರಿಟಿಷ್‌ರ ಶೋಷಣೆಗೂ ಒಳಗಾಗಿದ್ದರು.

ಮೈಸೂರು ಸಂಸ್ಥಾನದ ಜನತೆಯಲ್ಲಿಯೂ 'ಸ್ವಾತಂತ್ರ್ಯ'ದ ಕಲ್ಪನೆ ಉಂಟಾಗಿ ಸರ್ಕಾರದ ವಿರುದ್ಧ ಆಂದೋಲನ ಗರಿಗೆದರಿತು. ಒಡೆಯರ ಆಡಳಿತ ಈ ಪ್ರಚಾರ-ಕ್ಕೆ ಅಡ್ಡಿಪಡಿಸಲಾರಂಭಿಸಿ ಪ್ರಚಾರ ಸಭೆಗಳು ನಡೆಯದಂತೆ ನಿರ್ಬಂಧಗಳನ್ನು ವಿಧಿಸಿತು. ವಿನಾಕಾರಣ ಈ ನಾಯಕರುಗಳ ಮೇಲೆ ಕಲ್ಪಿತ ಕಥೆಗಳನ್ನು ಕಟ್ಟಿ ಕಠಿಣ ಶಿಕ್ಷೆಗೆ ಗುರಿಪಡಿಸಲಾಗುತ್ತಿತ್ತು. ಸ್ವಾತಂತ್ರ್ಯಕ್ಕಾಗಿ ಧ್ವನಿ ಎತ್ತಿದವರ ಮೇಲೆ ದಬ್ಬಾಳಿಕೆಗಳು ನಡೆಯುತ್ತಿದ್ದವು. ಇದನ್ನು ಪ್ರತಿಭಟಿಸಿದ ಜನರು ಚಳುವಳಿಗಳನ್ನು ಹೂಡಿ 'ಜವಾಬ್ದಾರಿ ಸರಕಾರ' ಬರಬೇಕೆಂದು ಆಗ್ರಹಿಸತೊಡಗಿದರು. ಜನತೆಯಲ್ಲಿ ಸ್ವಾತಂತ್ರ್ಯ ಸಾಧನೆಯ ಕೆಚ್ಚು ಹೆಚ್ಚ ತೊಡಗಿತು.

ಬೆಂಗಳೂರು ತುಮಕೂರು ಮುಂತಾದ ಕಡೆಗಳಲ್ಲಿ ಚಳುವಳಿಯ ಹಲವು ನಾಯಕರನ್ನು ಸರ್ಕಾರವು ದಸ್ತಗಿರಿ ಮಾಡಿದರೂ 1938 ಜನವರಿ 26 ರಂದು ಸ್ವ-ರಾಜ್ಯ ದಿನಾಚರಣೆಯನ್ನು ನಡೆಸಲಾಯಿತು. ಬೆಂಗಳೂರಿನಲ್ಲಿ ಗಾಂಧಿ ಮೈದಾನದಲ್ಲಿ ಸಭೆ ನಡೆಸಿದ ಜನರ ಮೇಲೆ ಪೋಲಿಸರ ಲಾಟಿ ಚಾರ್ಜು ನಡೆಯಿತು.

**ಶಿವಪುರ ಧ್ವಜ ಸತ್ಯಾಗ್ರಹಕ್ಕೆ 75 ವರ್ಷ**

ಮೈಸೂರಿನಲ್ಲಿ ಜಿಲ್ಲಾ ಕಾಂಗ್ರೆಸ್ ತಲೆ ಎತ್ತಿತ್ತು. 1938ರ ಜನವರಿ 26ರಂದು ಅನೇಕ ಮುಖಂಡರು ತ್ರಿವರ್ಣ ಧ್ವಜ ಹಾರಿಸಿದರು. ಈ ಕಾರಣಕ್ಕೆ ಅವರನ್ನು ದಸ್ತಗಿರಿ ಮಾಡಲಾಯಿತು. ಇದ-ರಿಂದ ರೊಚ್ಚಿಗೆದ್ದ ಚಳುವಳಿ ನಾಯಕರು ಮೈಸೂರಿನ ಹೊರಗೆ ಧ್ವಜ ಸತ್ಯಾಗ್ರಹ ನಡೆಸಲು ತೀರ್ಮಾನಿಸಿದರು.

ಮುಖಂಡರ ನಡುವೆ ಹಲವು ವಾದ, ಪ್ರತಿವಾದಗಳ ನಂತರ ಮದ್ದೂರಿನ ಶಿಂಷಾನದಿಯ ಪರಿಸರದ ಶಿವಪುರದಲ್ಲಿ ಅಧಿವೇಶನ ನಡೆಸಲು ತೀರ್ಮಾನಿಸಲಾಯಿತು. ಇದಕ್ಕೆ 'ರಾಷ್ಟ್ರಕೂಟ' ಸತ್ಯಾಗ್ರಹ ಎಂದು ಕರೆದರು. ಶಿವಪುರದ ಸ್ವಾತಂತ್ರ್ಯ ಹೋರಾಟಗಾರ ತಿರುಮಲೇಗೌಡರ ಎಂಟು ಎಕರೆ ಜಮೀನಿನ ಮಧ್ಯಭಾಗದಲ್ಲಿ ಧ್ವಜ ಸ್ತಂಭ ನಿಲ್ಲಿಸಲಾಯಿತು. ವಳಗೆರೆ ಹಳ್ಳಿಯ ರೈತರು ವೇದಿಕೆ ನಿರ್ಮಿಸಿದರು.

ಅಧಿವೇಶನ ಮಾಡುವ ಹಂತದಲ್ಲಿಯೇ ಮೈಸೂರು ಜಿಲ್ಲಾ ಮ್ಯಾಜಿಸ್ಟ್ರೇಟ್ ಮದ್ದೂರು ಸುತ್ತಮುತ್ತ ಮೂರು ಮೈಲಿಗಳೊಳಗೆ ಒಂದು ತಿಂಗಳ ಕಾಲ ಮೆರವಣಿಗೆ, ಸಭೆ ಹಾಗೂ ಧ್ವಜಾರೋಹಣ ಮಾಡಬಾರದೆಂದು ನಿಷೇಧಾಜ್ಞೆ ಹೊರಡಿಸಿದರು. ಅದನ್ನು ಲೆಕ್ಕಿಸದೆ ಅಧಿವೇಶನ ನಡೆಯಿತು.

1938 ರ ಏಪ್ರಿಲ್ 9ರಂದು ಜಿಲ್ಲಾ ಮ್ಯಾಜಿಸ್ಟ್ರೇಟ್‌ರ ನಿಷೇಧಾಜ್ಞೆ ಉಲ್ಲಂಘಿಸಿ ಅಂದು ಬೆಳ್ಳಿಗೆ ಸುಮಾರು ನಲವತ್ತು ಸಾವಿರ ಸತ್ಯಾಗ್ರಹಿಗಳು ಅಧಿವೇಶನದಲ್ಲಿ ಭಾಗವಹಿಸಿದರು. ಅಧಿವೇಶನದ ಅಧ್ಯಕ್ಷರಾದ ಟಿ. ಸಿದ್ದಲಿಂಗಯ್ಯನವರನ್ನು ನಲವತ್ತು ಸಾವಿರ ಜನರೊಂದಿಗೆ ಜೋಡೆತ್ತಿನ ಗಾಡಿಯಲ್ಲಿ ಮೆರವಣಿಗೆ ಮಾಡಲಾಯ್ತು. ನಿಷೇಧಾಜ್ಞೆಯಿದ್ದರೂ ಧ್ವಜಾರೋಹಣ ನಡೆಯಿತು. ಹಲವು ನಾಯಕರ ಬಂಧನವಾಯಿತು. ಇವುಗಳ ನಡುವೆ 1938ರ ಏಪ್ರಿಲ್ 11ರ ಸಂಜೆ ಮೂರನೇ ದಿನ ಶಿವಪುರದ ಧ್ವಜ ಸತ್ಯಾಗ್ರಹ ಸಮಾಪ್ತಗೊಂಡಿತ್ತು. ಇದೀಗ ಇದಕ್ಕೆ 75ರ ಅಮೃತ ನೆನಪು.

**ವಿಧುರಾಶ್ವತ್ಥ ಎರಡನೇ ಜಲಿಯನ್‌ವಾಲಾಬಾಗ್ :**

ಶಿವಪುರ ಧ್ವಜ ಸತ್ಯಾಗ್ರಹದಿಂದ ಸ್ಫೂರ್ತಿಗೊಂಡ ಕೋಲಾರ ಜಿಲ್ಲೆಯ ಸತ್ಯಾಗ್ರಹ ಮುಖಂಡರು ಗೌರಿಬಿದನೂರು ತಾಲ್ಲೂಕಿನ ವಿಧುರಾಶ್ವತ್ಥದಲ್ಲಿ ಧ್ವಜ ಸತ್ಯಾಗ್ರಹ ನಡೆಸಬೇಕೆಂದು ತೀರ್ಮಾನಿಸಿದರು. ಆಗ ಎಪ್ರಿಲ್ ತಿಂಗಳಾಗಿದ್ದರಿಂದ ವಿಧುರಾಶ್ವತ್ಥದಲ್ಲಿ ಜಾತ್ರೆಯ ಕಾಲ. ಹಳ್ಳಿಗಳ ಹಾಗೂ ಪಟ್ಟಣಗಳ ಜನ ಇಲ್ಲಿ ಸೇರಿರುತ್ತಾರೆ. ಈ ಸಂದರ್ಭದಲ್ಲಿ ಧ್ವಜ ಸತ್ಯಾಗ್ರಹ ನಡೆಸಿದರೆ ಹೆಚ್ಚು ಕಡೆ ಪ್ರಚಾರವಾಗುತ್ತದೆಂಬ ಉದ್ದೇಶವಿತ್ತು. ತಾಲ್ಲೂಕಿನ ನಾಯಕರುಗಳಾದ ಎನ್.ಸಿ.ನಾಗಯ್ಯರೆಡ್ಡಿ, ಗೆದರೆ ರಾಮಸ್ವಾಮಿ, ಜಿ. ವೆಂಕಟಸ್ವಾಮಿಗೌಡ ಮುಂತಾದವರು ತಾಲ್ಲೂಕಿನಾದ್ಯಂತ ಪ್ರವಾಸ ಮಾಡಿ ಜನರಲ್ಲಿ ಸ್ವಾತಂತ್ರ್ಯ ಪ್ರೇಮವನ್ನು ತುಂಬಿ ಸ್ವಾತಂತ್ರ್ಯ ಚಳುವಳಿಯ ಕಹಳೆಯನ್ನ ಮೊಳಗಿಸಿದರು.

18.04.1938 ನಾಯಕರ ಕ-ರೆಗೆ ಓಗೊಟ್ಟು ತಾಲ್ಲೂಕಿನ ಜನರು ವಿಧುರಾಶ್ವತ್ಥದಲ್ಲಿ ಸೇರಲಾರಂಭಿಸಿದರು. ಈ ಸತ್ಯಾಗ್ರಹಿಗಳ ಜೊತೆಗೆ ಜಾತ್ರೆಗೆಂದು ಬಂದಿದ್ದ ಯಾತ್ರಾರ್ಥಿಗಳೂ ಸಹ ಈ ಚಳುವಳಿಯಲ್ಲಿ ಭಾಗವಹಿಸಲು ಸಿದ್ದರಾದರು. ಅಂದೇ ಸರ್ಕಾರವು ಆಜ್ಞೆಯೊಂದನ್ನು ಹೊರಡಿಸಿ ವಿಧುರಾಶ್ವತ್ಥದ ಎರಡು ಮೈಲಿ ಸುತ್ತಳತೆಯಲ್ಲಿ ಮೆರವಣಿಗೆ ಧ್ವಜಾರೋಹಣ ಮತ್ತು ಭಾಷಣಗಳನ್ನು ನಿಷೇಧಿಸಿತು. 18 ರಿಂದ 21 ಎಪ್ರಿಲ್ 1938 ರವರೆಗೆ ಹೆಚ್ಚಿನ ಅಹಿತಕರ ಘಟನೆಗಳೂ ನಡೆಯಲಿಲ್ಲ. 22-04-1938 ಎನ್.ಸಿ. ನಾಗಯ್ಯ-ರೆಡ್ಡಿ, ಪಾಲಯ್ಯ, ಗೆದರೆ ರಾಮಸ್ವಾಮಿ, ನರಸೀಯಪ್ಪ, ನಾರಾಯಣಪ್ಪ ಮುಂತಾದ ಕಾರ್ಯಕರ್ತರು ಸರ್ಕಾರದ ಆಜ್ಞೆಯನ್ನು ಉಲ್ಲಂಘಿಸಿದ ಫಲವಾಗಿ ಪೋಲೀಸರ ಬಂಧನಕ್ಕೆ ಒಳಗಾದರು. ಇವರನ್ನು ಚಿಕ್ಕಬಳ್ಳಾಪುರದ ಪೋಲೀಸ್ ಲಾಕಪ್ಪಿನಲ್ಲಿ ಇರಿಸಿದರು. ಈ ಕಾರ್ಯಕರ್ತರ ಬಂಧನದ ಸುದ್ಧಿ ಜಿಲ್ಲೆಯಾದ್ಯಂತ ಹರಡಿತು. ಜಿಲ್ಲಾ ನಾಯಕರು ವಿಧುರಾಶ್ವತ್ಥಕ್ಕೆ ಬಂದು ಪೋಲೀಸರ ವರ್ತನೆಯನ್ನು ಖಂಡಿಸಿ ಪ್ರತಿಭಟಿಸಿದರು.

25-04-1938 ರಂದು ಬೆಳಿಗ್ಗೆ ವಿಧುರನಾರಾಯಣ ಸ್ವಾಮಿ ದೇವಾಲಯದ ತೋಪಿನಲ್ಲಿ ನಿರ್ಮಿಸಲಾದ ಸಭಾವೇದಿಕೆಯ ಮುಂದೆ ಜನ ಸಮೂಹದ ಜೊತೆಗೆ ಸತ್ಯಾಗ್ರಹಿಗಳು ಬಂದು ಸೇರತೊಡಗಿದರು. ಸತ್ಯಾಗ್ರಹಿಗಳ ತಂಡ ತಾಲ್ಲೂಕು ಕೇಂದ್ರವಾದ ಗೌರಿಬಿದನೂರಿನಿಂದ ವಿಧುರಾಶ್ವತ್ಥಕ್ಕೆ ಮೆರವಣಿಗೆ ಹೊರಟಿತು. ದಾರಿಯುದ್ದಕ್ಕೂ ಈ ತಂಡಕ್ಕೆ ಜಯಕಾರ ಮತ್ತು ಹೂಮಾಲೆಗಳನ್ನು ಹಾಕಿ ಜನರು ಹುರಿದುಂಬಿಸುತ್ತಿದ್ದರು. ಈ ತಂಡವು ಸಭಾವೇದಿಕೆಯ ಹತ್ತಿರ ಬಂದಾಗ ವೇದಿಕೆಯ ಸುತ್ತಲೂ ಪೋಲೀಸರು ಸುತ್ತುವರಿದು ನಿಂತರು. ಇದೇ ವೇಳೆಗೆ ಮುಖಂಡರಾದ ಎಸ್. ವಿ. ಶ್ರೀನಿವಾಸರಾವ್, ಸೂರಣ್ಣ, ಎಂ, ನಾರಾಯಣಸ್ವಾಮಿ ಇವರು ಧ್ವಜವನ್ನು ಹಿಡಿದು ವೇದಿಕೆಯ ಮೇಲೆ ಹತ್ತಲು ಪ್ರಯತ್ನಿಸಿದಾಗ ಪೋಲೀಸರು ಧ್ವಜಾರೋಹಣ ಮಾಡಕೊಡದೆಂದು ತಡೆದರು ಮತ್ತು ಅವರನ್ನು ದಸ್ತಗಿರಿ ಮಾಡಿ ಪೋಲೀಸ್‌ವ್ಯಾನಿನಲ್ಲಿ ಗೌರಿಬಿದನೂರಿಗೆ ಕರೆದೊಯ್ದರು. ಈ ದೃಶ್ಯವನ್ನು ನೋಡುತ್ತಾ ನಿಂತಿದ್ದ ಜನ ಸಮೂಹವು ವೀರಾವೇಶದಿಂದ ಘೋಷಣೆಗಳನ್ನು ಕೂಗತೊಡಗಿತು. ಟಿ. ರಾಮಾಚಾರ್ ಜನರಿಗೆ ಶಾಂತ ರೀತಿಯಿಂದಿರಲು ಹೇಳಲಾರಂಭಿಸಿದರು. ಆದರೆ ಜನರಲ್ಲಿ ಆವೇಶ ಕಡಿಮೆಯಾಗಲಿಲ್ಲ. ಆಗ ಪೋಲೀಸ್ ಅಧಿಕಾರಿಗಳು ಟಿ. ರಾಮಾಚಾರ್‌ರವರ ಆ ಸ್ಥಳದಿಂದ ಹೊರಟು ಹೋಗಲು ತಿಳಿಸಿದರಲ್ಲದೆ ತಾವೂ ಅಲ್ಲಿಂದ ಹೊರಟು ಹೋಗುವುದಾಗಿಯೂ ಹೇಳಿದರು. ಇದ-ರಿಂದ ತಾನಾಗಿಯೇ ಗಲಾಟೆ ಕಡಿಮೆ ಆಗುವುದಾಗಿ ತಿಳಿಸಿದರು. ಪೋಲೀಸರ ಭರವಸೆ ಮೇರೆಗೆ ಟಿ.ರಾಮಾಚಾರ್ ಮತ್ತು ರುಮಾಲೆ ಚನ್ನಬಸಯ್ಯನವರು ನದಿಯ ಆಚೆಯ ದಡಕ್ಕೆ ಹೊರಟರು. ಈ ಮುಖಂಡರನ್ನು ಕೆಲವು ಕಾಂಗ್ರೆಸ್ ಕಾರ್ಯಕರ್ತರು ಹಿಂಬಾಲಿಸಿದರು. ಗುಂಪಿನಲ್ಲಿ ಇನ್ನೂ ಮೂರು ಜನ ಧ್ವಜವನ್ನು ಹಿಡಿದ ಸತ್ಯಾಗ್ರಹಿಗಳು ಇದ್ದುದ-ರಿಂದ ಅವರನ್ನು ಸಹ ಕರೆದು ತರಲು ಟಿ. ರಾಮಾಚಾರ್‌ರವರು ಒಬ್ಬ ಸೇವಕನನ್ನು ಗುಂಪಿನೊಳಕ್ಕೆ ಕಳುಹಿಸಿ ತಾವು ರೈಲ್ವೆ ಸ್ಟೇಷನ್ ಕಡೆ ನಡೆದರು. ಕಾಂಗ್ರೆಸ್ ನಾಯಕರು ಹೊರಟು ಹೋದರೆಂದು ತಿಳಿದ ಜನರು ಅಸಮಾಧಾನಗೊಂಡು ಸರಿಯಾದ ಧ್ವಜ ಸತ್ಯಾಗ್ರಹ ನಡೆಯಲಿಲ್ಲವೆಂದು ಕೂಗುತ್ತಾ ಘೋಷಣೆ ಹಾಕತೊಡಗಿದರು. ಈ ಗುಂಪನ್ನು ಚದುರಿಸಲು ಪೋಲೀಸರು ಜನರ ಮೇಲೆ ಲಾಠಿ ಪ್ರಹಾರ ಮಾಡಿದರು. ನಾಯಕರಿಲ್ಲದ ಗುಂಪಿನ ಮೇಲೆ ಲಾಠಿ ಪ್ರಹಾರ ಮಾಡಿದ ಪೋಲೀಸರ ದೌರ್ಜನ್ಯಕ್ಕೆ ಕುಪಿತಗೊಂಡ ಜನ ಕೆರಳಿ ವೀರಾ ವೇಶಕ್ಕೆ ಒಳ ಗಾಗಿ ಪೋಲೀಸರ ಲಾಠಿ ಪ್ರಹಾರಕ್ಕೆ ಜಗ್ಗದೆ ಉತ್ಸಾಹದಿಂದ ಘೋಷಣೆ ಕೂಗ ತೊಡಗಿದರು. ಸೇಡು ತೀರಿಸಿ ಕೊಳ್ಳುವ ಛಲದಿಂದ ನಿಂತಿದ್ದ ಪೋಲೀಸ್ ಸೂಪರಿಟೆಂಡೆಂಟ್ ಗಾಳಿಯಲ್ಲಿ ಗುಂಡು ಹಾರಿಸಿದರು. ಈ ಗುಂಡಿನ ಶಬ್ದವನ್ನು ಕೇಳಿದ ಪೋಲೀಸರು ತಮ್ಮ ಬಂದೂಕುಗಳಿಂದ ಜನರ ಮೇಲೆ ಗುಂಡುಗಳನ್ನು ಹಾರಿಸತೊಡಗಿದರು. ಗುಂಡಿನ ಸುರಿಮಳೆ ಪ್ರಾರಂಭವಾಗಿ ಜನರ ಆಕ್ರಂದನ, ತೋಪಿನಲ್ಲಿದ್ದ ಕಪಿಗಳ ಕಿರುಚಾಟದೊಂದಿಗೆ ಪೋಲೀಸರ ಗುಂಡಿನ ಸುರಿಮಳೆಯ ಶಬ್ದ ಮುಗಿಲಿಗೇರಿತು. ಯಾತ್ರಾಸ್ಥಳವು 'ರಣರಂಗ'ದಂತಾಗಿ ಕೆಲವು ಮುಗ್ಧ ಭಕ್ತರು ಸಹ ಪೋಲೀಸರ

ಜನಶಕ್ತಿ
ಕನ್ನಡ ವಾರಪತ್ರಿಕೆ


ಶಿವಪುರದ ಸತ್ಯಾಗ್ರಹ ಸೌಧ

ಸಮರದಲ್ಲಿ ಅನೇಕ ಜನರು ಗಾಯಗೊಂಡು ಸುಮಾರು ಮೂವತ್ತೈದು ಜನ ಪ್ರಾಣಕಳೆದುಕೊಂಡರೆಂದು ಪ್ರತ್ಯಕ್ಷದರ್ಶಿಗಳ ಹೇಳಿಕೆ ಹೇಳುತ್ತಿದೆ. ಆದರೆ ಸರ್ಕಾರದ ದಾಖಲೆಗಳ ಪ್ರಕಾರ ಸತ್ತವರು ಹತ್ತು ಜನ ಮಾತ್ರ.

ಗೌರಿಬಿದನೂರು ನಾಮಾ ಅಶ್ವತ್ಥನಾರಾಯಣ ಶೆಟ್ಟಿ, ರಾಮಚಂದ್ರಪುರ ...ಸಪ್ಪ ಚೌಳೂರು, ಗಚ್ಚನ್ನಗಾರು ನರಸಪ್ಪ, ಕಾರಂಡಹಳ್ಳಿ ಮಲ್ಲಯ್ಯ, ಭಜಂತ್ರಿ ಭೀಮಣ್ಣ, ಸೂಲಗಿತ್ತಿ ನರಸಪ್ಪ, ಜಿ.ಟಿ. ಹನುಮಂತಪ್ಪ, ಮರಳೂರಿನ ಶ್ರೀಮತಿ ಗೌರಮ್ಮ, ವೆಂಕಟಗಿರಿಯಪ್ಪ ಮತ್ತು ಲಕ್ಷ್ಮಯ್ಯ ಹತ್ತು ಜನ ದೇಶಪ್ರೇಮಿಗಳು ಈ ಹೋರಾಟದಲ್ಲಿ ಹುತಾತ್ಮರಾದರು. ವಿಧುರನಾರಾಯಣ ದೇವಸ್ಥಾನದ ಹಿಂಬದಿಯ ತೋಪಿನ ಮೂಲೆಯಲ್ಲಿ ಕುಳಿತಿದ್ದ ನರಸಪ್ಪರಿಗೆ ಪೊಲೀಸರು ಹಾರಿಸಿದ ಗುಂಡು ತಗಲಿ ಸ್ಥಳದಲ್ಲಿಯೇ ಅಸುನೀಗಿದರು. ಗರ್ಭಿಣಿ ಮಹಿಳೆ ಗೌರಮ್ಮ ಅಶ್ವತ್ಥ ವೃಕ್ಷಕ್ಕೆ ಪ್ರದಕ್ಷಿಣೆ ಹಾಕುತ್ತಿದ್ದಾಗ ಪೊಲೀಸರ ಗುಂಡು ತಗಲಿ ಸತ್ತಳು.

ಈ ಹತ್ಯಾಕಾಂಡದ ನಿಜಾಂಶವನ್ನು ತಿಳಿಯಲು ಮಹಾತ್ಮ ಗಾಂಧೀಜಿಯವರು, ಸರ್ದಾರ್ ವಲ್ಲಭಾಯ್‌ಪಟೇಲ್, ಆಚಾರ್ಯ ಕೃಪಾಲಾನಿರವರನ್ನು ವಿಧುರಾಶ್ವತ್ಥಕ್ಕೆ ಕಳುಹಿಸಿಕೊಟ್ಟರು. ಸರ್ಕಾರವು ಇದರ ವಿಚಾರಣೆಯನ್ನು ನಡೆಸಲು ವೇಪಾರಮೇಶಂರವರ ನೇತೃತ್ವದಲ್ಲಿ ಒಂದು ಕಮಿಟಿಯನ್ನು ರಚಿಸಿತು. ಪೊಲೀಸರು ನಿರಪರಾಧಿ ಜನರನ್ನು ಇಕ್ಕಟಿನ ಸ್ಥಳಕ್ಕೆ ಸೇರಿಸಿಕೊಂಡು ಗುಂಡು ಹಾರಿಸಿದರೆಂದು ಸರ್‌ವೇಪಾರಮೇಶಂ ವರದಿ ತಿಳಿಸಿದೆ.

**– ಮುರುಘೇಶ್ ವಿ. ಕರ್ಕಿಕಟ್ಟಿ**

## ವಿಧುರಾಶ್ವತ್ಥ ಕುರಿತು ಬಿ. ನೀಲಕಂಠಯ್ಯನವರ ಲಾವಣಿ

ವಿಧುರಾಶ್ವತ್ಥ ದುರಂತ ಪ್ರಕರಣಗಳನ್ನು ಲಾವಣಿಕಾರರು ಆಕರ್ಷಕವಾಗಿ ಹೆಣೆದು ಕಣ್ಣಿಗೆ ಕಟ್ಟುವಂತೆ ಜನರ ಮುಂದೆ ಸುಶ್ರಾವ್ಯವಾಗಿ ಹಾಡಲು ಪ್ರಾರಂಭಿಸಿದರು. ಆಗ ಪ್ರಸಿದ್ಧ ಲಾವಣಿಕಾರರಾದ ಬಿ. ನೀಲಕಂಠಯ್ಯನವರ ಕಂಠದಿಂದ ಹೊರಬಿದ್ದ ಲಾವಣಿ ಪದ ಇದು..

ಒಂಬೈನೂರ್ ಮುವತ್ತೆಂಟನೆ ಏಪ್ರಿಲ್ ತಿಂಗಳ ಇಪ್ಪತ್ತೈದರೊಳು ತುಂಬಿರೆ
ಬಹು ಪ್ರಜೆ ಸಂಭ್ರಮದಿಂದಲಿ ವಿಧುರಾಶ್ವತ್ಥದ ಜಾತ್ರೆಯೊಳು ॥
ಸ್ತಂಭದಿ ಮೆರೆಯುವ ಧ್ವಜ ಸತ್ಯಾಗ್ರಹ ಕಾಂಗ್ರೆಸ್ ಕೂಟದಿ ಕೂಡಿರಲು
ಡಂಬಕರಾ ಪ್ರಜ ದ್ರೋಹಿಗಳವು ಢಂ ಢಂ ಹೊಡೆದರು ಗುಂಡುಗಳು ॥
ಸುತ್ತ ಮುತ್ತಲು ಲಾಠಿ ಹೊಡೆತಗಳ ಮತ್ತೆ ಗುಂಡಿನ ಏಟುಗಳ್ ಸತ್ತ ಹೆಣಗಳ
ಲೆಕ್ಕ ವಿಲ್ಲವು ಹೊತ್ತರಷ್ಟೋಗುಪ್ತದೊಳ್ ॥
ಸತ್ಯವು ಕೇಳಿರಿ ಮಿತ್ಯವಲ್ಲದವು ಹತ್ಯ ಹತ್ಯ ಸ್ತ್ರೀ ಶಿಶುಹತ್ಯ ಮರ್ತ್ಯದೊಳಾ
ರ್ಯಾವರ್ತದ ವಿಧುರಾಶ್ವತ್ಥ ವಿಚಿತ್ರದ ಘನಹತ್ಯೆ ॥
ಗೌರಮ್ಮನೆಂಬುವ ಗರ್ಭಿಣಿ ಹೆಣ್ಣನು ಗರ್ವದಿ ಕೊಂದರು ಕೈಯಾರ ಸರ್ವ ಜನರ
ಮೇಲೆ ಗುಂಡಿನ ಮಳೆ ಸುರಿದರು ಘೋರ ವೈಯಾರ ॥
ವಿರಾಟ ಪುತ್ರರ ಭರಾಟ ಭಾರತ ಕರಾಟಕ್ಕಿಂತಲು ವಿಸ್ತಾರ ನಿರಾಳಗೈದರು
ನಿರಾಯುಧಾ ಮೇಣೆ ನಿರುಪರಾಧಿಗಳ ಸಂಹಾರ ॥
ಏರಿಸಿ ಗುಂಡನು ಹಾರಿಸಿದಾಕ್ಷಣ ನೂರಾರು ಕಪಿಗಳು ಭಯಂಕರ। ಕಿರ್ರೆಂದು
ಕಿರುಚುತ ಕೊರ್ರೆಂದು ಕೊರಗುತ ಗಿರ್ರೆಂದು ಸತ್ತವು ತರತರ ॥
ಇಡೀ ಪ್ರಪಂಚವೇ ನಡುಗಿತು ಈ ಘನ ಗಡಿಬಿಡಿ ಕೇಳಿದ ಕ್ಷಣದೊಳಗೆ। ಗೌಡ
ಗಾವಿಲರು ಹೂಡಿದ ತಂತ್ರದಿಕೇಡಲೆ ಒದಗಿತು ಕಡೆಯೊಳಗೆ ॥
ಬಡತನದಿಂದಲೆ ಬೆಳೆದ ವೃಷಭನ ಬಡಾಯಿ ಬಹಾಲಾ ಕಣದೊಳಗೆ। ಸಡಗರದಿಂದಲಿ
ಹಿಡಿದು ರಿವಾಲ್ವಾರ್ ಹೊಡೆದರು ಪ್ರಜೆಗಳ ಭರದೊಳಗೆ ॥
ಘೋರ ವಿದುರಾಶ್ವತ್ಥ ಹತ್ಯದ ನ್ಯಾಯ ಕಡೆಗಿದು ಖಂಡಿತು।
ಶ್ರೀ ರಮೇಶಂ ಸಮಿತಿ ವಿವರವು ಶ್ರೀ ರಮಣನಿಗೆ ಅರ್ಪಿತ ॥
ಸತ್ಯಾವು ಶ್ರೀ ಗುರು ಪುಟ್ಟನಂಜಣ್ಣರ ಭಕ್ತ ನೀಲಕಂಠನ ಸಾಹಿತ್ಯ।
ಮರ್ತದೊಳಾರ್ಯಾವರ್ತದ ವಿದುರಾಶ್ವತ್ಥ ವಿಚಿತ್ರದ ಘನ ಹತ್ಯೆ ॥

# "ಸ್ವಾತಂತ್ರ್ಯ ಆಶಯಗಳನ್ನು ಈಡೇರಿಸಿ" : ವಿದ್ಯಾರ್ಥಿ – ಯುವಜನರ ಒಕ್ಕೊರಲಿನ ಆಗ್ರಹ

ಗಜೇಂದ್ರಗಡ : ಜನವಿರೋಧಿ ಜಾಗತೀಕರಣ ನೀತಿಗಳನ್ನು ಹಿಮ್ಮೆಟ್ಟಿಸಿ ಸ್ವಾತಂತ್ರ್ಯ ಆಶಯಗಳನ್ನು ಈಡೇರಿಸಿ ಎಂದು 67ನೇ ಸ್ವಾತಂತ್ರ್ಯೋತ್ಸವ ಸಂದರ್ಭದಲ್ಲಿ ವಿದ್ಯಾರ್ಥಿ– ಯುವಜನರು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್ಐ) ಭಾರತ ವಿದ್ಯಾರ್ಥಿ



ಫೆಡರೇಷನ್ (ಎಸ್ಎಫ್ಐ) ನಗರ ಸಮಿತಿ ನೇತೃತ್ವದಲ್ಲಿ ಬೃಹತ್ ರ್‍ಯಾಲಿ ಮಾಡುವ ಮೂಲಕ ಒಕ್ಕೂರಲಿನಿಂದ ಆಗ್ರಹಿಸಿದರು.

ವಿದ್ಯಾರ್ಥಿ – ಯುವಜನರ ಬೃಹತ್ ಆಕರ್ಷಕ ರ್‍ಯಾಲಿ ನಗರದ ಎಸ್.ಎಂ. ಭೂಮರೆಡ್ಡಿ ಕಾಲೇಜಿನಿಂದ ಪ್ರಾರಂಭವಾಗಿ ದುರ್ಗಾ ವೃತ್ತದಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನ ಪ್ರಾಚಾರ್ಯರಾದ ಎಸ್.ಟಿ. ಭೈರಪ್ಪನವರಿಂದ ಪಾರಿವಾಳಗಳನ್ನು ಹಾರಿ ಬಿಡುವುದರ ಮೂಲಕ ಉದ್ಘಾಟನೆಗೊಂಡು ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಕಟ್ಟಿ ಬಸವೇಶ್ವರ ರಂಗ ಮಂದಿರದಲ್ಲಿ ಬಹಿರಂಗ ಸಭೆಯಾಗಿ ಮಾರ್ಪಟ್ಟಿತು.

ಮುಖ್ಯ ಅತಿಥಿಯಾಗಿ ಅಗಮಿಸಿದ್ದ ಸಮುದಾಯ ಸಂಘಟನೆಯ ರಾಜ್ಯ ಅಧ್ಯಕ್ಷರಾದ ಆರ್.ಕೆ. ಹುಡಗಿ ಮಾತನಾಡಿ ಆಗಸ್ಟ್ 15 ನಮ್ಮ ನಾಡಿಗಾಗಿ ಅದರ ಸ್ವಾತಂತ್ರ್ಯಕ್ಕಾಗಿ ಹೋರಾಡಿ, ಮಡಿದ ಹುತಾತ್ಮರನ್ನು ಸ್ಮರಿಸುವ ದಿನ. ಪ್ರಜಾಪ್ರಭುತ್ವಕ್ಕಾಗಿ ನಡೆದ ಆ ಕ್ರಾಂತಿಯಲ್ಲಿ ತಮ್ಮ ಸ್ವಂತ ಹಿತಾಸಕ್ತಿಗಳನ್ನು ತ್ಯಾಗಮಾಡಿ ಅದಷ್ಟೋ ಜನ ಕ್ರಾಂತಿಕಾರಿಗಳು, ಹೋರಾಟಗಾರರು, ಕಾರ್ಮಿಕರು, ರೈತರು, ಬರಹಗಾರರು, ವಿದ್ಯಾರ್ಥಿ – ಯುವಜನರು, ಮಹಿಳೆಯರು ಪಾಲ್ಗೊಂಡಿದ್ದರು. ಅವರು ತಮ್ಮ ಮನೆ ಮಠಗಳನ್ನು ತೊರೆದು ಬ್ರಿಟಿಷರ ಬೂಟುಗಾಲಿನ ಒದೆತ, ಲಾಠಿಯೇಟು, ಜೈಲುಗಳಲ್ಲಿ ಹಿಂಸೆ ಅನುಭವಿಸದೆ ಇದ್ದಿದ್ದರೆ ನಾವು ಇನ್ನೂ ಎಷ್ಟೋ ಕಾಲ ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ಗುಲಾಮರಾಗಿಯೇ ಇರಬೇಕಾಗುತ್ತಿತ್ತು ಎಂದರು.

ಬ್ರಿಟಿಷ್ ಲೂಟಿಕೋರರು ತೊಲಗಿದ ನಂತರವೂ ದೇಶದ ಸಂಪತ್ತಿನ ಲೂಟಿ ನಿಲ್ಲಲಿಲ್ಲ. ಜನರ ಬಡತನ, ದಾರಿದ್ಯ, ನಿರುದ್ಯೋಗ ನಿವಾರಣೆ ಆಗಲಿಲ್ಲ. ಅನ್ನ, ಅಕ್ಷರ ಆಶ್ರಯ, ಆರೋಗ್ಯದ ನಿರೀಕ್ಷೆಗಳು ಈಡೇರಲಿಲ್ಲ. ಆಳುವ ಸರ್ಕಾರಗಳು ಲಾಭಕೋರ ಬಹುರಾಷ್ಟ್ರೀಯ ಕಂಪೆನಿಗಳಿಗೆ ದೇಶದೊಳಗೆ ಪ್ರವೇಶ ನೀಡಿ ಕೃಷಿ, ಕೈಗಾರಿಕೆ, ಹಣಕಾಸು ವಲಯ, ಚಿಲ್ಲರೆ ವ್ಯಾಪಾರ ಎಲ್ಲವನ್ನು ದಿವಾಳಿ ಎಬ್ಬಿಸಿವೆ. ಆದ್ದರಿಂದ ನಾವು ಸ್ವಾತಂತ್ರ್ಯ ಹೋರಾಟದ ಪರಂಪರೆಯನ್ನು ಮುನ್ನಡೆಸಬೇಕಾಗಿದೆ. ದೇಶವನ್ನು ಕಾಡುತ್ತಿರುವ ಎಲ್ಲ ಅನಿಷ್ಟಗಳ ವಿರುದ್ಧ ಅವಿರತ ಹೋರಾಟ ಮಾಡಲು ನಾವಿಂದು ಸಂಕಲ್ಪ ಮಾಡಬೇಕಾಗಿದೆ ಎಂದರು.

ಪುರಸಭಾ ಸದಸ್ಯ ಎಂ.ಎಸ್. ಹಡಪದ ಮಾತನಾಡಿದರು. ಬಿ.ಎಸ್. ಶೀಲವಂತರ ಪ್ರಸ್ತಾವಿಕವಾಗಿ ಮಾತನಾಡಿದರು, ಬಾಲು ರಾಠೋಡ, ಮಾರುತಿ ಚಿಟಗಿ, ಬಿ.ಎನ್. ಜಾಡಬಂಡಿ, ಶಿವಾನಂದ ಬೋಸ್ಲೆ ಉಪಸ್ಥಿತರಿದ್ದರು. ಶಿವು ಚವ್ಹಾಣ ಸ್ವಾಗತಿಸಿದರು. ಫಯಾಜ್ ತೋಟದ ವಂದಿಸಿದರು. ಗೌಸ ಪೀರಣ್ಣನವರ್ ನಿರೂಪಿಸಿದರು.

**ಆಕರ್ಷಕ ಛದ್ಮ ವೇಷ ಧಾರಿಗಳ ಮೆರವಣಿಗೆ**

ನಗರದ ಶಾಲಾ ಕಾಲೇಜುಗಳಿಂದ ಹಲವಾರು ವಿದ್ಯಾರ್ಥಿಗಳು ಸಂಗೊಳ್ಳಿ ರಾಯಣ್ಣ, ಭಗತ್ ಸಿಂಗ್, ಸ್ವಾಮಿ ವಿವೇಕಾನಂದ, ಮಹಾತ್ಮ ಗಾಂಧೀಜಿ, ಜವಾಹರ್‌ಲಾಲ್ ನೆಹರೂ, ತಾತ್ಯ–ಟೋಪಿ, ಲಾಲ್ ಬಹಾದ್ದೂರ ಶಾಸ್ತ್ರಿ ಇನ್ನು ಹಲವಾರು ಸ್ವಾತಂತ್ರ್ಯ ಹೋರಾಟಗಾರರ ಛದ್ಮ ವೇಷ ಧರಿಸಿ ಮೆರವಣಿಗೆಯಲ್ಲಿ ಪಾಲ್ಗೊಂಡು ಸಂಭ್ರಮಿಸಿದರು.

**ವರದಿ : ಗೌಸ್ ಪೀರಣ್ಣನವರ್**

## ಪ್ರಧಾನ ಮಂತ್ರಿಗಳ ಸ್ವಾತಂತ್ರ್ಯದಿನದ ಭಾಷಣ

7 ನೇ ಪುಟದಿಂದ

ದಾಖಲೆಗಳನ್ನು ಈ ಅಂಕಣದಲ್ಲಿ ಈ ಹಿಂದೆ ಕೊಡಲಾಗಿದೆ. ನಮ್ಮ ಗ್ರಾಮೀಣ ಪ್ರದೇಶಗಳಲ್ಲಿನ ತೀವ್ರ ಸಂಕಟಗಳಿಗೆ ನಮ್ಮ ರೈತರ ಆತ್ಮಹತ್ಯೆಗಳ ಸಂಖ್ಯೆ ಹೆಚ್ಚುತ್ತಲೇ ಇರುವುದೇ ಸಾಕ್ಷಿ.

ಉನ್ನತ ಆರ್ಥಿಕ ಬೆಳವಣಿಗೆ ದರದ ದಿಕ್ಕನ್ನು ಕಾಯ್ದುಕೊಳ್ಳಲುಸಾಧ್ಯವಾದರೆ, ಭಾರತ ಒಂದು ಸಂಪೂರ್ಣ ಸ್ವರೂಪದ ಬೆಳವಣಿಗೆಯನ್ನು ಸಾಧಿಸಬಹುದು, ನಮ್ಮ ಜನತೆಯ ಸಮೃದ್ಧಿಯ ಮಟ್ಟಗಳನ್ನು ಬಹಳಷ್ಟು ಉತ್ತಮಪಡಿಸಬಹುದು ಎಂಬುದು ಪ್ರಧಾನ ಮಂತ್ರಿಗಳ ಭಾಷಣದ ಇಡೀ ಒತ್ತು. "ಕಳೆದ ದಶಕದಂತಹುದೇ ರೀತಿಯ ಪ್ರಗತಿಯನ್ನು ಸಾಧಿಸಲು ನಮಗೆ ಭವಿಷ್ಯದಲ್ಲೂ ಸಾಧ್ಯವಾದರೆ, ಬಡತನ, ಹಸಿವು, ಕಾಯಿಲೆ ಮತ್ತು ಅಜ್ಞಾನ ಭಾರತದಿಂದ ತೊಲಗುವ ದಿನ ಬಹಳ ದೂರವಿಲ್ಲ. ನಮ್ಮ ಭಾರತ ಸಮೃದ್ಧಿ ಪಡೆಯುತ್ತದೆ ಮತ್ತು ಅದರ ಎಲ್ಲ ನಾಗರಿಕರು, ಧರ್ಮ, ಜಾತಿ, ಪ್ರದೇಶ ಅಥವ ಭಾಷೆಯ ಭೇದ-ಭಾವವಿಲ್ಲದೆ, ಆ ಸಮೃದ್ಧಿಯಲ್ಲಿ ಸಮಾನ ಪಾಲುದಾರರಾಗುತ್ತಾರೆ" ಎನ್ನುತ್ತಾರೆ ಅವರು.

ಅದೇ ಧಾಟಿಯಲ್ಲಿ, "ನಾನು ಈ ಹಿಂದೆಯೂ ಹೇಳಿರುವಂತೆ, ತ್ವರಿತ ಆರ್ಥಿಕ ಬೆಳವಣಿಗೆ ನಮ್ಮ ದೇಶಕ್ಕೆ ಅನಿವಾರ್ಯ. ಅದಿಲ್ಲದೆ ಬಡತನ ನಿರ್ಮೂಲನೆ, ಉತ್ತಮ ಗುಣಮಟ್ಟದ ಶಿಕ್ಷಣ ಹಾಗೂ ಆರೋಗ್ಯಸೇವೆಗಳನ್ನು ಒದಗಿಸುವುದು ಮತ್ತು ಹೊಸ ಉದ್ಯೋಗಾವಕಾಶಗಳನ್ನು ನಿರ್ಮಿಸುವುದು ಮುಂತಾದ ಗುರಿಗಳನ್ನು ಸಾಧಿಸುವುದು ಬಹುಶಃ ನಮಗೆ ಸಾಧ್ಯವಾಗದು. ಕಳೆದ 9 ವರ್ಷಗಳಲ್ಲಿ ನಾವು ಗಳಿಸಿದ ಆರ್ಥಿಕ ಬೆಳವಣಿಗೆಯ ಸರಾಸರಿ ದರ ನಮ್ಮ ಸಾಮರ್ಥ್ಯ ಏನು ಎಂಬುದನ್ನು ತೋರಿಸುತ್ತದೆ. ಆದರೆ ಸದ್ಯಕ್ಕೆ ಆರ್ಥಿಕ ಬೆಳವಣಿಗೆ ನಿಧಾನಗೊಂಡಿದೆ ಮತ್ತು ನಾವು ಪರಿಸ್ಥಿತಿಯನ್ನು ಸರಿಪಡಿಸುವ ಪರಿಹಾರೋಪಾಯುಗಳಿಗೆ ಬಹಳ ಶ್ರಮಿಸುತ್ತಿದ್ದೇವೆ' ಎಂದು ಅವರು ಹೇಳುತ್ತಾರೆ.

ಏನದು 'ಪರಿಹಾರೋಪಾಯ'? " ವಿದೇಶಿ ನೇರ ಹೂಡಿಕೆಯನ್ನು ಉತ್ತೇಜಿಸಲು, ಹಲವು ವಲಯಗಳಲ್ಲಿ ಇಂತಹ ಹೂಡಿಕೆಗಳ ಮಿತಿಗಳನ್ನು ಏರಿಸಿದ್ದೇವೆ ಮತ್ತು ಅದರ ವಿಧಾನವನ್ನು ಸುಲಭಗೊಳಿಸಿದ್ದೇವೆ. ಮುಂಬರುವ ತಿಂಗಳುಗಳಲ್ಲಿ, ಹೂಡಿಕೆಯನ್ನು ಉತ್ತಮಗೊಳಿಸುವ ಈ ಪ್ರಯತ್ನಗಳ ಫಲಿತಾಂಶ ಗಳನ್ನು ನಾವು ಕಣ್ಣಾರೆ ಕಾಣುತ್ತೇವೆ. ನಮ್ಮ ಬೆಳವಣಿಗೆ ವೇಗ ಪಡೆಯುತ್ತದೆ, ಹೊಸ ಉದ್ಯೋಗಾವಕಾಶಗಳು ನಿರ್ಮಾಣಗೊಳ್ಳುತ್ತವೆ ಮತ್ತು ಮೂಲರಚನೆ ವಲಯ ಉತ್ತಮಗೊಳ್ಳುತ್ತದೆ."

### 'ಪರಿಹಾರೋಪಾಯಗಳು' ವಿದೇಶಿ ಬಂಡವಾಳಕ್ಕಷ್ಟೇ

ಎಷ್ಟೇ ಹೂಡಿಕೆಗಳನ್ನು ಮಾಡಿದರೂ, ಅವು ತಂತಾನೇ ಬೆಳವಣಿಗೆ ತರುವುದಿಲ್ಲ, ಹೊಸ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದಿಲ್ಲ ಎಂಬುದನ್ನು ನಾವು ಈ ಅಂಕಣಗಳಲ್ಲಿ ಮತ್ತೆ-ಮತ್ತೆ ಕಂಡಿದ್ದೇವೆ. ಜನತೆಯ ಕೈಗಳಲ್ಲಿ ಸಾಕಷ್ಟು ಖರೀದಿ ಸಾಮರ್ಥ್ಯ ಬಂದು, ಅದರಿಂದಾಗಿ ಇಂತಹ ಹೂಡಿಕೆಗಳು ಉತ್ಪಾದಿಸ ಬಹುದಾದುದನ್ನು ಖರೀದಿಸುವ ಮತ್ತು ಬಳಸುವ ಉನ್ನತ ಮಟ್ಟಗಳ ಆಂತರಿಕ ಬೇಡಿಕೆ ಉಂಟಾಗದಿದ್ದರೆ ಇಂತಹ ಬೆಳವಣಿಗೆ ಸಾಧ್ಯವಾಗದು. ಈ ರೀತಿ ಆಂತರಿಕ ಬೇಡಿಕೆಯನ್ನು ವಿಸ್ತರಿಸುವುದರ ಮೇಲೆ ಗಮನ ಕೇಂದ್ರೀಕರಿಸುವ ಬದಲು ಯುಪಿಎ-2 ಸರಕಾರ ಕೈಗೊಂಡಿರುವ ಕ್ರಮಗಳು ಸತತವಾಗಿ ಜನಗಳ ನಡುವೆ ಕೊಳ್ಳುವ ಶಕ್ತಿಯ ಮಟ್ಟಗಳನ್ನು ಇಳಿಸುತ್ತಲೇ ಬಂದಿವೆ. ಎಲ್ಲ ಆವಶ್ಯಕ ಸರಕುಗಳ ಸತತ ಬೆಲೆಯೇರಿಕೆಗಳು ಜನಗಳ ಬಳಿ ಇವನ್ನು ಕೊಳ್ಳಲು ಬೇಕಾಗುವಷ್ಟು ಆದಾಯ ಉಳಿಯದಂತೆ ಮಾಡುತ್ತಿವೆ.

ವಿದೇಶಿ ನೇರ ಹೂಡಿಕೆಗಳು ಹರಿದು ಬರಲು ಈಗ ಯೋಜಿಸಿರುವ ರಿಯಾಯ್ತಿಗಳನ್ನೂ ಸೇರಿಸಿದಂತೆ, ಎಷ್ಟೇ ರಿಯಾಯ್ತಿಗಳನ್ನು ನೀಡಿದರೂ, ನಿವ್ವಳ ಎಫ್‌ಡಿಐ 2011-12ರಲ್ಲಿ 15.ತ ಬಿಲಿಯ ಡಾಲರುಗಳಿಂದ 2012-13 ರಲ್ಲಿ12.8 ಬಿಲಿಯ ಡಾಲರುಗಳಿಗೆ ಇಳಿದಿದೆ. ಇಂತಹ ಒಂದು ಕಾರ್ಯತಂತ್ರ ಹಾಗೆಯೇ ಮುಂದುವರಿಯುತ್ತಿರುವುದನ್ನು ನೋಡಿದರೆ, ಈ ಸರಕಾರದ ಅಡಿಯಲ್ಲಿ ಭಾರತ, ಜಾಗತಿಕ ಹಿಂಜರಿತದ ಹಿನ್ನೆಲೆಯಲ್ಲಿ ವಿದೇಶಿ ಬಂಡವಾಳಕ್ಕೆ ಅದರ ಲಾಭಗಳನ್ನು ಗರಿಷ್ಟ ಮಟ್ಟಗಳಿಗೆ ಏರಿಸಿಕೊಳ್ಳಲು ಸತತವಾಗಿ ಹೆಚ್ಚೆಚ್ಚು ದಾರಿಗಳನ್ನು ಒದಗಿಸುತ್ತಿರುವುದು ಸ್ಪಷ್ಟವಾಗಿ ಕಾಣ ಬರುತ್ತದೆ. ಇದಕ್ಕೆ ಭಾರತದ ಆರ್ಥಿಕ ಮತ್ತು ಭಾರತೀಯ ಜನತೆಯ ಜೀವನಾಧಾರಗಳು ಬೆಲೆ ತೆರಬೇಕಾಗುತ್ತಿದೆ.

ದೇಶಕ್ಕೆ ಮತ್ತು ಜನತೆಗೆ ಇಂದು ಬೇಕಾಗಿರುವುದು ಒಂದು ಉತ್ತಮ ಭಾರತವನ್ನು ನಿರ್ಮಿಸಲು ನಮ್ಮ ದೇಶದ ಮತ್ತು ನಮ್ಮ ಜನತೆಯ ಸಹಜ ಸಾಮರ್ಥ್ಯವನ್ನು ಬಳಸಿಕೊಳ್ಳಬಲ್ಲ ಒಂದು ಪರ್ಯಾಯ ಧೋರಣೆಗಳ ದಾರಿ-ದಿಕ್ಕು.





**'ಸ್ವಾತಂತ್ರ್ಯದ ಕುಡುಕಾಟದಲ್ಲಿ'**

ಭಾರತದಲ್ಲಿ ಮಹಿಳೆಯರ ಮೇಲಿನ ಅತ್ಯಾಚಾರಗಳನ್ನು ನೆನಪಿಸುವ ಒಡಿಶಾದ ಪ್ರಸಿದ್ಧ ಮರಳು ಕಲಾವಿದ ಸುಬಲ್ ಮಹಾರಾಣರವರ ಕಲಾಕೃತಿ. ಇದನ್ನು ಅವರು ಭುವನೇಶ್ವರದಲ್ಲಿ 67ನೇ ಸ್ವಾತಂತ್ರ್ಯದಿನದ ಸಂದರ್ಭದಲ್ಲಿ ನಿರ್ಮಿಸಿದ್ದಾರೆ.

## ಲೋಕಾಯುಕ್ತ ನೇಮಕ ವಿರುದ್ಧ 45 ಕೋಟಿ ರೂ. ವ್ಯರ್ಥ ಮಾಡಿದ ಮೋದಿ

**ಸುದ್ದಿ ಬಿಂಬ**

ಅಹಮದಾಬಾದ್ : ಗುಜರಾತ್‌ನ ನರೇಂದ್ರ ಮೋದಿ ಸರ್ಕಾರದ ವ್ಯಾಪ್ತಿಯನ್ನು ಮೀರಿ ಲೋಕಾಯುಕ್ತರಾಗಿ ನೇಮಕಗೊಂಡಿರುವ ನ್ಯಾ. ಆರ್. ಎ. ಮೆಹ್ತಾ ತಮ್ಮ ಸ್ಥಾನ ಸ್ವೀಕರಿಸಲು ನಿರಾಕರಿಸಿದ್ದು, ಗುಜರಾತ್ ಸರ್ಕಾರ ತಮ್ಮ ಪ್ರಾಮಾಣಿಕತೆ ಮತ್ತು ವಿಶ್ವಾಸಾರ್ಹತೆಯನ್ನು ಸದಾ ಪ್ರಶ್ನಿಸುತ್ತದೆ ಎಂದು ಆಕ್ಷೇಪಿಸಿದ್ದಾರೆ. ರಾಜ್ಯ ಸರ್ಕಾರದ ಮನೋಭಾವ ಮತ್ತು ವರ್ತನೆಯ ಹಿನ್ನೆಲೆಯಲ್ಲಿ ತಾವು ಅಧಿಕಾರ ಸ್ವೀಕರಿಸುವುದಿಲ್ಲ ಎಂದು ಮೆಹ್ತಾ ರಾಜ್ಯಪಾಲರಿಗೆ ಮತ್ತು ಸರ್ಕಾರಕ್ಕೆ ಪತ್ರ ಬರೆದಿದ್ದಾರೆ. ತಮ್ಮ ನೇಮಕಾತಿ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ಹಲವು ದಾವೆಗಳನ್ನು ಹೂಡಿರುವ ಗುಜರಾತ್ ಸರ್ಕಾರ ಲೋಕಾಯುಕ್ತದ ಒಂದು ವರ್ಷದ ಬಜೆಟ್ ಹಣವನ್ನು ತಮ್ಮ ನೇಮಕಾತಿಯ ರದ್ದಿಗಾಗಿ ಖರ್ಚು ಮಾಡಿದೆ. ಈವರೆಗೂ ಈ ಮೊಕದ್ದಮೆಗಳಿಗಾಗಿ ರಾಜ್ಯಸರ್ಕಾರ 45 ಕೋಟಿ ಖರ್ಚು ಮಾಡಿದೆ. ತಮ್ಮ ನೇಮಕಾತಿಯನ್ನು ರದ್ದುಪಡಿಸಲು ರಾಜ್ಯ ಸರ್ಕಾರ ಸರ್ವ ಪ್ರಯತ್ನಗಳನ್ನೂ ಮಾಡಿದ್ದು ಹೈಕೋರ್ಟ್, ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದೇ ಅಲ್ಲದೆ ಪರಿಶೀಲನಾ ಅರ್ಜಿಯನ್ನೂ ಸಲ್ಲಿಸಿದೆ ಎಂದು ಮೆಹ್ತಾ ಆರೋಪಿಸಿದ್ದಾರೆ. ಬಡಜನತೆಯ ಬಗ್ಗೆ ತಮಗಿರುವ ಕಾಳಜಿ ಮತ್ತು ಸ್ವತಂತ್ರ ಅಭಿಪ್ರಾಯಗಳಿಗಾಗಿ ಹೆಸರಾಗಿರುವ ಮೆಹ್ತಾ ಅವರ ನೇಮಕಾತಿಯನ್ನು ಮೋದಿ ಸರ್ಕಾರ ತೀವ್ರವಾಗಿ ವಿರೋಧಿಸಿದ್ದು ತಮ್ಮ ಸರ್ಕಾರದ ವಿರುದ್ಧ ನಿಲುವು ತಾಳುವ ವ್ಯಕ್ತಿಯನ್ನು ನೇಮಿಸಲಾಗಿದೆ ಎಂದು ಹೇಳಿದೆ.



ನ್ಯಾ. ಆರ್. ಎ. ಮೆಹ್ತಾ

ಮುಖ್ಯಮಂತ್ರಿ ಮೋದಿ ನ್ಯಾ ಜೆ.ಬಿ. ಓರಾ ಅವರ ಹೆಸರನ್ನು ಸೂಚಿಸಿದ್ದು ರಾಜ್ಯ ಹೈಕೋರ್ಟ್ ನ್ಯಾ. ಮೆಹ್ತಾ ಅವರ ಹೆಸರನ್ನು ಸೂಚಿಸಿತ್ತು. ಮೆಹ್ತಾ ಸರ್ಕಾರ ವಿರೋಧಿ ಧೋರಣೆ ಹೊಂದಿದ್ದಾರೆ ಎಂಬ ಅಭಿಪ್ರಾಯವನ್ನು ಸುಪ್ರೀಂ ಕೋರ್ಟ್ ತಳ್ಳಿಹಾಕಿತ್ತು. 2003 ರಿಂದಲೂ ಗುಜರಾತ್ ಲೋಕಾಯುಕ್ತ ಇಲ್ಲದೆಯೇ ಆಡಳಿತ ನಡೆಸುತ್ತಿದೆ. ಆದರೆ 2011ರಲ್ಲಿ ರಾಜ್ಯಪಾಲರಾದ ಡಾ. ಕಮಲ ಹೈಕೋರ್ಟ್ ಶಿಫಾರಸನ್ನು ಆಧರಿಸಿ ನ್ಯಾ. ಮೆಹ್ತಾ ಅವರನ್ನು ಲೋಕಾಯುಕ್ತರನ್ನಾಗಿ ನೇಮಿಸಿದ್ದರು. ತದನಂತರ ಗುಜರಾತ್ ಸರ್ಕಾರ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ಗಳಲ್ಲಿ ತನ್ನ ಹೋರಾಟ ನಡೆಸುತ್ತಿದೆ.

– 'ಆರಾವಳಿ ಅಲೆ'ಯಲ್ಲಿ ಕಂಡ ಸುದ್ದಿ

## ಈ ವಾರ

ಪುಟ 3 ರಿಂದ

ತೀರ್ಪಿನಲ್ಲಿ ಗುರುತಿಸಬಹುದಾಗಿದೆ. ಆದ-ರೆ ಇದನ್ನು ವಿರೋಧಿಸಿ ದೇವಸ್ಥಾನದ ಪುರೋಹಿತಶಾಹಿಗಳು ಅಲ್ಲಿನ ಕೆಲ ಮಲೆಕುಡಿಯ ಬುಡಕಟ್ಟು ಜನರು, ಆಟೋ ರಿಕ್ಷಾ ಚಾಲಕರು, ನಾಗರೀಕರ ಹೆಸರಿನಲ್ಲಿ ಸುಪ್ರಿಂ ಕೋರ್ಟ್‌ನಲ್ಲಿ ಹೈಕೋರ್ಟ್‌ನ ಆದೇಶಕ್ಕೆ ತಡೆಯಾಜ್ಞೆ ಕೋರಿದ್ದರಿಂದ ಒಟ್ಟು ಪ್ರಕರಣವನ್ನು ಇನ್ನಷ್ಟು ಕೂಲಂಕುಶವಾಗಿ ಪರಿಶೀಲಿಸುವ ಹಿನ್ನೆಲೆಯಲ್ಲಿ ತಾತ್ಕಾಲಿಕವಾಗಿ ಯಥಾಸ್ಥಿತಿ ಕಾಯಲು ಸುಪ್ರಿಂ ಕೋರ್ಟ್ ತಡೆಯಾಜ್ಞೆ ನೀಡಿದೆ. ಇದರರ್ಥ ಮಡೆಸ್ನಾನಕ್ಕೆ ಸುಪ್ರಿಂಕೋರ್ಟ್ ಅನುಮೋದನೆ ನೀಡಿದೆ ಎಂದಲ್ಲ, ಹಾಗೆ ಹೇಳಿಯೂ ಇಲ್ಲ. ಅಂತಿಮ ಆದೇಶ ಇನ್ನೂ ನೀಡದಿರುವಾಗ ಇದು 'ನ್ಯಾಯದಾನ'ದಲ್ಲಿ ಸಹಜ ಕ್ರಿಯೆಯಾಗಿದೆ. ಆದರೆ ಸ್ಥಾಪಿತ ಹಿತಾಸಕ್ತಿಗಳು ಇದನ್ನೇ ತಮ್ಮ ಹಿತಾಸಕ್ತಿಗಳಿಗೆ ಪೂರಕವಾಗಿ ತಿರುಚಿ ಪ್ರಚಾರ ಮಾಡಿ ಜನರ ಹಾದಿ ತಪ್ಪಿಸುತ್ತಿವೆ.

ಈಗಿನ ಪ್ರಶ್ನೆ, ಈ ಹಿನ್ನೆಲೆಯಲ್ಲಿ ಮುಂದೆ ನ್ಯಾಯಾಲಯದ ಮುಂದೆ ರಾಜ್ಯ ಸರಕಾರ ಯಾವ ನಿಲುವನ್ನು ತೆಗೆದುಕೊಳ್ಳಲಿದೆ ಎಂಬುದು. ಹಾಗೇ ಸರಕಾರವು ಮಡೆಸ್ನಾನ ಮತ್ತು ಪಂಕ್ತಿಭೇಧದ ಆಚರಣೆಗಳನ್ನು ನಿರ್ಭಂಧಿಸಲು ತೀರ್ಮಾನ ಕೈಗೊಳ್ಳಬಹುದಾಗಿದ್ದು ಅದರತ್ತ ದಿಟ್ಟ ಹಜ್ಜೆ ಇಡಬೇಕಿದೆ. ಅದಕ್ಕೆ ಅವಕಾಶವಿದೆ. ರಾಜ್ಯದಲ್ಲಿ ಇನ್ನೂ ಸುಮಾರು 168 ದೇವಾಲಯಗಳಲ್ಲಿ, ಮಠಗಳಲ್ಲಿ ಇಂತಹ ಆಚರಣೆಗಳು ಇರುವುದರಿಂದ ಸರಕಾರ ಇದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು.

ಹಿಂದೆ ಇಂತಹುದೇ ಜಾತಿ ತಾರತಮ್ಯ, ಅಂಧಶ್ರದ್ಧೆಗಳಾದ ದೇವದಾಸಿ ಪದ್ಧತಿ, ಬೆತ್ತಲೆ ಸೇವೆ, ಸತಿ ಪದ್ಧತಿಯಂತಹವುಗಳನ್ನು ಕೆಲವು ಜನ ಸಮರ್ಥಿಸಿ, ಅನುಸರಿಸುತ್ತಿದ್ದರೂ ಅವುಗಳ ಅನಾಹುತಗಳನ್ನು ಪರಿಗಣಿಸಿ ಸರಕಾರ ಅವುಗಳನ್ನು ನಿಷೇಧಿಸಿದೆ. ಈಗಲೂ ರಾಜ್ಯದ ಕಾಂಗ್ರೆಸ್ ಸರಕಾರ ದಿಟ್ಟ ಕ್ರಮ ತೆಗೆದುಕೊಳ್ಳಬೇಕಿದೆ.

ಆದರೆ ಸರಕಾರದ ವಿಳಂಬ ಗಮನಿಸಿದರೆ ಸ್ಥಾಪಿತ ಹಿತಾಸಕ್ತಿಗಳನ್ನು ಅದರಲ್ಲೂ 'ಧಾರ್ಮಿಕ ಕ್ಷೇತ್ರದ ಪ್ರಭಾವಿ ವರ್ತಕ'ರನ್ನು ಎದುರು ಹಾಕಿಕೊಳ್ಳಲು ಅಧಿಕಾರಸ್ಥರು ತಯಾರಿರುವುದಿಲ್ಲ. ಅಂತಹುದೇ ನಿಲುವನ್ನು ಈ ಸರಕಾರವೂ ಪಾಲಿಸುವುದೇ? ಹಾಗಾದಲ್ಲಿ ಈ ಸರಕಾರವು ಜಾತೀವಾದಿ, ಮತೀಯವಾದಿ ಸ್ಥಾಪಿತ ಹಿತಾಸಕ್ತಿಗಳ ಮುಂದೆ ಮಡೆಸ್ನಾನದ ಉರುಳಾಟ ನಡೆಸಿದಂತಾಗುವುದು. ಅದ್ದರಿಂದ ಸಿದ್ಧರಾಮಯ್ಯನವರು ಅತೀ ಶೀಘ್ರದಲ್ಲಿಯೇ ನಿರ್ಧಾರವನ್ನು ತೆಗೆದುಕೊಳ್ಳಬೇಕು.

ಈ ಸನ್ನಿವೇಶದಲ್ಲಿ ಸರಕಾರ ತಾನಾಗಿಯೇ ನಿಷೇಧ ಮಾಡಿಬಿಡುವುದೆಂಬುದು ಕೇವಲ ಭ್ರಮೆಯಾದೀತು. ಆದ್ದರಿಂದ ಈ ಹೀನಷ್ಟ ಪದ್ಧತಿಗಳ ವಿರುದ್ಧ ಎಲ್ಲಾ ಪ್ರಗತಿಪರರು ಒಂದಾಗಿ ಬಹುಮುಖಿ ಹೋರಾಟವನ್ನು ತೀವ್ರಗೊಳಿಸಬೇಕು.

ಜನಶಕ್ತಿ
ಕನ್ನಡ ವಾರಪತ್ರಿಕೆ

## ಹಾಸನದಲ್ಲಿ ಸಿಪಿಐ(ಎಂ)ನ ರಾಜ್ಯಮಟ್ಟದ ಅಧ್ಯಯನ ಶಿಬಿರ

# 'ಜಾಗತಿಕ ಆರ್ಥಿಕ ಬಿಕ್ಕಟ್ಟಿಗೆ ಮಾರ್ಕ್ಸ್‌ವಾದದಲ್ಲಿದೆ ಉತ್ತರ' – ಜಿ.ವಿ.ಎಸ್.

ಭಾರತೀಯ ಸಮಾಜವು ಅಸಮಾನತೆ, ಶೋಷಣೆ, ಅಸ್ಪೃಶ್ಯತೆ–ಜಾತೀಯತೆಯ ಅಪಮಾನ, ಲಿಂಗ ತಾರತಮ್ಯದ ಅನ್ಯಾಯ. ಕೋಮುವಾದ ಇತ್ಯಾದಿ ಅಪಾಯಗಳಲ್ಲಿ





ಅಧ್ಯಯನ ಶಿಬಿರ ಉದ್ಘಾಟಿಸುತ್ತಿರುವ ಜಿ.ವಿ. ಶ್ರೀರಾಮರೆಡ್ಡಿ

ಸಿಲುಕಿ ನಲುಗುತ್ತಿದೆ. ಸಂಕೀರ್ಣವಾದ ನಮ್ಮ ಸಮಾಜದ ಈ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವುದು ಒಂದು ಗಂಭೀರವಾದ ಸವಾಲಾಗಿದೆ. ಮಾರ್ಕ್ಸ್‌ವಾದವು ಜಗತ್ತನ್ನು ಅರ್ಥ ಮಾಡಿಕೊಳ್ಳಲು ಇರುವ ಒಂದು ವೈಜ್ಞಾನಿಕವಾದ ಅಲೋಚನಾ ಕ್ರಮ ಮತ್ತು ಚಿಂತನಾ ವಿಧಾನವಾಗಿದೆ. ಮಾರ್ಕ್ಸ್‌ವಾದವು ಇದುವರೆಗೆ ಮನುಕುಲವು ಗಳಿಸಿರುವ ಪ್ರಾಕೃತಿಕ ವಿಜ್ಞಾನ ಮತ್ತು ಸಾಮಾಜಿಕ ವಿಜ್ಞಾನದ ಮೂಲಭೂತ ತಿಳುವಳಿಕೆಗಳನ್ನು ಮೇಳೈಸಿಕೊಂಡಿರುವ ಮಹಾನ್ ತತ್ವವಾಗಿದೆ.

ಮಾರ್ಕ್ಸ್‌ವಾದವನ್ನು ಬಳಸಿ ಭಾರತದ ಸಮಾಜದ ನಿರ್ದಿಷ್ಟ ಪರಿಸ್ಥಿತಿಗೆ ಅನುಗುಣವಾದ ಬದಲಾವಣೆಯ ದಾರಿಯನ್ನು ರೂಪಿಸಿಕೊಂಡು ಜನಚಳುವಳಿಯನ್ನು ಬಲಪಡಿಸಬೇಕಾಗಿದೆ. ಇಂತಹ ಚಳುವಳಿಯನ್ನು ರೂಪಿಸಿ ಅದನ್ನು ಮುಂದೊಯ್ಯುವ ಪ್ರಯತ್ನವನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮಾಡುತ್ತಿದೆ. ಕಮ್ಯುನಿಸ್ಟ್ ಚಳುವಳಿಯ ಪ್ರತಿಯೊಬ್ಬ ಕಾರ್ಯಕರ್ತನೂ ಕಾರ್ಯಕರ್ತಳೂ ಈ ನಿಟ್ಟಿನಲ್ಲಿ ಅಧ್ಯಯನಶೀಲರಾಗಬೇಕಾದ [illegible] ಕ್ರಿಯಾಶೀಲರಾಗಬೇಕಾದ ಅವಶ್ಯಕತೆ ಇದೆ. ಈ ನಿಟ್ಟಿನಲ್ಲಿ ಪ್ರೇರೇಪಿಸಲು ಸಿಪಿಐ(ಎಂ) ಪಕ್ಷವು ತನ್ನ ನಾನಾ ಸಮಿತಿಗಳ ಮುಖಂಡರು ಮತ್ತು ಕಾರ್ಯಕರ್ತರಿಗೆ ಸೈದ್ಧಾಂತಿಕ ಮತ್ತು ಸಂಘಟನಾತ್ಮಕ ವಿಷಯಗಳಲ್ಲಿ ತರಬೇತಿ ನೀಡುವ ಏಳು ದಿನಗಳ ರಾಜ್ಯಮಟ್ಟದ ಅಧ್ಯಯನ ಶಿಬಿರವನ್ನು ಸಂಘಟಿಸಿತ್ತು. ಹಾಸನ ನಗರದ ಎಂ.ಕೆ. ಕನ್‌ವೆನ್ಷನ್ ಹಾಲ್‌ನಲ್ಲಿ ಆಗಸ್ಟ್ 4 ರಿಂದ 10 ರವರೆಗೆ ಈ ಶಿಬಿರವು ಯಶಸ್ವಿಯಾಗಿ ನಡೆಯಿತು.

ಆಗಸ್ಟ್ 4 ರಂದು ಬೆಳಿಗ್ಗೆ ಶಿಬಿರವನ್ನು ಉದ್ಘಾಟಿಸಿದ ಸಿಪಿಐ(ಎಂ) ರಾಜ್ಯ ಸಮಿತಿಯ ಕಾರ್ಯದರ್ಶಿ ಜಿ.ವಿ. ಶ್ರೀರಾಮರೆಡ್ಡಿಯವರು ನಮ್ಮ ಪ್ರಸ್ತುತ ಜಗತ್ತಿನ ಆರ್ಥಿಕ ಬಿಕ್ಕಟ್ಟಿಗೆ ಮಾರ್ಕ್ಸ್‌ವಾದದಿಂದ ಮಾತ್ರ ಉತ್ತರ ಕಂಡುಕೊಳ್ಳಲು ಸಾಧ್ಯ ಎಂದು ಹೇಳಿದರು. 'ಮಾರ್ಕ್ಸ್‌ವಾದಿ ಸಿದ್ಧಾಂತದ ಆಧಾರದ ಮೇಲೆ ಸಿಪಿಐ(ಎಂ) ಪಕ್ಷವನ್ನು ಕಟ್ಟಲಾಗಿದೆ. ಪಕ್ಷದ ಕಾರ್ಯಕರ್ತರು ಮಾರ್ಕ್ಸ್‌ವಾದಿ ಚಿಂತನೆಗಳ



ಬಗ್ಗೆ ಹೆಚ್ಚೆಚ್ಚು ಅಧ್ಯಯನ ನಡೆಸಬೇಕಾದ ಅವಶ್ಯಕತೆ ಇದೆ. ಬಂಡವಾಳಗಾರರು, ಬಹು ರಾಷ್ಟ್ರೀಯ ಕಂಪೆನಿಗಳ ವಕ್ತಾರರು ಮಾರ್ಕ್ಸ್‌ವಾದದ ಯುಗ ಮುಗಿದಿದೆ ಎಂಬ ವಾದವನ್ನು ಮಾಡುತ್ತಿದ್ದಾರೆ. ಬಂಡವಾಳಶಾಹಿ ವ್ಯವಸ್ಥೆಯೇ ಸಮಾಜದ ಬೆಳವಣಿಗೆಯ ಕೊನೆಯ ಘಟ್ಟ ಎಂದು ಸಮೂಹ ಮಾಧ್ಯಮಗಳ ಮೂಲಕ ಪ್ರಚಾರ ಮಾಡುವ ಮೂಲಕ ಜನರನ್ನು ದಾರಿ ತಪ್ಪಿಸುವ ಕೆಲಸ ಮಾಡಲಾಗುತ್ತಿದೆ. 2008ರಲ್ಲಿ ಸ್ಫೋಟಿಸಿದ ಜಾಗತಿಕ ಆರ್ಥಿಕ ಬಿಕ್ಕಟ್ಟನ್ನು ಬಂಡವಾಳಶಾಹಿಗೆ ಇದುವರೆಗೂ ಬಗೆಹರಿಸಲು ಸಾಧ್ಯವಾಗಿಲ್ಲ. ಮಾರ್ಕ್ಸ್‌ವಾದಿ ತತ್ವಗಳಿಂದ ಮಾತ್ರ ಈ ಸಮಸ್ಯೆಗೆ ಪರಿಹಾರ ಸಾಧ್ಯ. ಆದ್ದರಿಂದ ಮಾರ್ಕ್ಸ್‌ವಾದದ ಅಧ್ಯಯನವು ಇಂದು ಹೆಚ್ಚು ಪ್ರಸ್ತುತವೂ ಅಗತ್ಯವೂ ಆಗಿದೆ ಎಂದೂ ಶ್ರೀರಾಮರೆಡ್ಡಿಯವರು ಹೇಳಿದರು.

ಸಿಪಿಐ(ಎಂ) ಮತ್ತು ಎಡ ಪಕ್ಷಗಳನ್ನು ಮೂಲೆಗುಂಪು ಮಾಡುವ ಪ್ರಯತ್ನ ದೇಶದಲ್ಲಿ ಇತ್ತೀಚೆಗೆ ಹೆಚ್ಚಿದೆ. ಸಿಪಿಐ(ಎಂ) ಪಕ್ಷವನ್ನು ಹೊರತುಪಡಿಸಿದ ತೃತೀಯ ರಂಗ ರಚನೆಯ ಯತ್ನವನ್ನು ತೃಣಮೂಲ ಕಾಂಗ್ರೆಸ್ ನಾಯಕಿ, ಮಮತಾ ಬ್ಯಾನರ್ಜಿ ನಡೆಸಿದ್ದಾರೆ. ಆದರೆ ಅದು ಸಾಧ್ಯವಿಲ್ಲದ ಮಾತು ಎಂದು ಜಿ.ವಿ. ಶ್ರೀರಾಮರೆಡ್ಡಿ ಹೇಳಿದರು.

**ಪುಸ್ತಕಗಳ ಬಿಡುಗಡೆ**

ಈ ಸಂದರ್ಭದಲ್ಲಿ 'ಸಮಕಾಲೀನ ಭಾರತ ಭಾಗ–2', 'ಕೂಲಿಗೆಲಸ ಬಂಡವಾಳ', ಮತ್ತು 'ಹರ್‌ಕಿಶನ್ ಸಿಂಗ್ ಸುರ್ಜಿತ್'. ಈ ಮೂರು ಪುಸ್ತಕಗಳನ್ನು ಬಿಡುಗಡೆಗೊಳಿಸಲಾಯಿತು. ಪುಸ್ತಕಗಳನ್ನು ಬಿಡುಗಡೆಗೊಳಿಸಿ ಮಾತನಾಡಿದ ಸಿಪಿಐ(ಎಂ) ರಾಜ್ಯ ಸಮಿತಿಯ ಕಾರ್ಯದರ್ಶಿ ಮಂಡಳಿ ಸದಸ್ಯ ಜಿ.ಎನ್. ನಾಗರಾಜ್ 'ಮಾರ್ಕ್ಸ್‌ವಾದಿ ಚಿಂತನೆಗಳಿಂದ ಹೊಸ ಸಮಾಜವನ್ನು ಸೃಷ್ಟಿಸಲು ಸಾಧ್ಯವಾಗುತ್ತದೆ. 70–80ರ ದಶಕದಲ್ಲಿ ರಾಜ್ಯದಲ್ಲಿ ಚಿಮ್ಮಿ ಬಂದ ದಲಿತ, ಸಾಂಸ್ಕೃತಿಕ, ರೈತರ ಚಳುವಳಿಗಳ ಹಿಂದೆ ಸಿಪಿಐ(ಎಂ) ಪಕ್ಷದ ಪರಿಶ್ರಮ ಮತ್ತು ಬೆಂಬಲವಿತ್ತು. ಇಂದು ದಲಿತ ಚಳುವಳಿ, ರೈತ ಚಳುವಳಿ, ಮುಂತಾದವುಗಳೆಲ್ಲ ವಿಘಟನೆ ಹೊಂದಿ ಒಡೆದು ಹೋಗಿವೆ. ಮಾರ್ಕ್ಸ್‌ವಾದಿ ಸಿದ್ಧಾಂತದ ಆಧಾರದ ಮೇಲೆ ಕೆಲಸ ಮಾಡುವ ಸಿಪಿಐ(ಎಂ) ಇಂದಿಗೂ ಒಂದಾಗಿ ಉಳಿದುಕೊಂಡು ನಿರಂತರವಾಗಿ ಬೆಳೆಯುತ್ತಿದೆ.

ಒಂದು ಅರ್ಥದಲ್ಲಿ ಕರ್ನಾಟಕ ರಾಜ್ಯದಲ್ಲಿ ಎಂಭತ್ತರ ದಶಕದ ಆರಂಭದಲ್ಲಿ ನಡೆದ ನರಗುಂದ ಬಂಡಾಯದ ಬೀಜವನ್ನು ಬಿತ್ತಿದವರು ಸಿಪಿಐ(ಎಂ) ಮಾಜಿ ಪ್ರಧಾನ ಕಾರ್ಯದರ್ಶಿ ಹರ್‌ಕಿಶನ್ ಸಿಂಗ್ ಸುರ್ಜಿತ್ ಅವರು. ಪಂಜಾಬ್ ರಾಜ್ಯದಲ್ಲಿ ನೀರಾವರಿ




ಅಧ್ಯಯನ ಶಿಬಿರ ಉದ್ಘಾಟನಾ ಸಂದರ್ಭದಲ್ಲಿ ಪುಸ್ತಕಗಳು ಬಿಡುಗಡೆ

ಪ್ರದೇಶದಲ್ಲಿ ಅಭಿವೃದ್ಧಿ ಶುಲ್ಕದ ಹೆಸರಿನ ರೈತರನ್ನು ಸುಲಿಗೆ ಮಾಡುವ ನೀತಿ ವಿರುದ್ಧದ ಸುರ್ಜಿತ್ ಅವರ ನೇತೃತ್ವದಲ್ಲಿ ರೂಪಿಸಲಾದ ಹೋರಾಟವೇ ಮಲಪ್ರಭ ತೀರದ ನರಗುಂದ ಬಂಡಾಯಕ್ಕೆ ಪ್ರೇರಣೆ ' ಎಂದರು.

ಸಿಪಿಐ(ಎಂ) ರಾಜ್ಯ ಸಮಿತಿಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ವಿಜೆಕೆ ನಾಯರ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಅವರು ಮಾತನಾಡುತ್ತ 'ಇಂದು ಧಾರ್ಮಿಕ ಮುಖಂಡರಾದ ಪೋಪ್ ಅವರು ಕೂಡ ಮಾರ್ಕ್ಸ್ ಅವರ 'ದಾಸ್ ಕ್ಯಾಪಿಟಲ್' ಮಹಾಗ್ರಂಥವನ್ನು ತರಿಸಿಕೊಂಡು ಅಧ್ಯಯನ ಮಾಡುತ್ತಿದ್ದಾರೆ. ಮತ್ತು ಅದರಿಂದ ಜಾಗತಿಕ ಆರ್ಥಿಕ ಬಿಕ್ಕಟ್ಟಿಗೆ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಎಂದರು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ನಿತ್ಯಾನಂದ ಸ್ವಾಮಿ, ಮಾರುತಿ ಮಾನ್ಪಡೆ, ಕೆ.ಶಂಕರ್, ಎಸ್. ವರಲಕ್ಷ್ಮಿ, ಯು.ಬಸವರಾಜು, ಹಾಸನ ಜಿಲ್ಲಾ ಸಂಘಟನಾ ಸಮಿತಿ ಕಾರ್ಯದರ್ಶಿ ವಿ. ಸುಕುಮಾರ್, ಜಿಲ್ಲಾ ಮುಖಂಡರಾದ ಧರ್ಮೇಶ್, ಎಚ್. ಎನ್. ನವೀನ್ ಕುಮಾರ್, ಹರೀಶ್ ಹಾಗೂ ಸತ್ಯನಾರಾಯಣ ಮುಂತಾದವರು ವೇದಿಕೆಯಲ್ಲಿ ಉಪಸ್ಥಿತರಿದ್ದರು

ವರದಿ : ಆರ್. ರಾಮಕೃಷ್ಣ


# 'ಚುನಾವಣಾ ಪ್ರಣಾಳಿಕೆಯನ್ನು ರೂಪಿಸುವ ಹಕ್ಕು ಆಯಾ ರಾಜಕೀಯ ಪಕ್ಷಗಳದ್ದು' – ಬಾಹ್ಯ ಹಸ್ತಕ್ಷೇಪವನ್ನು ಒಪ್ಪಲಾಗದು –

ರಾಜಕೀಯ ಪಕ್ಷಗಳು ತಮ್ಮ ಸಿದ್ಧಾಂತ, ಗುರಿ, ನೀತಿಗಳು ಮತ್ತು ಕಾರ್ಯಕ್ರಮಗಳನ್ನು ರೂಪಿಸುವುದರಲ್ಲಿ ಯಾವುದೇ ತರಹದ ಬಾಹ್ಯ ಹಸ್ತಕ್ಷೇಪವನ್ನು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ವಿರೋಧಿಸುತ್ತದೆ. ರಾಜಕೀಯ ಪಕ್ಷಗಳಿಗೆ ತಮ್ಮ ಸಿದ್ಧಾಂತ, ನೀತಿಗಳು, ಕಾರ್ಯಕ್ರಮಗಳು ಮತ್ತು ಜನರಿಗೆ ನೀಡುವ ಭರವಸೆಗಳ ಕುರಿತು ಮುಕ್ತವಾಗಿ ಅಭಿವ್ಯಕ್ತಿಗೊಳಿಸಲು ಇರಬೇಕಾದ ಹಕ್ಕು, ಮುಕ್ತ ಮತ್ತು ನ್ಯಾಯಯುತ ಚುನಾವಣೆಗೆ ಒಂದು ಮುಖ್ಯ ತಳಹದಿಯಾಗಿದೆ. ಈ ಅಭಿವ್ಯಕ್ತಿಯ ಹಕ್ಕುಗಳ ಮೇಲಿನ ಆಕ್ರಮಣ ಅಥವಾ ಯಾವುದೇ ಪ್ರಾಧಿಕಾರ, ಅಥವಾ ಸಂಸ್ಥೆಯ ಹಸ್ತಕ್ಷೇಪ 'ರಾಜಕೀಯ ಪಕ್ಷ ವ್ಯವಸ್ಥೆ'ಯ ಬುಡಕ್ಕೆ ಹಾಗೂ ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆಗೆ ಕೊಡಲಿ ಏಟು ಹಾಕುತ್ತದೆ. ಯಾವುದೇ ಒಂದು ರಾಜಕೀಯ ಪಕ್ಷವು ಅದರ ಸದಸ್ಯರ ಸ್ವ ಇಚ್ಛೆಯ ಸಂಘಟನೆಯಾಗಿದೆ. ಸಿದ್ಧಾಂತ, ಗುರಿ, ನೀತಿಗಳು, ಮತ್ತು ಕಾರ್ಯಕ್ರಮ ಇತ್ಯಾದಿಗಳು ಈ ಸಂಘಟನೆಯ ತಳಹದಿ. ತಮ್ಮ ಪಕ್ಷದ ಗುರಿ, ನೀತಿಗಳು ಮತ್ತು ಕಾರ್ಯಕ್ರಮಗಳನ್ನು ನಿರ್ಧರಿಸುವುದು ಆ ರಾಜಕೀಯ ಪಕ್ಷದ ಹಕ್ಕು.

ಚುನಾವಣಾ ಪ್ರಣಾಳಿಕೆಯೆಂದರೆ ಪಕ್ಷದ ಸಿದ್ಧಾಂತ, ಗುರಿ, ಉದ್ದೇಶಗಳು, ನಿಲುವುಗಳು, ದೃಷ್ಟಿಕೋನ, ನೀತಿಗಳು, ಕಾರ್ಯಕ್ರಮಗಳು ಮತ್ತು ಭರವಸೆಗಳ ಘೋಷಣಾ ಪತ್ರ, ಸಾಮಾನ್ಯವಾಗಿ ಪ್ರತಿ ಚುನಾವಣಾ ಪೂರ್ವದಲ್ಲಿ ಚುನಾವಣಾ ಪ್ರಣಾಳಿಕೆಯನ್ನು ಪ್ರಕಟಿಸಲಾಗುತ್ತದೆ. ತನ್ನ ಚುನಾವಣಾ ಪ್ರಣಾಳಿಕೆಯ ಸಾರವನ್ನು ನಿರ್ಧರಿಸುವ ಹಕ್ಕು ಆಯಾ ರಾಜಕೀಯ ಪಕ್ಷದ್ದಾಗಿರುತ್ತದೆ. ಆದ್ದರಿಂದ ಬಲವಾದ ಚುನಾವಣಾ ಪದ್ಧತಿಯಿರುವ ಜಗತ್ತಿನ ಯಾವುದೇ ದೇಶದಲ್ಲಿ ಚುನಾವಣಾ ಪ್ರಣಾಳಿಕೆಯ ತಿರುಳಿನ ಮೇಲುಸ್ತುವಾರಿ ಮಾಡುವ ಅಥವಾ ಚುನಾವಣಾ ಪ್ರಾಧಿಕಾರ ಸೇರಿದಂತೆ ಹೊರಗಿನ ಸಂಸ್ಥೆಯೊಂದು ಪ್ರಣಾಳಿಕೆಯ ಸಾರವನ್ನು ಅನುಮೋದನೆ ಮಾಡುವ ಅಥವಾ ಚುನಾವಣಾ ಆಯೋಗಗಳೇ ಇದರ ಉಸ್ತುವಾರಿ ಮಾಡುವ ಕ್ರಮ ಇಲ್ಲ. ಸಿಪಿಐ(ಎಂ) ಚುನಾವಣಾ ಪ್ರಣಾಳಿಕೆಯಲ್ಲಿ ಯಾವುದೇ ಬಾಹ್ಯ ಸಂಸ್ಥೆ, ಅಥವಾ ಪ್ರಾಧಿಕಾರ ಯಾವುದೇ ರೀತಿಯ ಹಸ್ತಕ್ಷೇಪ ಮಾಡುವುದನ್ನು ವಿರೋಧಿಸುತ್ತದೆ.

'ಪುಕ್ಕಟೆ ಸರಕು–ಪುಕ್ಕಟೆ ಕೊಡುಗೆ' **(freebies)** ಎಂದರೆ ಏನು ಎಂಬುದನ್ನು ಅರ್ಥೈಸುವುದು ಕಷ್ಟ. ವೆಬ್‌ಸ್ಟರ್ ಅಥವಾ ಆಕ್ಸ್‌ಫರ್ಡ್ ನಿಘಂಟುಗಳೂ ಈ ಕೆಲಸದಲ್ಲಿ ಸಹಾಯ ನೀಡಲಾರವು. ಇಲ್ಲಿನ ಅರ್ಥಗಳನ್ನು ಒಪ್ಪುವುದಾದರೆ ಭಾರತದ ಸಂವಿಧಾನದ ಭಾಗ–4 ರ 'ರಾಜ್ಯ ನೀತಿ ನಿರ್ದೇಶನ ಸೂತ್ರ'ಗಳ ಅನುಷ್ಠಾನದ ಭರವಸೆಗಳು ಮತ್ತು ಆಹಾರ ಭದ್ರತಾ ಯೋಜನೆಯ ಆಶ್ವಾಸನೆಗಳು, ಸಾಮಾಜಿಕ ಕಲ್ಯಾಣದ ಮತ್ತು ಭದ್ರತೆಯ ಯೋಜನೆಗಳು, ಭೂ ರಹಿತರಿಗೆ ಭೂಮಿ ಹಂಚುವ ಭರವಸೆ ಇತ್ಯಾದಿಗಳೆಲ್ಲ 'ಪುಕ್ಕಟೆ ಕೊಡುಗೆ' ಅಡಿಗೆ ಬರುತ್ತವೆ. ಒಂದು ರಾಜಕೀಯ ಪಕ್ಷವು ತಾನು ಅಧಿಕಾರಕ್ಕೆ ಬಂದರೆ ಮಾಧ್ಯಮಿಕ ಹಂತದವರೆಗೆ ಶಿಕ್ಷಣವನ್ನು ಉಚಿತವಾಗಿ ನೀಡುವೆನೆಂಬ ಭರವಸೆ ನೀಡಿದರೆ, ಅದೇ ರೀತಿ ಉಚಿತ ಆರೋಗ್ಯದ ಸೌಲಭ್ಯ ಒದಗಿಸುವ ಭರವಸೆನ್ನು ನೀಡಿದರೆ, ಭೂ ರಹಿತರಿಗೆ ಭೂಮಿ ಹಂಚುವ ಭರವಸೆ ನೀಡಿದರೆ ಅದರಲ್ಲಿ ತಪ್ಪೇನಿದೆ?

ಚುನಾವಣಾ ಪ್ರಣಾಳಿಕೆಗಳನ್ನು ಉಸ್ತುವಾರಿ ಮಾಡಲು ಹೊಸದಾಗಿ ಯಾವುದೇ ಕಾನೂನು ರಚಿಸುವ ಅಥವಾ ನಿರ್ದೇಶಕ ಸೂತ್ರಗಳನ್ನು ರೂಪಿಸುವ ಅಗತ್ಯವಿಲ್ಲ. 'ಸಾಮಾನ್ಯ ನಡಾವಳಿ' ಮತ್ತು 'ರಾಜಕೀಯ ಪಕ್ಷಗಳು ಮತ್ತು ಅಭ್ಯರ್ಥಿಗಳಿಗೆ ಮಾದರಿ ನೀತಿ ಸಂಹಿತೆ'ಯಲ್ಲಿ ಆಗಲೇ ಮುಖ್ಯ ನಿರ್ದೇಶನಗಳನ್ನು ಒದಗಿಸಲಾಗಿದೆ. ಇವುಗಳಲ್ಲದೆ, ಚುನಾವಣಾ ಪ್ರಣಾಳಿಕೆ ತಯಾರಿಸುವಲ್ಲಿ ರಾಜಕೀಯ ಪಕ್ಷಗಳಿಗೆ ಹೆಚ್ಚುವರಿ ನಿರ್ದೇಶನಗಳ ಅವಶ್ಯಕತೆಯಿಲ್ಲ.




ವಿವಿಧ ಪಕ್ಷಗಳ ಪ್ರಣಾಳಿಕೆಗಳು

---

## ಅಖಿಲ ಭಾರತ .....

ಪುಟ 05 ರಿಂದ

ಖಾಸಗೀಕರಿಸುವ, ಕಾರ್ಪೋರೇಟ್ ಸಂಸ್ಥೆಗಳಿಗೆ ವಹಿಸುವ ಹುನ್ನಾರವಾಗಿದೆ. ಎಂದು ಕಟುವಾಗಿ ಟೀಕಿಸಿದೆ. ಕೃಷಿಯಲ್ಲಿ ದೊಡ್ಡ ಪ್ರಮಾಣದಲ್ಲಿ ತೊಡಗಿರುವ ಮಹಿಳೆಯ ಶ್ರಮವನ್ನು ಸರಿಯಾಗಿ ಗುರುತಿಸಿಲ್ಲ. ಮತ್ತು ಸೂಕ್ತ ಮನ್ನಣೆ ನೀಡದಿರುವುದು ಬದಲಾಗಬೇಕು ಹಾಗೂ ರೈತಾಪಿ ಸಮುದಾಯದಲ್ಲೇ ಅತ್ಯಂತ ಶೋಷಿತರಾಗಿರುವ ದಲಿತ, ಆದಿವಾಸಿಗಳ ಅಭಿವೃದ್ಧಿಗೆ ವಿಶೇಷ ಘಟಕ ಉಪಯೋಜನೆಗಳ ಮೂಲಕ ವಿಶೇಷ ಪ್ರಯತ್ನಗಳಿಗಾಗಿ ಹೋರಾಟವನ್ನು ರೂಪಿಸುವಂತೆ ಸಮ್ಮೇಳನ ಒಕ್ಕೊರಲಿನಿಂದ ಒತ್ತಾಯಿಸಿತು.

ನವಉದಾರೀಕರಣ ನೀತಿಗಳ ವಿರುದ್ಧದ ಹೋರಾಟ ಸಮರಶೀಲಗೊಳ್ಳಬೇಕಾದರೆ ಈ ನೀತಿಗಳಿಂದ ಹೆಚ್ಚು ಬಾಧೆಗೆ ಒಳಗಾಗಿರುವ ಕೃಷಿ ಕೂಲಿಕಾರರು–ಒಡರೈತರನ್ನು ಕೇಂದ್ರವಾಗಿಟ್ಟುಕೊಂಡು ರೂಪಿಸುವ ಕಾರ್ಷಿಕ ಚಳುವಳಿಯಿಂದ ಮಾತ್ರ ಸಾಧ್ಯ ಎನ್ನುವ ಘೋಷಣೆಯನ್ನು ಈ ಸಮ್ಮೇಳನ ನೀಡಿದೆ.

**ಕೃಷಿ ಕಂಪನಿಕರಣವೇ 2ನೇ ಹಸಿರು ಕ್ರಾಂತಿಯ ಗುರಿ – ಎಸ್.ರಾಮಚಂದ್ರನ್ ಪಿಳ್ಳೆ**

ಮನಮೋಹನ್ ಸಿಂಗ್ ನೇತೃತ್ವದ ಯುಪಿಎ ಸರ್ಕಾರ ಕೃಷಿ ಮತ್ತು ರೈತರನ್ನು ಸಂಪೂರ್ಣ ನಿರ್ಲಕ್ಷ್ಯ ಮಾಡಿದೆ. ಕೇವಲ ಕಾರ್ಪೋರೇಟ್ ಕಂಪನಿಗಳ, ಭೂಮಾಲೀಕರ ಹಿತವನ್ನು ಮಾತ್ರ ಕಾಯುತ್ತಿದೆ. ಕೇಂದ್ರ ಸರ್ಕಾರ ಈಗ 2ನೇ ಹಸಿರು ಕ್ರಾಂತಿಯ ಬಗ್ಗೆ ಮಾತನಾಡುತ್ತಿದೆ. ಇದರ ಉದ್ದೇಶ ಕೃಷಿಯ ಕಂಪನೀಕರಣವಲ್ಲದೇ ಮತ್ತೇನೂ ಅಲ್ಲ ಎಂದು ಎಐಕೆಎಸ್‌ನ 33ನೇ ಸಮ್ಮೇಳನದ ಅಧ್ಯಕ್ಷೀಯ ಭಾಷಣದಲ್ಲಿ ಎಸ್. ರಾಮಚಂದ್ರನ್ ಪಿಳ್ಳೆ ತಿಳಿಸಿದ್ದರು.

ಸರ್ಕಾರಿ–ಖಾಸಗಿ ಪಾಲುದಾರಿಕೆ ರೂಪದಲ್ಲಿ ಭಾರತದ ಕೃಷಿ ಮೇಲೆ ನಡೆಯುತ್ತಿರುವ ಹೊಸ ದಾಳಿಯು, ಫಲವತ್ತಾದ ಭೂಮಿಯನ್ನು ಮತ್ತು ಸಾರ್ವಜನಿಕ ಹಣಕಾಸನ್ನು ಕಾರ್ಪೋರೇಟ್ ಸಂಸ್ಥೆಗಳಿಗೆ ವರ್ಗಾಯಿಸುವ ನೀತಿಯಾಗಿದೆ. ಈ ಸರ್ಕಾರ ಅನುಸರಿಸುತ್ತಿರುವ ಬಂಡವಾಳಶಾಹಿಯನ್ನು ಬೆಳೆಸುವ ಪ್ರಕ್ರಿಯೆಯು ರೈತಾಪಿ ಜನ ಭೂಮಿ ಮಾರಿಕೊಳ್ಳುವಂತೆ ಪ್ರೇರೇಪಿಸುತ್ತಿದೆ. ಕಳೆದ ಫೆಬ್ರವರಿಯಲ್ಲಿ ರಿಜರ್ವ್ ಬ್ಯಾಂಕ್ ಆಫ್ ಇಂಡಿಯಾ, ವಾಣಿಜ್ಯ ಬ್ಯಾಂಕ್‌ಗಳು ಸಹ ರಿಯಲ್ ಎಸ್ಟೇಟ್ ವ್ಯವಹಾರದಲ್ಲಿ ತೊಡಗಲು ಪ್ರಕಟಣೆ ಹೊರಡಿಸಿದೆ. ಇದು ಕಾರ್ಪೋರೇಟ್ ಮತ್ತು ರಿಯಲ್ ಎಸ್ಟೇಟ್ ಕಂಪನಿಗಳ ಭೂ ಕಬಳಿಕೆ ದಾಹವನ್ನು ಪ್ರೋತ್ಸಾಹಿಸಲಿದೆ ಎಂದು ಅವರು ವಿವರಿಸಿದರು.

ಪ್ರತಿಯೊಂದು ಕೃಷಿ ಲಾಗುವಾಡುಗಳಾದ ಬೀಜ, ಕೀಟನಾಶಕ, ರಸಗೊಬ್ಬರ, ನೀರಾವರಿ, ವಿದ್ಯುತ್, ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ನಿಗಧಿಮಾಡುವಾಗ ಈ ಕಂಪನಿಗಳ ಹಿತ ಕಾಪಾಡುವ ಸರ್ಕಾರ, ಅದೇ ರೈತ ಬೆಳೆದ ಉತ್ಪನ್ನಗಳ ಬೆಲೆ ನಿಗಧಿ ಪ್ರಶ್ನೆ ಬಂದಾಗ ಹೂಡಿಕೆ ವೆಚ್ಚ ಏರಿಕೆಗೆ ಅನುಗುಣವಾದ ಏರಿಕೆಯನ್ನೇನೂ ಮಾಡುತ್ತಿಲ್ಲ. ಇದೇ ಸಂದರ್ಭದಲ್ಲಿ ಆರೋಗ್ಯ ಮತ್ತು ಶಿಕ್ಷಣದಂತಹ ಮೂಲಭೂತ ಸೌಕರ್ಯಗಳನ್ನು ಖಾಸಗೀಕರಿಸಿರುವುದರಿಂದ ಜೀವನ ವೆಚ್ಚವು ತೀವ್ರ ಗತಿಯ ಏರಿಕೆ ಕಂಡಿದೆ. ಈ ಪರಿಸ್ಥಿತಿಗಳೇ ಕೃಷಿಯನ್ನು ಮುಂದುವರಿಸಲು ಸಾಧ್ಯವಿಲ್ಲದ ಸ್ಥಿತಿಗೆ ಕಾರಣವಾಗಿವೆ.

ಆದ್ದರಿಂದ ಹೂಡಿಕೆ ವೆಚ್ಚಗಳನ್ನು ನಿಯಂತ್ರಿಸುವ, ಸಾರ್ವಜನಿಕ ಬಂಡವಾಳವನ್ನು ಒದಗಿಸುವ, ಉತ್ತಮವಾದ ಲಾಭದಾಯಕ ಬೆಲೆ ಖಾತರಿಪಡಿಸುವ ಪರ್ಯಾಯ ಕೃಷಿ ನೀತಿಗೆ ರೈತಾಪಿ ಜನತೆಯನ್ನು ಅಣಿನೆರಸಬೇಕೆಂದು ಕರೆ ನೀಡಿದ್ದರು.

ಸಮ್ಮೇಳನವು ನೂತನ ಅಖಿಲ ಭಾರತ ಅಧ್ಯಕ್ಷರನ್ನಾಗಿ ರಾಜಸ್ಥಾನದ ಪ್ರಖ್ಯಾತ ರೈತ ನಾಯಕ ಅಮ್ರರಾಮ್ ರವರನ್ನು, ನೂತನ ಪ್ರಧಾನ ಕಾರ್ಯದರ್ಶಿಯಾಗಿ ಹನನ್ ಮೊಲ್ಲಾ ಸೇರಿದಂತೆ 62 ಸಿಕೆಸಿ ಸದಸ್ಯರನ್ನು ಒಳಗೊಂಡ 146 ಎಐಕೆಸಿ ಸದಸ್ಯರನ್ನಾಗಿ ಆಯ್ಕೆ ಮಾಡಿತು. ಕರ್ನಾಟಕದಿಂದ ಎಐಕೆಸಿ ಸದಸ್ಯರಾಗಿ ಮಾರುತಿ ಮಾನ್ಪಡೆ (ಸಿಕೆ… ಯು.ಬಸವರಾಜು (ಸಿಕೆಸಿ) ಜಿ.ಸಿ. ಬಯ್ಯಾರೆಡ್ಡಿ, ವೆಂಕಟಚಾಲಯ್ಯ, ಗೌರಮ್ಮ ಪಾಟೀಲ್ ಆಯ್ಕೆಯಾಗಿದ್ದಾರೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

# ಮುಂಜಾಗರೂಕತೆಯನ್ನೂ ಕೈಬಿಟ್ಟು ಎಫ್‌ಡಿಐಗೆ ಕೈಚಾಚುವ ಪರಿಸ್ಥಿತಿ


ಹುಬ್ರಾಂಡ್ ಚಿಲ್ಲರೆ ವ್ಯಾಪಾರದಲ್ಲಿ ಶೇ. ವಿದೇಶಿ ನೇರ ಹೂಡಿಕೆಗೆ ಅವಕಾಶ ಡಿದಾಗ ಅದರಿಂದ ದೇಶದ ಆರ್ಥಿಕಕ್ಕೆ ವಗಬಹುದಾದ ಅಪಾಯಗಳ ಬಗ್ಗೆ ಸಾಕಷ್ಟು ುಂಜಾಗರೂಕತೆ ವಹಿಸಲಾಗಿದೆ, ಸಾಕಷ್ಟು ಕ್ಷಣೋಪಾಯಗಳನ್ನು ಮಾಡಲಾಗಿದೆ ಂದು ಯುಪಿಎ-2 ಸರಕಾರ ಹೇಳಿತ್ತು. ಫ್‌ಡಿಐಗೆ ಬಲವಾದ ಪ್ರತಿಭಟನೆಯ ನ್ನೆಲೆಯಲ್ಲಿ ಆಗ, ತಾನೇ ರೂಪಿಸಿಕೊಂಡ ಂತಹ ರಕ್ಷಣೋಪಾಯಗಳನ್ನು ಸಡಿಲಿಸಲು ಗ ಅದೇ ಸರಕಾರ ಒಂದೇ ವರ್ಷದೊಳಗೆ ರ್ಧರಿಸಿದೆ.

ವಾಲ್‌ಮಾರ್ಟ್‌ನಂತಹ ದೈತ್ಯ ಕಂಪನಿಗಳು ಶೇ.ದಷ್ಟು ಸ್ಥಳೀಯ ಸಣ್ಣ ಮತ್ತು ಮಧ್ಯಮ ಮಾಣದ ಉತ್ಪಾದಕರಿಂದಲೇ ಖರೀದಿಸಬೇಕು ಂಬ ಶರತ್ತನ್ನು ಸಡಿಲಿಸಲಾಗಿದೆ. 10ಲಕ್ಷಕ್ಕಿಂತ ಚ್ಚು ಜನಸಂಖ್ಯೆಯಿರುವಲ್ಲಿ ಮಾತ್ರ ಇಂತಹ ಗಳಿಗೆ ಅನುಮತಿ ಕೊಡಲಾಗುವುದು ಂಬ ಶರತ್ತನ್ನೂ ಸಡಿಲಿಸಲಾಗುವುದಂತೆ. ಲ್ಲರೆ ಮಾರಾಟ ನಡೆಸಲೆಂದು ರುವ ಬಂಡವಾಳದಲ್ಲಿ ಅರ್ಧದಷ್ಟನ್ನು ೂಲರಚನೆಯಲ್ಲಿ ಹೂಡಬೇಕು ಂಬ ಶರತ್ತನ್ನೂ ಕೈಬಿಡಲು ಸರಕಾರ ರ್ಧರಿಸಿದೆಯಂತೆ. ಸಂಸತ್ತಿನಲ್ಲಿ ಎಫ್‌ಡಿಐ ರಿಕೆಗೆ ಯುಪಿಎ-2 ಸರಕಾರ ಅನುಮೋದನೆ ಡೆದದ್ದು ಇಂತಹ ಮುಂಜಾಗ್ರತೆಯ ಕ್ರಮಗಳ ಂತರವೇ ಎಂಬುದು ಗಮನಾರ್ಹ.

ಸ್ವತಃ ಯುಪಿಎ-2 ಸರಕಾರದ ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳ ಇಲಾಖೆ ಈ ಸಡಿಲಿಕೆಯ ಕ್ರಮಗಳಿಗೆ ತೀವ್ರ ವಿರೋಧ ವ್ಯಕ್ತಪಡಿಸಿತು ಎಂದು ವರದಿಯಾಗಿದೆ. ಈ ಸಡಿಲಿಕೆಗಳ ಮೂಲಕ ಎಫ್‌ಡಿಐ ಏರಿಕೆ-ಯ ನಿರ್ಧಾರದ ಮೂಲನೆಲೆಯನ್ನೇ ಕಳಚಿ ಹಾಕಿದಂತಾಗಿದೆ ಎಂದು ಕೂಡ ಅದು ಹೇಳಿದೆ. ಆದರೂ ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿ ಈ ವಿರೋಧವನ್ನು ಬದಿಗೆ ಳ ಈ ನಿರ್ಧಾರವನ್ನು ಕೈಗೊಂಡಿದೆ.

**ಇದು ಅಮೆರಿಕನ್ ಸರಕಾರದ ಒತ್ತಡದಿಂದ, ದೈತ್ಯ ಕಂಪನಿಗಳಿಗೆ ಶರಣಾಗಿ ಕೈಗೊಂಡಿರುವ ಕ್ರಮ ಎಂದು ಸಿಪಿಐ(ಎಂ) ಮಾಡಿರುವ ಟೀಕೆಯನ್ನು ಈ ವಾರ ಯುಪಿಎ ಸರಕಾರವೇ ಸಂಸತ್ತಿನಲ್ಲಿ ಒಪ್ಪಿಕೊಂಡಿದೆ.** ವಾಣಿಜ್ಯ ಮತ್ತು ಉದ್ದಿಮೆ ಇಲಾಖೆಯ ರಾಜ್ಯ ಮಂತ್ರಿಗಳು ಲೋಕಸಭೆಯಲ್ಲಿ ಒಂದು ಪ್ರಶ್ನೆಗೆ ಉತ್ತರಿಸುತ್ತಾ ಅಮೆರಿಕಾ ಆಡಳಿತ ಚಿಲ್ಲರೆ ವ್ಯಾಪಾರ, ರಕ್ಷಣಾ ಉದ್ದಿಮೆ , ಹಣಕಾಸು ವಲಯ ಮತ್ತು ಔಷಧಿ ವಲಯದಲ್ಲಿ ಹೂಡಿಕೆಯ ನಿಯಮಗಳ ಬಗ್ಗೆ, ಎಫ್‌ಡಿಐ ಮೇಲೆ ಇರುವ ನಿಯಂತ್ರಣಗಳ ಬಗ್ಗೆ ತಕರಾರು ಎಬ್ಬಿಸಿರುವುದು ನಿಜ ಎಂದು ಹೇಳಿದ್ದಾರೆ. ಆದರೆ ಆಹಾರ ಭದ್ರತಾ ಮಸೂದೆಯ ಬಗ್ಗೆ 'ಇದುವರೆಗೆ' ಅಮೆರಿಕಾ ಏನೂ ಆಕ್ಷೇಪ ಎತ್ತಿಲ್ಲ ಎಂದೂ ಸಾರ್ವಭೌಮ ದೇಶವೊಂದರ ಸರಕಾರದ ಈ ಮಂತ್ರಿ ನಿಟ್ಟುಸಿರು ಬಿಡಬೇಕಾದ ಪರಿಸ್ಥಿತಿಯನ್ನು ಯುಪಿಎ-2 ಸರಕಾದ ತಂದಿಟ್ಟಿದೆ.

ಇದಕ್ಕೆ ಮೊದಲು ದೂರಸಂಪರ್ಕ ವಲಯದಲ್ಲಿ ಎಫ್‌ಡಿಐ ಮಿತಿಯನ್ನು 74ಶೇ.ದಿಂದ 100ಶೇ.ಕ್ಕೆ, ವಿಮಾ ವಲಯದಲ್ಲಿ 26ಶೇ.ದಿಂದ 49ಶೇ.ಕ್ಕೆ ಏರಿಸಲು, ರಕ್ಷಣಾವಲಯದಲ್ಲೂ, ದೇಶದ ಭದ್ರತೆಯ ಪ್ರಶ್ನೆಯನ್ನೂ ಉಪೇಕ್ಷಿಸಿ, 26ಶೇ. ಮಿತಿಯನ್ನು ಮೀರುವ ಬಗ್ಗೆ ಭದ್ರತೆಯ ಕುರಿತಾದ ಸಂಪುಟ ಸಮಿತಿ ಪರಿಶೀಲಿಸಬಹುದು ಎಂದೂ ಯುಪಿಎ-2 ಸರಕಾರ ನಿರ್ಧರಿಸಿತ್ತು. ಪೆಟ್ರೋಲಿಯಂ, ನೈಸರ್ಗಿಕ ಅನಿಲ, ಸರಕು ವಿನಿಮಯ ಮುಂತಾದ ವಲಯಗಳಲ್ಲಿ ಎಫ್‌ಡಿಐಗೆ ಅವಕಾಶ ಕಲ್ಪಿಸುವ ವಿಧಾನವನ್ನೇ ಸರಳಗೊಳಿಸಲಾಗಿದೆ.



ವೇದರಾಜ ಎನ್.ಕೆ.

## ಆರ್ಥಿಕ 'ಸುಧಾರಣೆ': ಮತ್ತೊಮ್ಮೆ ಯುಪಿಎ-ಎನ್‌ಡಿಎ ಮ್ಯಾಚ್‌ಫಿಕ್ಸಿಂಗ್!

ಒಂದೆಡೆ ರೂಪಾಯಿ ಬೆಲೆಯಲ್ಲಿ ಸತತ ಕುಸಿತ, ಮತ್ತು ಇನ್ನೊಂದೆಡೆಯಲ್ಲಿ ಸರಕಾರದ ಚಾಲ್ತಿ ಖಾತೆ ಕೊರತೆ(ಕರೆಂಟ್ ಅಕೌಂಟ್ ಡೆಫಿಸಿಟ್-ಸಿಎಡಿ) ವಿಪರೀತವಾಗಿ ಏರುತ್ತಿರುವುದರಿಂದ ಎಫ್‌ಡಿಐ ಮಿತಿ ಏರಿಕೆ ಮತ್ತು ಇತರ 'ಸುಧಾರಣೆ'ಯ ಕ್ರಮಗಳು ತುರ್ತಾಗಿ ಬೇಕಾಗಿದೆ ಎಂಬುದು ಯುಪಿಎ ಸರಕಾರದ ವಾದ.

ಇದಕ್ಕಾಗಿ ಕಾಂಗ್ರೆಸ್ ಮತ್ತು ಯುಪಿಎ ಸರಕಾರದ ಮುಖಂಡರು ಬಿಜೆಪಿ ಮುಖಂಡರನ್ನು ಭೇಟಿಯಾಗಿದ್ದಾರೆ. ಬಿಜೆಪಿಗೆ ಮೂಲಭೂತವಾಗಿ ಈ ಯಾವ ಕ್ರಮದ ಬಗ್ಗೆಯೂ ಗಂಭೀರ ಭಿನ್ನಾಭಿಪ್ರಾಯವೇನೂ ಇಲ್ಲ. ಆದರೆ ಮುಂದಿನ ಸಾರ್ವತ್ರಿಕ ಚುನಾವಣೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡಷ್ಟೇ ಯುಪಿಎ ಮೇಲೆ ಹರಿಹಾಯುತ್ತಿರುವ ಬಿಜೆಪಿ ಮುಖಂಡರಿಂದ ಬಹಿರಂಗವಾಗಿ ಈ ಎಲ್ಲ ಕ್ರಮಗಳ ಬಗ್ಗೆ ಸಮ್ಮತಿ ನಿರೀಕ್ಷಿಸುವಂತಿಲ್ಲ. ಆದ್ದರಿಂದ ಈ ಎಲ್ಲ 'ಸುಧಾರಣೆ'ಗಳ ಮೇಲೆ ಒಂದು 'ಸಮಾನ ನಿಲುವು' ರೂಪಿಸುವುದು ಈ ಮಾತುಕತೆಗಳ ಉದ್ದೇಶವಂತೆ.

ಅಂದರೆ, ಬಹಿರಂಗದಲ್ಲಿ ಇವನ್ನೆಲ್ಲ ವಿರೋಧಿಸುತ್ತಲೇ, ಬಿಜೆಪಿ ನೇತೃತ್ವದ ಎನ್‌ಡಿಎ, ಈ ಕ್ರಮಗಳನ್ನೆಲ್ಲ ಯುಪಿಎ-2 ಸರಕಾರ ತಂದು ಅಮೆರಿಕನ್ ಆಳರಸರನ್ನು, ಬಹುರಾಷ್ಟ್ರೀಯ ದೈತ್ಯ ಕಂಪನಿಗಳನ್ನು ಸಂತುಷ್ಟಗೊಳಿಸಲು ಸಾಧ್ಯವಾಗುವಂತೆ ಪರೋಕ್ಷವಾಗಿ ಅನುವು ಮಾಡಿಕೊಡುವುದು-ಈ ಮೂಲಕ ಮತ್ತೊಮ್ಮೆ 'ಮ್ಯಾಚ್ ಫಿಕ್ಸಿಂಗ್' ನಡೆಯುತ್ತಿರುವಂತೆ ಕಾಣುತ್ತಿದೆ ಎಂದು ಸೀತಾರಾಂ ಯೆಚುರಿ ಹೇಳಿದ್ದಾರೆ. ಈ ಹಿಂದೆಯೂ ಈ ಎರಡು ಪಕ್ಷಗಳು ಪರಸ್ಪರ ದೂಷಣೆಗಳ ನಡುವೆಯೇ ಇಂತಹ ತಂತ್ರವನ್ನು ಬಳಸಿ ತಮ್ಮ ಗುರಿ ಸಾಧಿಸಿಕೊಂಡಿವೆ.

ಯುಪಿಎ ಸರಕಾರ ತನ್ನ ಮಹಾಸಾಧನೆ ಎಂದು ಬೆನ್ನು ತಟ್ಟಿಕೊಳ್ಳುತ್ತಿದ್ದ ಜಿಡಿಪಿ ಬೆಳವಣಿಗೆ ದರ ಕಳೆದ ವರ್ಷ 6.2ಶೇ.ಕ್ಕೆ ಇಳಿದಿತ್ತು. ಈ ವರ್ಷ 5ಶೇ.ಕ್ಕೆ ಇಳಿದಿದೆ. ಜತೆಗೆ ಸಿಎಡಿ, ಅಂದರೆ ಚಾಲ್ತಿ ಖಾತೆ ಕೊರತೆ 4.8ಶೇ.ಕ್ಕೇರಿದೆ. ಅಂದರೆ ಜಿಡಿಪಿಯಲ್ಲಿ ಆಗಿರುವ ಬೆಳವಣಿಗೆಯೆಲ್ಲ ಈ ಕೊರತೆ ತುಂಬುವಲ್ಲೇ ಹೋಗಿಬಿಟ್ಟಿದೆ.

ಸಿಎಡಿ ಅಂದರೆ ಆಮದು ಮತ್ತು ರಫ್ತು ಮೌಲ್ಯಗಳ ನಡುವಿನ ಅಂತರ. ಕೊರತೆ ಉಂಟಾಗಿದೆಯೆಂದರೆ, ಆಮದುಗಳ ಒಟ್ಟು ಮೌಲ್ಯ ರಫ್ತುಗಳ ಒಟ್ಟು ಮೌಲ್ಯಗಳಿಗಿಂತ ಹೆಚ್ಚಾಗಿವೆ, ನಮ್ಮ ಜಿಡಿಪಿ ಹೆಚ್ಚಳವನ್ನೇ ಸಂಪೂರ್ಣವಾಗಿ ನುಂಗಿ ಹಾಕುವಷ್ಟು ಹೆಚ್ಚಾಗಿದೆ. ಈ ಕೊರತೆಯನ್ನು ವಿದೇಶಿ ವಿನಿಮಯದಲ್ಲಿ, ಡಾಲರುಗಳಲ್ಲಿ ನಿರೂಪಿಸಲಾಗುತ್ತದೆ. ಆದ್ದರಿಂದ ಇದನ್ನು ಭರ್ತಿ ಮಾಡಲು ಕೂಡ ಡಾಲರುಗಳೇ ಬೇಕು. ಈ ಡಾಲರುಗಳನ್ನು ನಮ್ಮ ರಫ್ತು ಹೆಚ್ಚಿಸುವ ಮೂಲಕ, ಮತ್ತು ಆಮದು ತಗ್ಗಿಸುವ ಮೂಲಕ ಮಾಡಬಹುದು. ಜಾಗತಿಕ ಆರ್ಥಿಕ ವ್ಯವಸ್ಥೆ ಸತತವಾಗಿ ಆರನೇ ವರ್ಷವೂ ಹಿಂಜರಿತ ಅನುಭವಿಸುತ್ತಿರುವಾಗ ರಫ್ತು ಹೆಚ್ಚಳದ ಸಾಧ್ಯತೆಯಂತೂ ಇಲ್ಲವೇ ಇಲ್ಲ. ವಾಸ್ತವವಾಗಿ ಅದು ತೀಕ್ಷ್ಣ ಕುಸಿತವನ್ನು ಕಂಡಿದೆ. ಇನ್ನೊಂದೆಡೆಯಲ್ಲಿ ಆಮದು ಮೌಲ್ಯ ವಿಪರೀತವಾಗಿ ಹೆಚ್ಚಿದೆ. ಚಿನ್ನದ ಆಮದು ಮುಂತಾದವು ಅತ್ಯಗತ್ಯವೇನಲ್ಲ. ಇವು ಜೂಜುಕೋರತನಕ್ಕೆ ಅವಕಾಶ ಒದಗಿಸುವ ಆಮದುಗಳು. ಇಂಥವನ್ನು ನಿರುತ್ತೇಜನಗೊಳಿಸಲು ಸರಕಾರ ಸಿದ್ಧವಿಲ್ಲ. ಇಂತಹ ಪರಿಸ್ಥಿತಿಯಲ್ಲಿ ವಿದೇಶಗಳಿಂದ ಹೂಡಿಕೆಗಳು ಹರಿದು ಬಂದರೆ ಮಾತ್ರವೇ ಈ ಕೊರತೆಯನ್ನು ತುಂಬಲು ಸಾಧ್ಯ. ಅದಕ್ಕಾಗಿಯೇ ಎಫ್‌ಡಿಐನ್ನು ಆಕರ್ಷಿಸಲು, ಅದಕ್ಕಾಗಿ ವಿದೇಶಿ ದೈತ್ಯ ಕಂಪನಿಗಳನ್ನು ಓಲೈಸುವ ಈ ಎಫ್‌ಡಿಐ ಮಿತಿಗಳ ಏರಿಕೆಯ ಕಸರತ್ತುಗಳು.

ವಾಸ್ತವವಾಗಿ ಇಂತಹ ಏರಿಕೆಗಳಿಂದಲೂ ದೇಶದ ಆರ್ಥಿಕ ಸುಧಾರಣೆ ಸಾಧ್ಯವಿಲ್ಲ. ಏಕೆಂದರೆ ಈ ಎಫ್‌ಡಿಐಗಳಲ್ಲಿ ಹೆಚ್ಚಿನವು ಉತ್ಪಾದನೆಯಲ್ಲಿ ತೊಡಗುವ ಬಂಡವಾಳವಲ್ಲ. ಹಣಕಾಸು ಬಂಡವಾಳಿಗರ ಲಾಭಗಳನ್ನು ಗರಿಷ್ಟಗೊಳಿಸಲಿಕ್ಕಾಗಿಯೇ ಬರುವ ಹೂಡಿಕೆಗಳು. ಇವು ಉದ್ಯೋಗಾವಕಾಶಗಳನ್ನೇನೂ ಹೆಚ್ಚಿಸುವುದಿಲ್ಲ. ಅದರಿಂದಾಗಿ ಜನಸಾಮಾನ್ಯರ ಖರೀದಿ ಶಕ್ತಿಯನ್ನೂ ಹೆಚ್ಚಿಸುವುದಿಲ್ಲ. ಸಿಪಿಐ(ಎಂ) ಮತ್ತು ಇತರ ಎಡಪಂಥೀಯರು ಹೇಳುತ್ತ ಬಂದಿರುವಂತೆ, ಉದ್ಯೋಗಾವಕಾಶಗಳನ್ನು ಹೆಚ್ಚಿಸಿ ಜನಸಾಮಾನ್ಯರ ಕೊಳ್ಳುವ ಶಕ್ತಿಯನ್ನು ಹೆಚ್ಚಿಸದೇ ಇರುವ ಯಾವ ಕ್ರಮವೂ ನಮ್ಮ ಆರ್ಥಿಕವನ್ನು ಸುಧಾರಿಸಲಾರದು.


**ಭಾರತದ ಆರ್ಥಿಕ ಬೆಳವಣಿಗೆ ಕುಂಠಿತಗೊಳ್ಳಲು ಬಂಡವಾಳದ ಅಥವ ಸಂಪನ್ಮೂಲಗಳ ಕೊರತೆ ಕಾರಣವಲ್ಲ, ಬದಲಿಗೆ ಜನಸಾಮಾನ್ಯರ ಖರೀದಿ ಸಾಮರ್ಥ್ಯ ಕುಂಠಿತಗೊಳ್ಳುತ್ತಿರುವುದೇ ಕಾರಣ.** ಅದರೆ ನವ-ಉದಾರವಾದಿ ಕಣ್ಣುಪಟ್ಟಿ ಕಟ್ಟಿಕೊಂಡಿರುವ ಸರಕಾರದ ಈ ಧೋರಣೆಗಳೇ ದೇಶದ ಆರ್ಥಿಕವನ್ನು ಇಂತಹ ಸ್ಥಿತಿಗೆ ತಂದಿಟ್ಟರೂ, ಈಗ ಅದನ್ನೇ ನೆವ ಮಾಡಿಕೊಂಡು ಅದೇ ವಿನಾಶಕಾರಿ ದಾರಿಯಲ್ಲಿ ಇನ್ನಷ್ಟು ರಭಸದಿಂದ ಸಾಗಲು ಮುಂದಾಗಿದೆ. ಅದಕ್ಕಾಗಿ ಒಬ್ಬ ಎನ್‌ಆರ್‌ಐ ಆರ್ಥಿಕ ತಜ್ಞನನ್ನು ದೇಶದ ರಿಸರ್ವ್ ಬ್ಯಾಂಕಿನ ಗವರ್ನರ್ ಆಗಿ ನೇಮಿಸಿದೆ.

ಈ ಪ್ರಕ್ರಿಯೆಯಲ್ಲಿ ಬಿಜೆಪಿ ತನ್ನ ನಿಕಟ ಮಿತ್ರ ಎಂದು ಯುಪಿಎ-2 ಸರಕಾರ ಕಂಡು-ಕೊಂಡಂತಿದೆ. ಬಿಜೆಪಿ ಕೂಡ ಅವರ ಮತ್ತು ದೇಶೀ-ವಿದೇಶಿ ಬಂಡವಾಳಿಗರ ನಿರೀಕ್ಷೆಗಳನ್ನು ಈಡೇರಿಸಿದರೆ ಆಶ್ಚರ್ಯವೇನಿಲ್ಲ. ಆದರೆ ಇದಕ್ಕೆಲ್ಲ ಭಾರೀ ಬೆಲೆ ತೆರಬೇಕಾದವರು ದೇಶದ ಜನಸಾಮಾನ್ಯರು. ಅತ್ಯಗತ್ಯವಲ್ಲದ, ಜೂಜುಕೋರತನಕ್ಕೆ ಅವಕಾಶ ಒದಗಿಸುವ ಆಮದುಗಳನ್ನು ನಿರುತ್ತೇಜನಗೊಳಿಸುವ ಬದಲು, ಅವಕ್ಕೆ ಉತ್ತೇಜನ ನೀಡಲಾಗುತ್ತಿದೆ. ಆದರೆ ಪೆಟ್ರೋಲಿಯಂ ಉತ್ಪನ್ನಗಳಂತಹ ಅಗತ್ಯ ಆಮದುಗಳ ಹೊರೆಯನ್ನು ಜನಸಾಮಾನ್ಯರ ಮೇಲೆ ಹೇರಿ ಅವರ ಬದುಕನ್ನು ಇನ್ನಷ್ಟು ದುರ್ಭರಗೊಳಿಸಲಾಗುತ್ತಿದೆ.

(15 ನೇ ಪುಟವನ್ನೂ ನೋಡಿ)

ಮರಳಿ 1991ಕ್ಕೆ!
-ಬಿಕ್ಕಟ್ಟಿನಿಂದ
ಮತ್ತೆ ಬಿಕ್ಕಟ್ಟಿಗೆ

'ದಿ ಹಿಂದೂ'ನಲ್ಲಿ
ಕೇಶವ್ ಅವರ
ವ್ಯಂಗ್ಯ



ಜಗದಗಲ

ಶರತ್‌ಚಂದ್ರ

# "ನೀವು ಹೂವುಗಳನ್ನು ಕಿತ್ತುಹಾಕಬಹುದು ಆದರೆ ಮತ್ತೆ ಹೂವು ಚಿಗುರುವ ವಸಂತವನ್ನಲ್ಲ"


## ಕ್ರಾಂತಿಯ ಕುರಿತು ಕ್ರಾಂತಿಕಾರಿಗಳ ಮಹತ್ವದ ಹೇಳಿಕೆಗಳು

**ಮಾರ್ಕ್ಸ್1**

ಚರಿತ್ರೆಯ ಬಗ್ಗೆ ಏನಾದರೂ ತಿಳಿದಿರುವವರಿಗೆ ಮಹಾನ್ ಸಾಮಾಜಿಕ ಕ್ರಾಂತಿಗಳು ಮಹಿಳೆಯರ ಕ್ಷೋಭೆ ಇಲ್ಲದೆ ಅಸಾಧ್ಯ ಎಂಬುದೂ ಗೊತ್ತು. ಮಹಿಳೆಯರ ಸಾಮಾಜಿಕ ಸ್ಥಾನಮಾನದಿಂದ ಸಾಮಾಜಿಕ ಪ್ರಗತಿಯನ್ನು ನಿಖರವಾಗಿ ಅಳೆಯಬಹುದು.

**ಮಾರ್ಕ್ಸ್2**

ಆಧುನಿಕ ಸಮಾಜದಲ್ಲಿ ವರ್ಗಗಳ ಅಸ್ತಿತ್ವ ಅಥವಾ ವರ್ಗ ಹೋರಾಟಗಳ ಸಂಶೋಧನೆ ಮಾಡಿದ ಹೆಗ್ಗಳಿಕೆ ನನಗೆ ಸೇರಿದ್ದಲ್ಲ. ನನಗಿಂತ ಬಹಳ ಮೊದಲು ವರ್ಗ ಹೋರಾಟದ ಚರಿತ್ರೆಯನ್ನು ಬೂರ್ಜ್ವಾ ಚರಿತ್ರಕಾರರು ನಿರೂಪಿಸಿದ್ದರು. ಬೂರ್ಜ್ವಾ ಅರ್ಥಶಾಸ್ತ್ರಜ್ಞರು ವರ್ಗಗಳ ಆರ್ಥಿಕ ಶರೀರಶಾಸ್ತ್ರವನ್ನು ನಿರೂಪಿಸಿದ್ದರು. ನಾನು ಹೊಸದಾಗಿ ಈ




ಮೂರು ಅಂಶಗಳನ್ನು ಅದಕ್ಕೆ ಸೇರಿಸಿ ಅವನ್ನು ರುಜುವಾತು ಮಾಡಿ ತೋರಿಸಿದೆ:

1. ವರ್ಗಗಳ ಅಸ್ತಿತ್ವವು ಉತ್ಪಾದನೆಯ ಬೆಳವಣಿಗೆಯ ನಿರ್ದಿಷ್ಟ ಹಂತದೊಂದಿಗೆ ತಳಕುಹಾಕಿಕೊಂಡಿದೆ.
2. ವರ್ಗ ಹೋರಾಟ ನಿಶ್ಚಿತವಾಗಿಯೂ ಶ್ರಮಿಕರ ಸರ್ವಾಧಿಕಾರಕ್ಕೆ ಹಾದಿ ಮಾಡಿಕೊಡುತ್ತದೆ.
3. ಈ ಶ್ರಮಿಕರ ಸರ್ವಾಧಿಕಾರ ವರ್ಗಗಳ ನಾಶ ಮತ್ತು ವರ್ಗರಹಿತ ಸಮಾಜಕ್ಕೆ ಸ್ಥಿತ್ಯಂತರದ ಭಾಗವಾಗಿದೆ

**ಮಾರ್ಕ್ಸ್3**

ಮಾನವ ತನ್ನ ಚರಿತ್ರೆಯನ್ನು ತಾನೇ ಸೃಷ್ಟಿಸುತ್ತಾನೆ, ಆದರೆ ಅವನಿಗೆ ಇಷ್ಟ ಬಂದಂತೆ ಅಲ್ಲ. ತಾನು ಆಯ್ದುಕೊಂಡ ಸನ್ನಿವೇಶದಲ್ಲೂ ಅಲ್ಲ. ಬದಲಾಗಿ ಆತ ಚರಿತ್ರೆಯನ್ನು ಸೃಷ್ಟಿಸುವುದು ಈಗಾಗಲೇ ಇರುವ, ಭೂತಕಾಲದಿಂದ ಆತನಿಗೆ ಕೊಡಲಾದ ಸನ್ನಿವೇಶದಲ್ಲಿ.

ಎಲ್ಲಾ ಸತ್ತ ಪೀಳಿಗೆಗಳ ಸಂಪ್ರದಾಯದ ಭಾರ ಜೀವಂತ ಇರುವವರ ಮೆದುಳಿನ ಮೇಲೆ ಕೆಟ್ಟ ಕನಸಿನಂತೆ ಕೂತಿರುತ್ತದೆ.




**ಮಂಡೇಲಾ**

ಎ.ಎನ್.ಸಿ. (ಆಫ್ರಿಕನ್ ನ್ಯಾಶನಲ ಕಾಂಗ್ರೆಸ್) ಒಂದು ಕಮ್ಯುನಿಸ್ಟ್ ಪಕ್ಷವಲ್ಲ ಆದರೆ ಪ್ರಜಾಪ್ರಭುತ್ವದ ರಕ್ಷಕನಾಗಿ, ಅದು ಕಮ್ಯುನಿಸ್ಟ್ ಪಕ್ಷದ ಅಸ್ತಿತ್ವದ ಹಕ್ಕಿಗಾಗಿ ಹೋರಾಡುತ್ತಾ ಬಂದಿದೆ. ಮುಂದೆಯೂ ಹೋರಾಡುತ್ತದೆ.


ಒಂದು ಪ್ರಜಾಸತ್ತಾತ್ಮಕ ಚಳುವಳಿಯಾಗಿ ನಮಗೆ ಚರಿತ್ರೆಯ ಪಾಠ ಬಹಳ ಸ್ಪಷ್ಟವಿದೆ.

ಅದು 1930ರ ತುಮುಲಗಳಿಂದ ತುಂಬಿದ ದಶಕದಲ್ಲಿ ಫ್ಯಾಸಿಸಂ ಪ್ರಜಾಪ್ರಭುತ್ವದ ಮೇಲಿನ ಹಲ್ಲೆಯನ್ನು ಕಮ್ಯುನಿಸ್ಟರ ಬೇಟೆಯಿಂದ ಆರಂಭಿಸಿದಾಗ, ಯುರೋಪಿನ ಜನತೆ ಕಲಿತ ಪಾಠ.

ನಾಜಿಗಳ ಕಮ್ಯುನಿಸ್ಟರ ಬೇಟೆಯಿಂದ ಜರ್ಮನ್ ಚರ್ಚ್ ಕಲಿತ ಪಾಠ.


1950ರ ದಶಕದಲ್ಲಿ ಮೆಕಾರ್ಥಿಯಿಸಂನ ಹೆಸರಲ್ಲಿ ಕಮ್ಯುನಿಸ್ಟರ ಬೇಟೆಯ ನಂತರ ಅಮೆರಿಕದ ಜನತೆ ಕಲಿತ ಪಾಠ.

ಈ ಪ್ರಮಾದವನ್ನು ಎ.ಎನ್.ಸಿ. ಎಂದೂ ಮಾಡಲಿಲ್ಲ. 1950ರಲ್ಲಿ ಕಮ್ಯುನಿಸ್ಟ್ ಪಕ್ಷವನ್ನು ನಿಷೇಧಿಸಿದಾಗ ಇದು ಪ್ರಜಾಸತ್ತೆಯ ದಮನದ ಮುನ್ಸೂಚನೆ ಎಂದು ನಮಗೆ ಅರ್ಥವಾಗಿತ್ತು.




**ಎಂಗೆಲ್ಸ್1**

ಪ್ರಭುತ್ವ ಒಂದು ವರ್ಗದಿಂದ ಇನ್ನೊಂದು ವರ್ಗದ ದಮನದ ಉಪಕರಣ. ಅದು ರಾಜಪ್ರಭುತ್ವದಲ್ಲೂ ನಿಜ. ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲೂ ಅಷ್ಟೇ ನಿಜ.




**ಅಂಬೇಡ್ಕರ್**

ಜನಸಮೂಹಗಳು ಅವರನ್ನು ತುಳಿದ ಸಾಮಾಜಿಕ ಕೆಡುಕುಗಳನ್ನು ಯಾಕೆ ಸಹಿಸಿದರು ? ಜಗತ್ತಿನ ಬೇರೆ ದೇಶಗಳಲ್ಲಿ ಸಾಮಾಜಿಕ ಕ್ರಾಂತಿಗಳಾಗಿವೆ. ಭಾರತದಲ್ಲಿ ಸಾಮಾಜಿಕ ಕ್ರಾಂತಿಗಳು ಯಾಕಾಗಿಲ್ಲ ಎಂಬ ಪ್ರಶ್ನೆ ನನ್ನನ್ನು ಬಹಳವಾಗಿ ಸತತವಾಗಿ ಕಾಡಿದೆ. ಇದಕ್ಕೆ ನಾನು ಕೊಡಬಹುದಾದ ಉತ್ತರ ಒಂದೇ. ಈ ದರಿದ್ರ ಜಾತಿ ವ್ಯವಸ್ಥೆ ಹಿಂದೂ ಕೆಳವರ್ಗಗಳ ಜನರನ್ನು ನೇರ ಕಾರ್ಯಾಚರಣೆಗೆ ಇಳಿಯದಂತೆ ಪೂರ್ಣವಾಗಿ ವಿಕಲಾಂಗಗೊಳಿಸಿದೆ.

**ಚೆ1**

ಕ್ರಾಂತಿಯೆಂದರೆ ಹಣ್ಣಾದಾಗ ತನ್ನಷ್ಟಕ್ಕೆ ಉದುರುವ ಮಾವಿನಹಣ್ಣು ಅಲ್ಲ. ಅದನ್ನು ಕಿತ್ತುಕೊಳ್ಳಬೇಕು.

**ಚೆ2**


ನೀವು ಹೂವುಗಳನ್ನು ಕಿತ್ತುಹಾಕಬಹುದು. ಆದರೆ ಮತ್ತೆ ಹೂವು ಚಿಗುರುವ ವಸಂತವನ್ನಲ್ಲ. ವ್ಯಕ್ತಿಗಳನ್ನು ಕೊಲ್ಲಬಹುದು. ಆದರೆ ಅವರು ಬಿತ್ತಿದ ಯೋಚನೆಗಳನ್ನು ಕೊಲ್ಲಲಾಗದು.


**ಲೆನಿನ್1**

ಜನಸಮೂಹ ಇರುವಲ್ಲಿ ರಾಜಕೀಯ ಆರಂಭವಾಗುತ್ತದೆ, ಆದರೆ ಬರಿಯ ಸಾವಿರಾರು ಜನ ಇರುವಲ್ಲಿ ಅಲ್ಲ. ಲಕ್ಷಾಂತರ ಕೋಟ್ಯಾಂತರ ಜನ ಇರುವಲ್ಲಿ ಗಂಭೀರವಾದ ರಾಜಕೀಯ ಆರಂಭವಾಗುತ್ತದೆ.

**ಲೆನಿನ್2**

ಜನ ರಾಜಕೀಯದಲ್ಲಿ ಯಾವಾಗಲೂ ಮೋಸ ಹೋಗುತ್ತಾ ಬಂದಿದ್ದಾರೆ. ತಮಗೆ ತಾವೇ ಮೋಸ ಮಾಡಿಕೊಳ್ಳುತ್ತಾ ಬಂದಿದ್ದಾರೆ. ಅವರು ಎಲ್ಲಾ ನೈತಿಕ, ಧಾರ್ಮಿಕ ಹಾಗೂ ಸಾಮಾಜಿಕವಾದ ನುಡಿಕಟ್ಟುಗಳ, ಘೋಷಣೆಗಳ ಹಾಗೂ ಭರವಸೆಗಳ ಹಿಂದೆ ಇರುವ ಯಾ... ಒಂದು ವರ್ಗದ ಹಿತಾಸಕ್ತಿಗಳನ್ನು ಹುಡುಕಲು ಕಲಿಯುವವರೆಗೆ ಇನ್ನು ಮುಂದೆಯೂ ಈ ಮೋಸ ಮುಂದುವರೆಯುತ್ತದೆ.



ಟೆಗೆ ಸರಕಾರ ಪ್ರಕಟಿಸಿದ ನೈಸರ್ಗಿಕ
ದ ದರಗಳ ಏರಿಕೆಯ ನೀತಿ ದೇಶದ
ಅತಿ ದೊಡ್ಡ ಬಂಡವಾಳಿಗ ಮುಕೇಶ್
ನಿ ಒಡೆತನದ ಆರ್‌ಐಎಲ್(ರೆಲಯಂಸ್
ಸ್ ಲಿಮಿಟೆಡ್)ನಿಂದ ಆರ್‌ಐಎಲ್‌ಗಾಗಿ
ದ ನೀತಿ ಎಂಬ ಟೀಕೆ ವ್ಯಾಪಕವಾಗಿ
ದ್ದನ್ನು ಈ ಅಂಕಣದಲ್ಲಿ ಓದಿದ್ದೀರಿ.
ನ್ನೆಲೆಯಲ್ಲಿ ಯುಪಿಎ ಪೆಟ್ರೋಲಿಯಂ
ಗಳ ಗೊಂದಲಕಾರಿ ಹೇಳಿಕೆಗಳ ಸುದ್ದಿ
ಹಿನ್ನೆಲೆಗೆ ಸರಿಯುವ ಮೊದಲೇ
ಇನ್ನೊಂದು ಸುದ್ದಿ ಮಾಡಿದ್ದಾರೆ.
ಐಎಲ್‌ಗೆ ವಹಿಸಿರುವ ಕೆಜಿ ಡಿ6
ಕ ಅನಿಲ ನಿಕ್ಷೇಪದ ಅನಿಲದ ದರ
ರಣೆಯ ವಿವಾದವನ್ನು ನಿರ್ವಹಿಸುತ್ತಿದ್ದ
ಟ್ರೋಲಿಯಂ ಇಲಾಖೆಯ ಹಿರಿಯ
ಸ್ ಅಧಿಕಾರಿಯನ್ನು ವರ್ಗಾವಣೆ
ಲಾಗಿದೆ. ಅದನ್ನು ಸ್ವತಃ ಪೆಟ್ರೋಲಿಯಂ
ಗಳೇ ಮಾಡಿದ್ದಾರೆ ಎನ್ನಲಾಗಿದೆ.
ರ್‌ಐಎಲ್ ಸರಕಾರದೊಂದಿಗೆ
ಡಿಕೊಂಡ ಅನ್ವೇಷಣಾ ಕರಾರಿನಲ್ಲಿ
ದಿಸಿದ ಪ್ರಮಾಣದ ಉತ್ಪಾದನೆಯನ್ನು

# ಮತ್ತೆ ಅಂಬಾನಿಗಾಗಿ/ಅಂಬಾನಿಯ ದರ್ಬಾರ್: ಪೆಟ್ರೋಲಿಯಂ ಅಧಿಕಾರಿಯ ವರ್ಗಾವಣೆ

ಮಾಡದೆ, ದರ ಏರಿಕೆಯನ್ನು ಕೇಳಲಿಕ್ಕಾಗಿಯೇ ಉತ್ಪಾದನೆಯನ್ನು ಕಡಿತ ಮಾಡುವುದು, ಲಾಭದ ಹಂಚಿಕೆಯಲ್ಲಿ ಹೆಚ್ಚಿನ ಲಾಭ ಪಡೆಯಲು ಬಂಡವಾಳ ಖರ್ಚುಗಳನ್ನು ಹೆಚ್ಚಾಗಿ ತೋರಿಸುವುದು ('ಚಿನ್ನದ ಲೇಪನ')ಇತ್ಯಾದಿ ಅವ್ಯವಹಾರಗಳನ್ನು ನಡೆಸುತ್ತಿದೆ ಎಂಬುದು ಅದರ ಮೇಲಿರುವ ಆಪಾದನೆ. ಈ ಕರಾರಿನ




ರೆಲಿಯಂಸ್: ಸಿಎಜಿ ಲೆಕ್ಕ ಪರಿಶೋಧನೆ ಗಮನಿಸಿರದ ಈ ಸಂಗತಿ!

ಲೆಕ್ಕ ಪರಿಶೋಧನೆ ನಡೆಸಲು ದೇಶದ ಮಹಾ ಲೆಕ್ಕ ಪರಿಶೋಧಕ(ಸಿಎಜಿ) ಕಚೇರಿಯೊಂದಿಗೆ ಅಸಹಕಾರದ ಆಪಾದನೆಯೂ ಈ ಕಂಪನಿಯ ಮೇಲಿದೆ. ಇಂತಹ ಅಸಹಕಾರವನ್ನು ಸಹಿಸದ ಕಾರಣಕ್ಕಾಗಿಯೇ ಹಿಂದಿನ ಪೆಟ್ರೋಲಿಯಂ ಮಂತ್ರಿಗಳ ಎತ್ತಂಗಡಿಯನ್ನೂ ಅದು ಮಾಡಿಸಿತ್ತು ಹಾಗೂ ಈಗಿನ ಮಂತ್ರಿಗಳನ್ನು ನೇಮಿಸಲಾಗಿತ್ತು ಎಂದೂ ಹೇಳಲಾಗುತ್ತಿದೆ. ನಂತರದ ಬೆಳವಣಿಗೆಗಳು ಇವನ್ನೆಲ್ಲ ಸಮರ್ಥಿಸುವಂತೆಯೇ ಇವೆ.

ನಡು-ನಡುವೆ ಪೆಟ್ರೋಲಿಯಂ ಮಂತ್ರಿಗಳು ಇದು ನಿಜವಲ್ಲ ಎಂದು ತೋರಿಸಲಿಕ್ಕಾಗಿಯೇ ಎಂಬಂತೆ ಕೆಲವು ಹೇಳಿಕೆಗಳನ್ನು ಕೊಡುತ್ತಿರುತ್ತಾರೆ. ಅಂತಹ ಸಂದರ್ಭಗಳಲ್ಲಿ ಗೊಂದಲಗಳು ಸಹಜ ತಾನೇ? ಕೆಜಿ ಡಿ6 ಅನಿಲ ನಿಕ್ಷೇಪಗಳ ಲೆಕ್ಕ ಪರಿಶೋಧನೆಗೆ ಹಣಕಾಸು ಹೇಳಿಕೆಗಳನ್ನು , ದಾಖಲೆಗಳನ್ನು ಸಿಎಜಿ ಕೇಳಿತ್ತು. ಆದರೆ ಅದನ್ನು ಆರ್‌ಐಎಲ್ ನಿರಾಕರಿಸುತ್ತ ಬಂದಿತ್ತು. ಬೇಸತ್ತ ಸಿಎಜಿ ಈ ಬಗ್ಗೆ ಪೆಟ್ರೋಲಿಯಂ ಇಲಾಖೆಗೆ ದೂರು ಸಲ್ಲಿಸಿದ್ದರು. ಹೀಗೆ ದೂರು ಸಲ್ಲಿಸಿದ ಒಂದು ತಿಂಗಳ ನಂತರ ಕೊನೆಗೂ ಜುಲೈ 22ರಂದು ಪೆಟ್ರೋಲಿಯಂ ಇಲಾಖೆ ಆರ್‌ಐಎಲ್‌ಗೆ ಅವನ್ನು ಸಾಧ್ಯವಾದಷ್ಟು ಬೇಗನೇ ಒದಗಿಸಿ ಲೆಕ್ಕ ಪರಿಶೋಧನೆ ಸುಗಮವಾಗಿ ನಡೆಯುವಂತೆ ಮಾಡಬೇಕು ಎಂದು ನಿರ್ದೇಶಿಸುವ 'ಧೈರ್ಯ' ಮಾಡಿತ್ತು.

ಆದರೆ ಇದಾದ ಒಂದೇ ವಾರದಲ್ಲಿ, ಪೆಟ್ರೋಲಿಯಂ ಇಲಾಖೆಯ ಜಂಟಿ ಕಾರ್ಯದರ್ಶಿ(ಅನ್ವೇಷಣೆ), ಗಿರಿಧರ ಅರಮನೆ ಅವರು ಒಂದೂವರೆ ವರ್ಷದಿಂದ ನಿರ್ವಹಿಸುತ್ತಿದ್ದ ಕೆಲಸಗಳನ್ನು ಹೊಸದಾಗಿ ಜಂಟಿ ಕಾರ್ಯದರ್ಶಿಯಾಗಿರುವ ಪಿ.ಕೆ.ಸಿಂಗ್ ಅವರಿಗೆ ವರ್ಗಾಯಿಸುವ ಟಿಪ್ಪಣಿಗೆ ಸ್ವತಃ ಪೆಟ್ರೋಲಿಯಂ ಮಂತ್ರಿಗಳೇ ಸಹಿ ಹಾಕಿದ್ದಾರೆ ಎಂದು ವರದಿಯಾಗಿದೆ. ಗಿರಿಧರ್ ಅವರು ಕೆಜಿ ಡಿ6 ನಿಕ್ಷೇಪದಲ್ಲಿ ಉತ್ಪಾದನೆಯಲ್ಲಿ ಕೊರತೆ, ಮತ್ತು ಕ್ಷೇತ್ರ ಅಭಿವೃದ್ಧಿ ಕಾರ್ಯಕ್ರಮದ ಜಾರಿಯಲ್ಲಿ ವಿಫಲತೆ ಕುರಿತಂತೆ ಆರ್‌ಐಎಲ್ ಮೇಲೆ ಕ್ರಮಗಳನ್ನು ಕೈಗೊಳ್ಳುವಲ್ಲಿ ತೊಡಗಿದ್ದರು.

ಇದು ದುರುದ್ದೇಶಪೂರಿತ ಆದೇಶ ಎಂದು ಸಿಪಿಐ ಸಂಸದ್ ಸದಸ್ಯ ಗುರುದಾಸ್ ದಾಸ್‌ಗುಪ್ತ ಪ್ರಧಾನ ಮಂತ್ರಿಗಳಿಗೆ ಬರೆದ ಪತ್ರದಲ್ಲಿ ಟೀಕಿಸಿದ್ದಾರೆ. ಈ ಆದೇಶವನ್ನು ಹಿಂತೆಗೆದುಕೊಳ್ಳಬೇಕು ಮತ್ತು ನೈಸರ್ಗಿಕ ಅನಿಲದ ಬೆಲೆಗಳನ್ನು ಏರಿಸುವ ನಿರ್ಧಾರವನ್ನು ತಡೆಹಿಡಿಯಬೇಕು ಎಂದು ಅವರು ತಮ್ಮ ಪತ್ರದಲ್ಲಿ ಆಗ್ರಹಿಸಿದ್ದಾರೆ.

# ...ಮೆರಿಕನ್ ಸರಕಾರದ ಇಲೆಕ್ಟ್ರಾನಿಕ್ ಪತ್ತೇದಾರಿಕೆಯಲ್ಲಿ ಯುಪಿಎ ಸರಕಾರವೂ ಶಾಮೀಲು!

ಮೆರಿಕಾದ ಆಡಳಿತದ 'ರಾಷ್ಟ್ರೀಯ
ಾ ಸಂಸ್ಥೆ" ಅಮೆರಿಕಾದ ಅಂತರ್ಜಾಲ
ರ್ಕ ಕಂಪನಿಗಳ ಮೂಲಕ ವಿಶ್ವಾದ್ಯಂತ
ಢಚರ್ಯೆ ಕೆಲಸ ನಡೆಸಿದೆ. ಈ
ಯಲ್ಲಿ ಅದು ವ್ಯಕ್ತಿಗಳ ಗೋಪ್ಯತೆಯ
ನ್ನು ಮತ್ತು ದೇಶಗಳ ಸಾರ್ವಭೌಮತೆಯ
ನ್ನು ಉಲ್ಲಂಘಿಸುತ್ತಿದೆ ಎಂದು ಅದೇ
ದ ಎಡ್ವರ್ಡ್ ಸ್ನೋಡೆನ್ ಬಯಲಿಗೆ
ಾಗ ಇಡೀ ಜಗತ್ತಿನಲ್ಲಿ ಈ ಬಗ್ಗೆ
ಟನೆಗಳು ವ್ಯಕ್ತವಾದವು. ಅಮೆರಿಕಾದ
ಳಿತ ಹೀಗೆ ತನ್ನ ಸಾಮ್ರಾಜ್ಯಶಾಹೀ
ಪವನ್ನು ಬಯಲು ಮಾಡಿದ ತನ್ನದೇ
ರಿಕನ ಬೇಟೆಯನ್ನು ಆರಂಭಿಸಿರುವುದು
ರ ದಮನಕಾರೀ, ಪ್ರಜಾಪ್ರಭುತ್ವ-
ೋಧಿ ರೂಪವನ್ನು ಕೂಡ ಮತ್ತೊಮ್ಮೆ
ಪಡಿಸಿದೆ. ಆದರೆ ಈ ಪ್ರಕ್ರಿಯೆಯಲ್ಲಿ
ಪಿಎ-2 ಸರಕಾರದ ಶಾಮೀಲು ಕೂಡ
ರ್ವಿವಾದವಾಗಿ ಬಯಲಾಗಿದೆ.
ಸ್ನೋಡೆನ್ ಮೊದಲು ಈ
ಕ್ಟ್ರಾನಿಕ್ ಪತ್ತೇದಾರಿಕೆಯ ಸುದ್ದಿಯನ್ನು
ರಂಗಗೊಳಿಸಿದಾಗ ಇದು ಭಯೋತ್ಪಾದಕ
ಘಟಕೆಗಳ ಮೇಲೆ ಕಣ್ಣಿಡಲು ಅಗತ್ಯ ಎಂದು
ಪಿಎ ಸರಕಾರ ಸಮರ್ಥಿಸಿಕೊಂಡಿತು.
ಶಾಂಗ ಮಂತ್ರಿಗಳಂತೂ ಇನ್ನೂ ಮುಂದೆ
ಗಿ, ಇದೇನು ಗೂಢಚರ್ಯೆ ಕೃತ್ಯ ಅಲ್ಲ,
ಲ್ ಮಾಹಿತಿಗಳ ವಿಶ್ಲೇಷಣೆಯಷ್ಟೇ,
ದು ಇನ್ನೂ ಬಲವಾಗಿ ಅಮೆರಿಕಾ
ಳಿತವನ್ನು ಸಮರ್ಥಿಸಿಕೊಂಡರು. ಈ
ವೆ ಭಾರತದ ರಾಯಭಾರ ಕಚೇರಿಯ
ಲೂ ಈ 'ಪ್ರಿಸ್ಮ್' ಕಾರ್ಯಾಚರಣೆಯ
ಲಕ ಗೂಢಚರ್ಯೆ ನಡೆಸಲಾಗುತ್ತಿದೆ
ದೂ ಪ್ರಕಟವಾಯಿತು.
ಈಗ, ಅಮೆರಿಕನ್ ಸರಕಾರ ಇನ್ನೂ
ದು ಕಾರ್ಯಕ್ರಮವನ್ನು ರೂಪಿಸಿದ್ದು,
ಹೆಸರು 'ಎಕ್ಸ್‌ಕೀಸ್ಕೋರ್' ಎಂದು
ೋಡನ್ ಒದಗಿಸಿದ ಒಂದು ದಸ್ತಾವೇಜಿನಿಂದ
ುಲಾಗಿದೆ. ಈ ಕಾರ್ಯಕ್ರಮದಲ್ಲಿ

ಜಗತ್ತಿನಾದ್ಯಂತ 150 ಸ್ಥಳಗಳಲ್ಲಿ 700 ಸರ್ವರ್‌ಗಳನ್ನು ನೆಲೆಗೊಳಿಸಲಾಗಿದೆ. ಇವುಗಳ ಮೂಲಕ ಎಲೆಕ್ಟ್ರಾನಿಕ್ ಪತ್ತೇದಾರಿಕೆ ನಡೆಸಲಾಗುತ್ತಿದೆ. ಭಾರತದಲ್ಲೂ ನವದೆಹಲಿಯ ಬಳಿ ಇಂತಹದೊಂದು ಸರ್ವರ್ ಸ್ಥಾಪಿಸಲು ಯುಪಿಎ-2 ಸರಕಾರ ಅನುಮತಿ ಕೊಟ್ಟಿದೆ. ಅಂದರೆ ಯುಪಿಎ ಸರಕಾರವೂ ಅಮೆರಿಕಾದ ರಾಷ್ಟ್ರೀಯ ಭದ್ರತಾ ಸಂಸ್ಥೆಯ ಗೂಢಚರ್ಯೆಯ ಕೆಲಸದಲ್ಲಿ ನೇರವಾಗಿಯೇ ಶಾಮೀಲಾಗಿದೆ ಎಂಬುದೀಗ ಸಾಬೀತಾದಂತಾಗಿದೆ.

ಯುಪಿಎ ಸರಕಾರ ಏಕೆ ಈ ವಿಷಯದಲ್ಲಿ ಅಮೆರಿಕಾ ಸರಕಾರದ ಬೆಂಬಲಕ್ಕೆ ನಿಂತಿತು ಎಂಬುದೀಗ ನಿಚ್ಚಳವಾಗುತ್ತದೆ. ಮನಮೋಹನ್‌ಸಿಂಗ್ ಸರಕಾರ ತಕ್ಷಣವೇ ತನ್ನದೇ ನಾಗರಿಕರ ಮೇಲೆ ವಿದೇಶಿ ಸಂಸ್ಥೆಯ ಈ ರೀತಿಯ ಇಲೆಕ್ಟ್ರಾನಿಕ್ ಪತ್ತೇದಾರಿಕೆಯಲ್ಲಿ ಶಾಮೀಲಾಗುವುದನ್ನು ನಿಲ್ಲಿಸಬೇಕು, ಭಾರತದಲ್ಲಿನ ಅದರ ಸರ್ವರ್‌ಗಳು ಮತ್ತು ಇತರ ಇಲೆಕ್ಟ್ರಾನಿಕ್ ಪತ್ತೇದಾರಿಕೆಯ ಸೌಲಭ್ಯಗಳನ್ನು ಮುಚ್ಚಿ ಬಿಡಬೇಕು ಎಂದು ಸಿಪಿಐ(ಎಂ) ಆಗ್ರಹಿಸಿದೆ.

**ಇಸ್ರೇಲಿ ಪತ್ತೇದಾರಿ ಸಂಸ್ಥೆಗೆ ಹೊರಗುತ್ತಿಗೆ!**

ಯುಪಿಎ ಸರಕಾರ ಅಮೆರಿಕನ್ ಆಡಳಿತದೊಂದಿಗೆ ಶಾಮೀಲಾಗಿರುವುದಷ್ಟೇ ಅಲ್ಲ. ತನ್ನ ಸ್ವಂತ ನಾಗರಿಕರ ಮೇಲೆ ಗೂಢಚರ್ಯೆ ನಡೆಸುವ ಕೆಲಸವನ್ನು ಇಸ್ರೇಲಿನ ಒಂದು ಪತ್ತೇದಾರಿಕೆ ಸಂಸ್ಥೆಗೆ ವಹಿಸುವ ಬಗ್ಗೆಯೂ ಯೋಚಿಸುತ್ತಿದೆಯಂತೆ. ಇಸ್ರೇಲಿ ಗೂಢಚರ್ಯೆ ಸಂಸ್ಥೆಯೊಂದಿಗೆ ನಿಕಟ ಸಂಪರ್ಕ ಇರುವ ವೆರಿಂಟ್ ಎಂಬ ಸಂಸ್ಥೆಯ ಆಡಳಿತ ಮುಖಂಡರನ್ನು ಯುಪಿಎ ಸರಕಾರದ ಮಾಹಿತಿ ತಂತ್ರಜ್ಞಾನ ಮಂತ್ರಿಗಳು ಈಗಾಗಲೇ ಭೇಟಿಯಾಗಿದ್ದಾರಂತೆ. ಭಾರತದ 120 ಕೋಟಿ ನಾಗರಿಕರ ಮೇಲೆ ಇಲೆಕ್ಟ್ರಾನಿಕ್ ಪತ್ತೇದಾರಿಕೆ ಮಾಡುವ ಕೆಲಸವನ್ನು ಈ ಇಸ್ರೇಲಿ ಕಂಪನಿಗೆ ಹೊರಗುತ್ತಿಗೆ ನೀಡುವ ಯೋಜನೆಯಂತೂ ಸಿದ್ಧವಾಗಿರುವಂತೆ ಕಾಣುತ್ತದೆ.

# ಹಕ್ಕುಪತ್ರ ನೀಡಲು ಒತ್ತಾಯಿಸಿ ಪ್ರತಿಭಟನೆ

ನಿವೇಶನಗಳಿಗೆ ಹಕ್ಕು ಪತ್ರ ನೀಡುವಂತೆ ಒತ್ತಾಯಿಸಿ ಬಳ್ಳಾರಿ ಜಿಲ್ಲೆ, ಕುರುಗೋಡು ತಾಲೂಕಿನ ಓರ್ವಾಯಿ ಗ್ರಾಮದ ಕೃಷಿ ಕೂಲಿಕಾರರು ಗ್ರಾಮ ಪಂಚಾಯತಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು. ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ತಾಲೂಕು ಸಂಚಾಲಕರಾದ ಎಸ್.ಪಿ. ಮಹಮ್ಮದ್ ಖಾನ್ ಮಾತನಾಡಿ ಸುಮಾರು



40 ವರ್ಷಗಳಿಂದ ಸರ್ಕಾರಿ ಜಮೀನಿನಲ್ಲಿ ಗುಡಿಸಲು ಹಾಕಿಕೊಂಡು ವಾಸಮಾಡುತ್ತಿರುವ ಕೂಲಿಕಾರ ಕುಟುಂಬಗಳಿಗೆ ಇದುವರೆಗೂ ಹಕ್ಕುಪತ್ರಗಳನ್ನು ನೀಡದೆ ಸತಾಯಿಸಲಾಗುತ್ತದೆ ಎಂದು ಟೀಕಿಸಿದರು.

ಕೆಲ ಸಮಯದ ನಂತರ ತಾಲೂಕ ಪಂಚಾಯತಿ ಕಾರ್ಯನಿರ್ವಹಣಾಧಿಕಾರಿ ಜಾನಕಿರಾಮ್, ಕುರುಗೋಡು ವಿಶೇಷ ತಹಶಿಲ್ದಾರ್ ಎಚ್. ನಂಜಪ್ಪ, ಕಂದಾಯ ಇಲಾಖೆಯ ಅಧಿಕಾರಿಗಳು, ಗ್ರಾಮ ಪಂಚಾಯತ್ ಸದಸ್ಯರು, ಗ್ರಾಮ ಪಂಚಾಯತ್ ಪಿಡಿಓ ಬಸವನಗೌಡ ಸ್ಥಳಕ್ಕೆ ಆಗಮಿಸಿ ಪ್ರತಿಭಟನಾಕಾರರಿಂದ ಮನವಿಯನ್ನು ಸ್ವೀಕರಿಸಿ ಬೇಡಿಕೆಗಳ ಕುರಿತು ಚರ್ಚಿಸಿದರು. ಗ್ರಾಮ ಪಂಚಾಯತ್ ಸಾಮಾನ್ಯ ಸಭೆ ನಡೆಸಿ ಅರ್ಹರಿಗೆ ನಿವೇಶನ ಹಂಚಲು ಕ್ರಮ ಕೈಗೊಳ್ಳಲಾಗುವುದು ಎಂದು ತಾಲೂಕಾ ಇಓ ಭರವಸೆ ನೀಡಿದರು. ನಂತರ ಧರಣಿಯನ್ನು ಹಿಂತೆಗೆದುಕೊಳ್ಳಲಾಯಿತು. ಇದಕ್ಕೂ ಮೊದಲು ಸಿಐಟಿಯು ಮುಖಂಡರಾದ ವಿಶ್ವನಾಥಸಾಮಿ ಮಾತನಾಡಿ ಕೂಲಿಕಾರರ ನ್ಯಾಯಸಮ್ಮತ ಹೋರಾಟಕ್ಕೆ ತಮ್ಮ ಸಂಘಟನೆಯ ಬೆಂಬಲ ವ್ಯಕ್ತಪಡಿಸಿದರು. ಕೂಲಿಕಾರ ಮುಖಂಡರಾದ ಓಬಳೇಶ, ರಾಮಲಿಂಗಪ್ಪ, ಕೆ.ನೀಲಪ್ಪ, ಶಂಕ್ರಪ್ಪ, ಈರಣ್ಣ, ಸೋಮಕ್ಕ, ಗಂಗಮ್ಮ, ಕ್ಯಾಂಪಿನ ನೀಲಮ್ಮ, ಮೆಟ್ಲಾಲ್ ಈರಣ್ಣ ಮೊದಲಾದವರು ಹೋರಾಟದ ನೇತೃತ್ವವಹಿಸಿದ್ದರು. 100ಕ್ಕೂ ಹೆಚ್ಚು ಕೂಲಿಕಾರರು ಭಾಗವಹಿಸಿದ್ದರು.

ವರದಿ : ಎಸ್.ಪಿ. ಮಹಮ್ಮದ್ ಖಾನ್

RNI No. KARKAN /2006/17926 Posted on ever
Licensed to Post without prepayment License No. V

# ತೃಣಮೂಲ ಕಾಂಗ್ರೆಸಿಗರಿಂದ ಪ್ರಜಾಸತ್ತೆಯ ಕಗ್ಗೊಲೆ ದೇಶಾದ್ಯಂತ ಪ್ರತಿಭಟನೆ




ಪ್ರಜಾಸತ್ತೆಯ ಉಳುವಿಗಾಗಿ, ತೃಣಮೂಲ ಕಾಂಗ್ರೆಸಿಗರ ಹಿಂಸಾಚಾರವನ್ನು ಎದುರಿಸಿ ಹೋರಾಡುತ್ತಿರುವ ಪಶ್ಚಿಮ ಬಂಗಾಳದ ಸಮರಶೀಲ ಜನಗಳಿಗೆ ದೇಶಾದ್ಯಂತ ಹೃದಯಸ್ಪರ್ಶಿ ಸೌಹಾರ್ದ ಬೆಂಬಲ ವ್ಯಕ್ತವಾಯಿತು. ಸಿಪಿಐ(ಎಂ) ಕೇಂದ್ರ ಸಮಿತಿಯ ಕರೆಯ ಮೇರೆಗೆ ಅಗಸ್ಟ್ 7 ರಂದು ಎಲ್ಲಾ ರಾಜ್ಯಗಳಲ್ಲಿ ಸಿಪಿಐ(ಎಂ) ಕಾರ್ಯಕರ್ತರು ಮಹಿಳೆಯರು, ಪುರುಷರು, ಕಾರ್ಮಿಕರು, ರೈತರು, ಯುವಜನರು, ವಿದ್ಯಾರ್ಥಿಗಳು ಅಪಾರ ಸಂಖ್ಯೆಯಲ್ಲಿ ಬೀದಿಗಿಳಿದು ಮಮತಾ ಬ್ಯಾನರ್ಜಿ ಸರ್ಕಾರ ಪ್ರಾಯೋಜಿತ ಕೊಲೆ, ಬೆದರಿಕೆ, ದಾಳಿ ದೌರ್ಜನ್ಯಗಳನ್ನು ತಕ್ಷಣ ನಿಲ್ಲಿಸುವಂತೆ ಆಗ್ರಹಿಸಿದರು.

ದೆಹಲಿಯ ಜಂತರ್ ಮಂತರ್‌ನಲ್ಲಿ ಏರ್ಪಡಿಸಲಾಗಿದ್ದ ಧರಣಿಯಲ್ಲಿ ಭಾಗವಹಿಸಿ ಸಿಪಿಐ(ಎಂ) ಪೊಲಿಟ್‌ಬ್ಯೂರೊ ಸದಸ್ಯರಾದ ಸೀತಾರಾಂ ಯೆಚೂರಿ, ಕೇಂದ್ರ ಸಮಿತಿ ಸದಸ್ಯ ಮತ್ತು ಎ.ಐ.ಕೆ.ಎಸ್. ಪ್ರಧಾನ ಕಾರ್ಯದರ್ಶಿ ಹನ್ನನ್ ಮುಲ್ಲಾ, ಕೇಂದ್ರ ಸಮಿತಿ ಸದಸ್ಯ ಮತ್ತು ದೆಹಲಿ ರಾಜ್ಯ ಸಮಿತಿ ಕಾರ್ಯದರ್ಶಿ ಪಿ.ಎಂ.ಎಸ್. ಗ್ರೇವಾಲ್, ದೆಹಲಿ ರಾಜ್ಯ ಸಿಐಟಿಯು ಅಧ್ಯಕ್ಷರು ಕೆ.ಎಂ. ತಿವಾರಿ, ಮತ್ತು ದೆಹಲಿ ಜನವಾದಿ ಮಹಿಳಾ ಸಂಘದ ಕಾರ್ಯನಿರತ ಅಧ್ಯಕ್ಷರು ಆಶಾ ಶರ್ಮಾ ಮಾತನಾಡಿದರು.

ಇತ್ತೀಚೆಗೆ ನಡೆದ ಪಂಚಾಯತ್ ಚುನಾವಣೆಯಲ್ಲಿ ತೃಣಮೂಲ ಕಾಂಗ್ರೆಸಿನ ಸಶಸ್ತ್ರ ಗ್ಯಾಂಗುಗಳು ಸಿಪಿಐ(ಎಂ) ಮತ್ತು ಎಡರಂಗದ ಕಾರ್ಯಕರ್ತರ ಮೇಲೆ ಭೀಕರವಾಗಿ ಹಲ್ಲೆ ಮಾಡಿದ್ದಾರೆ ಎಂದು ಭಾಷಣಕಾರರು ಆಕ್ರೋಶ ವ್ಯಕ್ತಪಡಿಸಿದರು. ಸುಮಾರು 6,000 ಸಿಪಿಐ(ಎಂ) ಮತ್ತು ಎಡರಂಗದ ಅಭ್ಯರ್ಥಿಗಳು ತಮ್ಮ ನಾಮಪತ್ರ ಸಲ್ಲಿಸದಂತೆ ತಡೆಯಲಾಗಿದೆ. ಜೂನ್ 3 ಮತ್ತು ಜುಲೈ 25 ರ ನಡುವೆ ಸಿಪಿಐ(ಎಂ) ನ 24 ಕಾರ್ಯಕರ್ತರನ್ನು ಕೊಲ್ಲಲಾಗಿದೆ. ಸಾವಿರಾರು ಸಿಪಿಐ(ಎಂ) ಬೆಂಬಲಿಗರ ಮನೆಗಳಿಗೆ ಬೆಂಕಿಹಚ್ಚಿದ್ದಾರೆ. ಎಡಪಕ್ಷಗಳ ಅಭ್ಯರ್ಥಿಗಳನ್ನು ಮತ್ತು ಅವರ ಏಜೆಂಟರನ್ನು ಮತಗಟ್ಟೆಗಳನ್ನು ಓಡಿಸಿದ್ದಾರೆ. 4,700 ಕ್ಕೂ ಹೆಚ್ಚು ಮತಗಟ್ಟೆಗಳನ್ನು ವಶಪಡಿಸಿಕೊಂಡು ಖೊಟ್ಟಿ ಮತದಾನ ಮಾಡಿದ್ದಾರೆ. ಪಶ್ಚಿಮ ಬಂಗಾಳದಲ್ಲಿ ಇಂತಹ ಫ್ಯಾಸಿಸ್ಟ್ ಪ್ರವೃತ್ತಿಗಳನ್ನು ಹಿಮ್ಮೆಟ್ಟಿಸದಿದ್ದರೆ ಪ್ರಜಾಸತ್ತೆಗೆ ದೇಶದ ಇತರ ಭಾಗಗಳಲ್ಲಿಯೂ ಅಪಾಯ ಬಂದೊದಗಲಿದೆ ಎಂದು ಭಾಷಣಕಾರರು ಎಚ್ಚರಿಸಿದರು.

**ಹಾಸನದಲ್ಲಿ ರಾಜ್ಯಮಟ್ಟದ ಪ್ರತಿಭಟನೆ :**

ಅಕ್ರಮ ವಿಧಾನಗಳ ಮೂಲಕ ಪಶ್ಚಿಮ ಬಂಗಾಳದಲ್ಲಿ ಅಧಿಕಾರಕ್ಕೆ ಬಂದಿರುವ ತೃಣಮೂಲ ಕಾಂಗ್ರೆಸ್ ಈಗ ಅಧಿಕಾರದಲ್ಲಿ ಮುಂದುವರೆಯಲು ಎಸಗುತ್ತಿರುವ




ಅದೇ ರೀತಿಯ ಪ್ರಜಾಪ್ರಭುತ್ವ ವಿರೋಧಿ ದುಷ್ಕೃತ್ಯಗಳನ್ನು ಖಂಡಿಸಿ ಹಮ್ಮಿಕೊಳ್ಳಲಾದ "ಪ್ರಜಾಪ್ರಭುತ್ವ ಉಳಿಸಿ" ಆಂದೋಲನದ ಅಂಗವಾಗಿ ಸಿಪಿಐ(ಎಂ) ರಾಜ್ಯ ಸಮಿತಿಯು ಹಾಸನದಲ್ಲಿ ಪ್ರತಿಭಟನೆಯನ್ನು ಏರ್ಪಡಿಸಿತ್ತು. ಹಾಸನ ಹೇಮಾವತಿ ಪ್ರತಿಮೆಯ ಮುಂದೆ ನಡೆದ ಧರಣಿಯ ಸ
ಮಾತನಾಡಿದ ಪಕ್ಷದ ರಾಜ್ಯ ಕಾ
ಜಿ.ವಿ. ಶ್ರೀರಾಮರೆಡ್ಡಿ "ಕ
ಮಾಡುವ ಮೂಲಕ ಸ
ಪಕ್ಷವನ್ನು ನಿರ್ನಾಮಗೊಳಿಸಲು
ಎಂದು ಹೇಳಿದರಲ್ಲದೆ ದೇಶದ
ಮಮತಾ ಬ್ಯಾನರ್ಜಿ ಪ್ರತಿನಿಧಿಸು
ವರ್ಗಗಳಿಂದ ಅಪಾಯವಿದೆಯೆ
ದುಡಿಯುವ ವರ್ಗಗಳಿಂದಲ್ಲ
ವ್ಯಾಖ್ಯಾನಿಸಿದರು.

ಪಕ್ಷದ ರಾಜ್ಯ ಕಾ
ಮಂಡಳಿ ಸದಸ್ಯರಾದ ವಿಜೆಕೆ
ಎಸ್. ವರಲಕ್ಷ್ಮಿ, ನಿತ್ಯಾನಂದ
ಮಾತನಾಡಿದರು. ಕಾರ್ಯದರ್ಶಿ
ಸದಸ್ಯರಾದ ಮಾರುತಿ ಮಾನ್ಪಡೆ
ಬಸವರಾಜು, ಎಸ್. ಪ್ರಸನ್ನ
ಉಪಸ್ಥಿತರಿದ್ದರು. ಸಿಪಿಐ(ಎಂ)
ಮುಖಂಡ ಧರ್ಮೇಶ್ ಸ್ವಾಗ
ನವೀನ್ ಕುಮಾರ್ ವಂದಿಸಿದರು.

## ಗಜೇಂದ್ರಗಡದಲ್ಲಿ ಮಮತಾ ಬ್ಯಾನರ್ಜಿ ಪ್ರತಿಕೃತಿ ದಹನ

ಪಶ್ಚಿಮ ಬಂಗಾಳ ಗ್ರಾಮ ಪಂಚಾಯಿತಿ ಚುನಾವಣೆಗಳಲ್ಲಿ ಸಿಪಿಐ(ಎಂ) ಕಾರ್ಯಕರ್ತರ ಮೇಲೆ ತೃಣಮೂಲ ಕಾಂಗ್ರೆಸಿಗರು ನಡೆಸಿದ ಹಿಂಸಾಚಾರ ಮತ್ತು ಕೊಲೆಗಳನ್ನು ಖಂಡಿಸಿ ಸಿಪಿಐ(ಎಂ) ಗಜೇಂದ್ರಗಡ ಶಾಖೆಗಳ ನೇತೃತ್ವದಲ್ಲಿ ನಗರದ ಕೆ.ಕೆ. ಸರ್ಕಲ್‌ನಲ್ಲಿ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಪ್ರತಿಕೃತಿ ದಹನಮಾಡಿ ಪ್ರತಿಭಟಿಸಲಾಯಿತು.

ಈ ಸಂದರ್ಭದಲ್ಲಿ ಪುರಸಭಾ ಸದಸ್ಯ, ಸಿಪಿಐ(ಎಂ) ಜಿಲ್ಲಾ ಮುಖಂಡ ಎಂ.ಎಸ್. ಹಡಪದ ಮಾತನಾಡಿ ಪಶ್ಚಿಮ ಬಂಗಾಳದ ಗ್ರಾಮ ಪಂಚಾಯತಿ ಚುನಾವಣೆಯಲ್ಲಿ ರಾಜ್ಯ ಪೊಲೀಸರ ಸಮ್ಮುಖದಲ್ಲೇ ಶಸ್ತ್ರದಾರಿ ತೃಣಮೂಲಿಗಳು ಮತಗಟ್ಟೆಗಳನ್ನು ವಶಪಡಿಸಿಕೊಂಡು, ಮತದಾರರು ಮತಗಟ್ಟೆಗೆ ಬರುವುದನ್ನು ತಡೆದು, ವಿರೋ ಧ ಪಕ್ಷಗಳ ಅಭ್ಯರ್ಥಿಗಳ ಮೇಲೆ ಮತ್ತು ಅವರ ಏಜೆಂಟರ ಮೇಲೆ ಮಾರಣಾಂತಿಕ ಹಲ್ಲೆ ಮಾಡಿ ಪ್ರಜಾಪ್ರಭುತ್ವದ ಕಗ್ಗೊಲೆ ಮಾಡಲಾಗಿದೆ ಎಂದು ಕಿಡಿಕಾರಿದರು. ಚು
ಆಯೋಗ ಮತ್ತು ಕೇಂದ್ರ ಸರ್ಕಾರ
ಕೊಂಡು ಕುಳಿತಿರುವುದನ್ನು ಖ
ಅವರು ಎಲ್ಲಾ ಪ್ರಜಾಪ್ರಭುತ್ವ ಪ್ರ




ಮಮತಾ ಬ್ಯಾನರ್ಜಿ ಸ
ಫ್ಯಾಸಿಸ್ಟ್ ಧೋರಣ
ಒಕ್ಕೊರಲಿನಿಂದ ವಿರೋಧ
ಎಂದು ಮನವಿ ಮಾಡಿದ

ಪಕ್ಷದ ಮುಖಂ
ಮಾರುತಿ ಚಿಟಗಿ,
ಶೀಲವಂತರ, ಬಾಲು ರಾ
ಮಾತನಾಡಿದರು.
ಚವ್ಹಾಣ್, ಎಚ್ಚರಪ್ಪ ಬ
ಮೈಬೂ ಹವಾಲ್ದಾರ್,
ರಾಠೋಡ್; ಫಯಾಜ್
ೞೀಟದ್, ಕಳಕೇಶ್ ಆ
ರಜಾಕ್ ಗೋಡೆಕಾರ್,
ಮಾಳೋತ್ತರ, ಮುತ್ತಣ್ಣ ರ
ಬಾಳಪ್ಪ ತಿಂತೋಜಿ
ಇತರರು ಭಾಗವಹಿಸಿದ್ದರು.

ವರದಿ : ಬಾಲು ರಾಠ

JANASHAKTHI KANNADA VARA PATRIKE: Printed by G.V.SRIRAMA REDDY, EMS Bhavana, No.37/A, 8th Cross, Mahalakshmi Layout, BANGALORE-560086Published by: G.V.SRIRAMA REDDY EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor NITHYANANDASWAMI EMS Bhavana, No.37/A, 8th Cross, Mahalakshmi Layout, BANGALORE-560086 Editor : NITHYANANDASWAMI